ಪರಿಹಾರ ಕೊಡುತ್ತಿಲ್ಲ. ಅತಿ ಮಹತ್ವವಾದ ಕ್ರಿಮಿನಲ್ ವಿಷಯವನ್ನು ಪ್ರಸ್ತಾಪ ಮಾಡದೇ ಮತ್ತೆ ಯಾವುದರ ಬಗ್ಗೆ ಪ್ರಸ್ತಾಪ ಮಾಡೋಣ? ಪ್ರತಿದಿನ ಅಂಗಡಿಗಳನ್ನು ಸುಡುತ್ತಿದ್ದಾರೆ. ಇದನ್ನು ಯಾರ ಮುಂದೆ ಹೋಗಿ ಹೇಳೋಣ? ಇದರ ಬಗ್ಗೆ ಮಂತ್ರಿಗಳು ಮೀಟಿಂಗ್ ಕರೆಯುತ್ತೇವೆಂದು ಹೇಳಿದರು. ಆದರೆ ಇನ್ನೂ ಸರ್ಕಾರ ಮೀಟಿಂಗ್ ಕರೆದಿಲ್ಲ. ನಾವು ಯಾರಿಗೆ ಹೇಳಬೇಕು?

(ಗೊಂದಲ)

ಶ್ರೀ ಕೆ.ಬಿ. ಕೋಳಿವಾಡ್ :– ರಾಣಿಬೆನ್ನೂರ್ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಲಂಬಾಣಿ ಮಹಿಳೆಗೆ ಅನ್ಯಾಯವಾಗಿದೆ.

ವಿಷಯ :– ಈ ಸದನ ಶ್ರೀ ಎಂ.ವೀರಪ್ಪಮೊಯಿಲಿ ಅವರ ಸಚಿವ ಸಂಪುಟದಲ್ಲಿ ಅವಿಶ್ವಾಸ ವ್ಯಕ್ತಮಾಡಿರುವ ಪ್ರಸ್ತಾವನೆ ಕುರಿತು. ಅವಿಶ್ವಾಸ ನಿರ್ಣಯದ ಮೇಲೆ ಮುಂದುವರೆದ ಚರ್ಚೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ಶಿಕಾರಿಪುರ) :– ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರಾದ ಶ್ರೀ ದೇಶಪಾಂಡೆಯವರು ಈ ಸರ್ಕಾರದ ಬಗ್ಗೆ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿ ಕಳೆದ ಮೂರು ಮುಕ್ಕಾಲು ವರ್ಷಗಳಲ್ಲಿ ಈ ಸರ್ಕಾರ ಯಾವ ರೀತಿ ಜನತೆಗೆ ದ್ರೋಹ ಮಾಡಿ ಜನಹಿತವನ್ನು ಮರೆತು ಕುರ್ಚಿಗಾಗಿ ಬಡಿದಾಟ ನಡೆಸಿದರು ಎನ್ನುವುದನ್ನು ಸವಿಸ್ತಾರವಾಗಿ ತಿಳಿಸಿದ್ದಾರೆ. ಯಾವ ರೀತಿ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದಂತಹ ಹಣವನ್ನು ಲೂಟಿ ಮಾಡಿರುವಂತಹ ಅನೇಕ ಹಗರಣಗಳನ್ನು ಬಯಲು ಮಾಡಿದ್ದಾರೆ ಎಂಬುದೆಲ್ಲವನ್ನು ಸವಿಸ್ತಾರವಾಗಿ ವಿರೋಧ ಪಕ್ಷದ ನಾಯಕರು ಹೇಳಿರುವಂತಹ ಈ ಸಂದರ್ಭದಲ್ಲಿ ಆ ಭಾಗದಲ್ಲಿರುವ ಭಿನ್ನಮತೀಯ ಶಾಸಕರಿಗೆ ಅದು ತೃಪ್ತಿ ತಂದಿದ್ದರೆ ಅವರ ಆತ್ಮಸಾಕ್ಷಿಗೆ ಅನುಸಾರವಾಗಿ ಈ ಒಂದು ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ಕೊಡುತ್ತೇವೆಂದು ಅವರೆಲ್ಲರೂ ಹೇಳಿದರೆ ನಾವು ಉಳಿದವರು ಕಂಠಶೋಷಣೆ ಮಾಡಿಕೊಳ್ಳುವಂತಹ ಅಗತ್ಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇವರಿಗೆ ದೇವರು ಸದ್ಬುದ್ಧಿ ಕೊಡಬಹುದು ಎನ್ನುವಂತಹ ನಿರೀಕ್ಷೆಯಲ್ಲಿದ್ದೇನೆ; ನೋಡೋಣ. ಜನರೂ ಸಹ ಇದನ್ನು ಎದುರು ನೋಡುತ್ತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್(ಲೋಕೋಪಯೋಗಿ ಸಚಿವರು) :–ಆ ನಂಬಿಕೆ, ಹುಚ್ಚು ನಿಮಗೆ ಇದೆಯೊ?

ಶ್ರೀ ಬಿ.ಎಸ್. ಯಡಿಯೂರಪ್ಪ :– ಈ ರಾಜ್ಯದ ಜನರ ಒಂದು ದೌರ್ಭಾಗ್ಯ; ಮಾನ್ಯ ಕೃಷ್ಣರವರು ನಗುತ್ತಿದ್ದಾರೆ. ಮಾನ್ಯ ರಂಗನಾಥ್‌ರವರು ಆ ಹುಚ್ಚು ಹಿಡಿದಿದೆಯಾ, ಆ ನಂಬಿಕೆ ಇದೆಯಾ ಎಂದು ನನ್ನನ್ನು ಕೇಳುತ್ತಿದ್ದಾರೆ. ನೋಡೋಣ, ಇನ್ನೂ ಇವತ್ತು, ನಾಳೆ ಸಮಯವಿದೆ, ನಾನು ನಿರೀಕ್ಷೆ ಮಾಡುತ್ತೇನೆ. ಏಕೆಂದರೆ ನಿಮ್ಮ ನಮ್ಮ ಉದ್ದೇಶ ಒಂದೇ ಇದೆ; ವ್ಯತ್ಯಾಸ ಏನೆಂದರೆ ನಿಮ್ಮಲ್ಲಿ ಮತ್ತೆಯಾರಾದರೂ ಮುಖ್ಯಮಂತ್ರಿಯಾಗಿ ಮಂತ್ರಿಮಂಡಲ ರಚನೆ ಮಾಡಬೇಕೆಂದು ಹೊರಟಿದ್ದೀರಿ. ನಾವು ಈ ಕಡೆ ಇರುವವರು, ಒಂದೇಸಾರಿ ವಿಧಾನ ಸಭೆಯನ್ನು ವಿಸರ್ಜನೆ ಮಾಡಿ ರಾಷ್ಟ್ರಪತಿಗಳ ಆಳ್ವಿಕೆಯನ್ನು ಜಾರಿಗೆ ತಂದು ಜನತಾ ನ್ಯಾಯಾಲಯದ ಮುಂದೆ ಹೋಗಿ ಜನಾಭಿಪ್ರಾಯ ಪಡೆಯೋಣವೆಂದು ಹೇಳುತ್ತಿದ್ದೇವೆ.

ಶ್ರೀ ಕೆ.ಹೆಚ್. ರಂಗನಾಥ್ :– ಹಾಗೇನಾದರೂ ನೀವು ಅಂದುಕೊಂಡಿದ್ದರೆ ದೇಶಪಾಂಡೆಯವರು ಅಥವಾ ಸಿಂಧ್ಯಾರವರು ಅಧಿಕಾರಕ್ಕೆ ಬರಬಹುದು; ನೀವು ಮಾತ್ರ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವುದೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಹಿರಿಯರಾದಂತಹ ರಂಗನಾಥರವರಿಗೆ ತಮ್ಮ ಮೂಲಕ ಕೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ; ಎಂದಾದರೂ ಸಹ ನಾನು ಈ ಸದನದಲ್ಲಿ ನಾವು ಅಧಿಕಾರಕ್ಕೆ ಬರುತ್ತೇವೆ, ಬರುವವರಿದ್ದೇವೆ ಎಂದು ಹೇಳಿದ್ದೇವೆಯೇ ಸ್ವಾಮಿ?

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ :- ತಾವು ಇದರ ಬಗ್ಗೆ ಕನಸನ್ನಾದರೂ ಇಟ್ಟುಕೊಂಡಿದ್ದೀರೋ ಇಲ್ಲವೋ ಎಂದು ಹೇಳಿ.

ಶ್ರೀ ಸಿ. ಬೈರೇಗೌಡ:- ಮಾನ್ಯ ಯಡಿಯೂರಪ್ಪನವರಿಗೆ ಮನವಿ, ನೀವು ಹಸಿ ಸುಳ್ಳು ಹೇಳುವುದಕ್ಕೆ ಬರಬೇಡಿ.

ಶ್ರೀ ಕೆ.ಹೆಚ್. ರಂಗನಾಥ್ :- ಮಾನ್ಯ ಯಡಿಯೂರಪ್ಪನವರೇ, ಮರದ ಕಾಲು ಕಟ್ಟಿಕೊಂಡು ಕುಣಿಯುತ್ತಾರೆ, ಅದನ್ನು ತಾವು ನೋಡಿದ್ದೀರಲ್ಲಾ; ಹಾಗೆ ನೀವು ಈಗ ಕುಣಿಯುತ್ತಿದ್ದೀರಿ; ನೀವು ಸುಮ್ಮನೆ ಕುಣಿಯುತ್ತಾ ಇಲ್ಲ. ಎಷ್ಟೋ ಪತ್ರಿಕೆಯಲ್ಲಿ ಆಗಲೇ ನೀವು ಬರೆಸಿಯಾಯಿತು. ಕೇವಲ ಇಲ್ಲಿ ಅಲ್ಲ, ಕೇಂದ್ರದಲ್ಲೇ ಬಂದು ಬಿಡುತ್ತೇವೆ ಎಂದು; ಇದೆಲ್ಲಾ ಆಗಿದೆ. ಆದರೆ ಏನಾದರೂ ಬಂದರೆ ನಾವು ಅಥವಾ ಅವರು ಬರಬಹುದು. ಅವರು ಒಂದು ಸಾರಿ ಬಂದಿದ್ದರು. 1983ರಲ್ಲಿ ನಿಮ್ಮ ಸಹಾಯ ತೆಗೆದುಕೊಂಡು ಬಂದರು. 1985ರಲ್ಲಿ ನಿಮ್ಮನ್ನೇ ನಾಶ ಮಾಡಿಬಿಟ್ಟರು. ನೀವು ಬರಲೇ ಇಲ್ಲ; ಒಗ್ಗರಣೆಗೂ ಕೂಡ ನೀವು ಆರಿಸಿ ಬರಲೇ ಇಲ್ಲ.

ಪ್ರೊ.ಎಂ.ಡಿ. ನಂಜುಂಡಸ್ವಾಮಿ :- ಮಾನ್ಯ ಅಧ್ಯಕ್ಷರೇ, ಹಿಂದೆ ನಾನು ಒಂದು ಮಾತನ್ನು ಹೇಳಿದ್ದೆ. ತಾವು ಅದನ್ನು ಒಪ್ಪುತ್ತೀರಿ ಎಂದು ಕಾಣುತ್ತದೆ. ವಿಂಧ್ಯಪರ್ವತದಿಂದ ಕೆಳಗಡೆ ಇದು ರಾಮನ ಬೆಲ್ಟೂ ಅಲ್ಲ; ರಾಮಕೃಷ್ಣನ ಬೆಲ್ಟೂ ಅಲ್ಲ. ಇದು ಶಿವನ ಬೆಲ್ಟ್. ಇದು ಶಿವನ ಬೆಲ್ಟ್ ಎಂಬುದನ್ನು ಒಪ್ಪುತ್ತೀರೋ.

ಶ್ರೀ ಕೆ.ಹೆಚ್. ರಂಗನಾಥ್ :- ಇದು ಹನುಮನ ನಾಡು.

ಪ್ರೊ.ಎಂ.ಡಿ. ನಂಜುಂಡಸ್ವಾಮಿ :- ಆಯಿತು, ಹನುಮನೂ ಕೂಡ ಶಿವನ ಭಕ್ತನೇ. ಇದು ರಾಮನ ಬೆಲ್ಟೂ ಅಲ್ಲ ರಾಮಕೃಷ್ಣನ ಬೆಲ್ಟೂ ಅಲ್ಲ; ಇದು ಶಿವನ ಬೆಲ್ಟ್.

ಶ್ರೀ ಬಿ.ಎಸ್. ಯಡಿಯೂರಪ್ಪ:- ನನಗೆ ಸನ್ಮಾನ್ಯ ಹಿರಿಯ ಸಚಿವರಾದಂತಹ ರಂಗನಾಥ್‌ರವರ ಮಾತನ್ನು ಕೇಳಿದಾಗ, ಒಂದು ಮಾತನ್ನು ಹೇಳಬೇಕಾಗುತ್ತದೆ. ನಿಮಗೆ ಏನಾದರೂ ರಾತ್ರಿ ಅಥವಾ ಬೆಳಗಿನ ಜಾವ ದುಃಸ್ವಪ್ನ ಬೀಳುವುದಕ್ಕೆ ಶುರುವಾಗಿದೆಯಾ? ಏನೆಂದರೆ, ಬಿಜೆಪಿ ಅಧಿಕಾರಕ್ಕೆ ಬಂದಹಾಗೆ, ನೀವೆಲ್ಲಾ ಅಧಿಕಾರ ಕಳೆದುಕೊಂಡು ಪರದೇಶಿಗಳು ಆದ ಹಾಗೆ; ಏಕೆ ನೀವು ಈ ಭ್ರಮೆಯಲ್ಲಿ, ಈ ಗೊಂದಲದಲ್ಲಿದ್ದೀರಿ ಎಂದು ಕೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ :- ಕೇಳಿ, ನಾವು ಅದನ್ನು ಕನಸು ಮನಸ್ಸಿನಲ್ಲೂ ಕೂಡ ವಿಚಾರ ಮಾಡಲಿಲ್ಲ. ಅಪ್ಪಿತಪ್ಪಿ ಕೂಡ ನಮಗೆ ಕನಸು ಬೀಳುವುದಿಲ್ಲ. ಏನಾದರೂ ಬಿದ್ದರೆ ಇವರದ್ದು ಬೀಳುತ್ತದೆ ಒಂದೊಂದು ಸಾರಿ. ಏಕೆಂದರೆ ಅವರು ಇಲ್ಲಿದ್ದರು, ನಾವು ಅಲ್ಲಿ ಇದ್ದೆವು ಈಗ ಇಲ್ಲಿ ಬಂದಿದ್ದೇವೆ, ಹೀಗೆ ಆಡುತ್ತದೆ ವಿನಃ ಆಟ ನಿಮ್ಮ ಕಡೆಗೆ ಬರುವುದೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಆದರೆ ಒಂದು ಭವಿಷ್ಯ ತಮಗೆ ಜ್ಞಾಪಕ ಇದೆ ಎಂದು ಕಾಣುತ್ತದೆ. ನಮ್ಮ ಜನತಾದಳದ ಅಧ್ಯಕ್ಷರಾದಂತಹ ಸನ್ಮಾನ್ಯ ದೇವೇಗೌಡರು, ಈ ಕಡೆ ಇರುವಂತಹ

ಮುಖಂಡರು,ಸನ್ಮಾನ್ಯ ಹೆಗಡೆಯವರೂ ಸಹ ಇವತ್ತು ಈ ರಾಜ್ಯದ ಜನರ ಹಿತದೃಷ್ಟಿಯಿಂದ ಒಂದು ಥರ್ಡ್ ಫೋರ್ಸ್‌ನ ಅಗತ್ಯ ಇದೆ, ಇಲ್ಲದಿದ್ದರೆ ಬಿಜೆಪಿ ಅಧಿಕಾರಕ್ಕೆ ಬಂದುಬಿಡುತ್ತದೆ ಎಂದು ಹೇಳಿದಂತಹ ಮಾತು. ಅಥವಾ ನೀವು ಹೈಕಮಾಂಡಿಗೆ ಬರೆದಿರುವಂತಹ ಬಹಿರಂಗ ಪತ್ರಗಳಲ್ಲಿ ಅಥವಾ ಅವರೇನಾದರೂ ಬೇಡಿಕೆಯನ್ನು ಇಟ್ಟಾಗ, ಅವರ ಮುಂದೆ ಹೋದಾಗ, ನೋಡಿ, ಕಾಂಗ್ರೆಸ್ ಉಳಿಯದೆ ಇದ್ದರೆ, ನಮ್ಮ ಕಚ್ಚಾಟ ನಿಲ್ಲದೆ ಇದ್ದರೆ, ನಾಳೆ ಬಿಜೆಪಿ ಅಧಿಕಾರಕ್ಕೆ ಬರುತ್ತದೆ, ಆದಕ್ಕಾದರೂ ನಾವು ಒಂದಾಗೋಣ ಎಂದು ಹೇಳಿದ್ದನ್ನು ಆತ್ಮಸಾಕ್ಷಿಯಾಗಿ ಒಪ್ಪಿಕೊಳ್ಳುತ್ತೀರಿ ತಾನೇ? ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಇವತ್ತು ಯಾರು ಅಧಿಕಾರಕ್ಕೆ ಬರಬೇಕು ಅದನ್ನು ನಾಡಿನ ಮಾಲೀಕರಿದ್ದಾರಲ್ಲಾ ಆ ಜನ ತೀರ್ಮಾನ ಮಾಡುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್ : – ಇವರು ಈ ಹೊಸ ಮನೆ ಕಟ್ಟಿಸಿದ ಮೇಲೆ ಬಹಳ ಹುಷಾರಾಗಿದ್ದಾರೆ, ಒಳಗಡೆಗೆ ಕಾಗೆ ಏನಾದರೂ ನುಗ್ಗಿಬಿಟ್ಟೀತು ಎಂದು ಹಾಗೇ ತಾವೆಲ್ಲಾದರೂ ನುಗ್ಗಿಬಿಟ್ಟೀರಿ, ಅವರು ಹುಷಾರಾಗಿಬಿಟ್ಟಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : –ನಾವು ಏನೂ ಮಾತನಾಡುವುದೇ ಇಲ್ಲ, ನೀವೇ ಎಲ್ಲಾ ಮಾತನಾಡುತ್ತಿದ್ದೀರಿ.

ಶ್ರೀ ಕೆ.ಹಚ್. ರಂಗನಾಥ್ : – ಈಗ ಇವರು ವ್ಯಾಜ್ಯ ತರುತ್ತಾರೆ ನಮಗೆ.

ಶ್ರೀ ವಾಟಾಳ್‌ನಾಗರಾಜ್ : – ಈಗ ನಿಮ್ಮ ವಾದ ನೋಡಿದರೆ ನೀವು ಜನತಾದಳದ ಪರ ವಕಾಲತ್ತು ವಹಿಸಿದ್ದೀರಿ ಎನ್ನುವ ತರಹವಾಗುತ್ತಿದೆ.

ಶ್ರೀ ಹೆಚ್. ಏಕಾಂತಯ್ಯ : – ಅವರ ಪರ ವಕಾಲತ್ತು ವಹಿಸಿದರೆ ಅವರ ಪರ ಮಾತನಾಡಿದಿರಿ ಎನ್ನುತ್ತೀರಿ; ಇವರ ಪರ ವಕಾಲತ್ತು ವಹಿಸಿದರೆ ನೀವು ಇವರ ಪರ ಎಂದು ಹೇಳುತ್ತೀರಿ, ನೀವು ಯಾರ ಪರ ವಕಾಲತ್ತು ವಹಿಸುತ್ತಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ: – ಈ ರಾಜ್ಯದ ಅತ್ಯಂತ ದೊಡ್ಡ ವಿಧಾನಸಭಾ ಕ್ಷೇತ್ರ ಯಲಹಂಕ ಎರಡನೇ ಕ್ಷೇತ್ರ. ಮೊನ್ನೆ ನಡೆದಂತಹ ಚುನಾವಣೆಯಲ್ಲಿ ನಿಮ್ಮ ಎಲ್ಲಾ ಮಂತ್ರಿಮಂಡಲದ ಸದಸ್ಯರು ಮನೆಮನೆಗೆ ಹೋಗಿ ಈ ರಾಜ್ಯದ ಮುಖ್ಯಮಂತ್ರಿ ಮೊದಲ ಬಾರಿಗೆ ಬಾಗಿಲು ತಟ್ಟಿ ಕಾಡಿ ಬೇಡಿ, ಹಣದ ಬಲ ಹೆಂಡದ ಬಲ ತೋಳಿನಬಲ ಇದೆಲ್ಲಾ ಆದಮೇಲೂ ಸಹ ವೋಟಿಂಗ್ ಸಂದರ್ಭದಲ್ಲಿ ಅನ್ಯಾಯ ಮಾಡಿ ಕೂದಲೆಳೆಯಷ್ಟರಲ್ಲಿ ತಾವು ಗೆದ್ದಿದ್ದೀರಿ. ಅದನ್ನು ತಾವು ಮರೆಯಬೇಡಿ ರಂಗನಾಥರವರೇ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಇವತ್ತಿನ ನಾಡಿನ ಜನ ತೀರ್ಮಾನ ಮಾಡುವಂತಹ....

ಶ್ರೀ ಎ. ಕೃಷ್ಣಪ್ಪ: – ನಾವು ಬಾಗಿಲು ಬಾಗಿಲಿಗೆ ಹೋಗಿ ಮತ ಕೇಳಿದ್ದೇವೆ. ನಿಮ್ಮಪಕ್ಷದ ಮುಖಂಡರೆಲ್ಲಾ ಬಂದು ಬೀದಿಬೀದಿಯಲ್ಲಿ ಭಾಷಣ ಮಾಡಿದರಲ್ಲಾ ಏಕೆ ಗೌರವ ಕೊಡಲಿಲ್ಲವೇನು? ಹೆಂಡ ಸಾರಾಯಿ, ಬ್ಯಾನರ್ ಪೋಸ್ಟರ್, ನಮ್ಮದ್ದಲ್ಲ ಜಾಸ್ತಿ ಇದ್ದಿದ್ದು. 15 ದಿವಸ ನಾನು ಸಹ ಆ ಕ್ಷೇತ್ರದಲ್ಲಿ ಮತ ಕೇಳುವುದಕ್ಕೆ ಹೋಗಿದ್ದೆ.

ಶ್ರೀ ವಾಟಾಳ್‌ನಾಗರಾಜ್ : – ಈಗ ಹೆಂಡ ಸಾರಾಯಿ ವಿಚಾರದಲ್ಲಿ ಇವರು ಮಾಡಿದ್ದನ್ನು ಒಪ್ಪಿಕೊಂಡು ಬಿಟ್ಟರು. ಒಪ್ಪಿಗೆ ಆಯಿತು ಈಗ. ಜಾಸ್ತಿ ಯಾರು ಮಾಡಿದರು, ಕಾಂಗ್ರೆಸ್ ಜಾಸ್ತಿ ಮಾಡಿತೋ. ಅಥವಾ ಬಿ.ಜೆ.ಪಿ. ಜಾಸ್ತಿ ಮಾಡಿತೋ ಎಂಬುದಕ್ಕೆ ಈಗ ತನಿಖೆಯಾಗಬೇಕು.

ಶ್ರೀ ಎ. ಕೃಷ್ಣಪ್ಪ: -ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿರುವುದೆಲ್ಲಾ ನಡೆದಿರುವುದು ಅವರ ಪಕ್ಷದಿಂದಲೇ, ನಮ್ಮ ಪಕ್ಷದಿಂದಲ್ಲ.

ಶ್ರೀ ವಾಟಾಳ್‌ನಾಗರಾಜ್: - ನೀವು ಒಪ್ಪಿಕೊಂಡಿರಲ್ಲಾ, ಅವರು ಎರಡು ಬಾಟಲ್ ಕೊಟ್ಟರೆ ನೀವು ಒಂದು ಬಾಟಲ್ ಎಂದು ಒಪ್ಪಿಕೊಂಡಿರಲ್ಲಾ.

ಶ್ರೀ ಎ. ಕೃಷ್ಣಪ್ಪ: - ಖಂಡಿತವಾಗಿಯೂ ನಾನು ಒಪ್ಪಿಕೊಳ್ಳಲಿಲ್ಲ. ಬ್ಯಾನರ್‌ಗೆ, ಪೋಸ್ಟರ್‌ಗೆ ಇನ್ನಿತರ ಖರ್ಚುಗಳಿಗೆ ದುಡ್ಡು ಎಂದು ಹೇಳಿದರಲ್ಲಾ, ಅದೆಲ್ಲಾ ಜಾಸ್ತಿಯಾಗಿ ಅವರೇ ಕೊಟ್ಟಿರುವುದು, ತನಿಖೆ ಬೇಕಾದರೆ ಮಾಡಿಸಲಿ, ಸ್ಪಷ್ಟವಾಗಿ ಗೊತ್ತಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: - ಇದು ಇದ್ದದ್ದೇ; ನೀವು ಅದೇ ರೀತಿ ಭ್ರಮೆಯಲ್ಲಿ ಮಲಗಿರಬೇಕು. ನನ್ನ ಅಪೇಕ್ಷೆಯೂ ಅದೇ, ಈ ನಾಡಿನ ಜನರ ಅಪೇಕ್ಷೆಯೂ ಅದೇ. ಏತಕ್ಕೆಂದರೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದು 47 ವರ್ಷಗಳು ಕಳೆಯುತ್ತಾ ಬಂದಿದೆ. ನಿಮ್ಮ ಆಯಸ್ಸು ಮುಗಿಯುವಂಥ ಕಾಲ ಸನ್ನಿಹಿತವಾಗುತ್ತಿದೆ. ನಿಮ್ಮ ಒಡಿದಾಟ, ನಿಮ್ಮ ಕಚ್ಚಾಟವನ್ನು ಜನ ನೋಡುತ್ತಿದ್ದಾರೆ ಒಂದು ರೀತಿ ನಾಯಕರು ಇಲ್ಲದೆ ತಬ್ಬಲಿಗಳಾಗಿ ಅಲೆಯುವಂಥ ಒಂದು ದುಸ್ಥಿತಿ ಇವತ್ತು ನಿಮಗೆ ಬಂದಿದೆ. ನೀವು ಮರೆಯಬೇಡಿ ಸ್ನೇಹಿತರೇ, ಏತಕ್ಕೆಂದರೆ ನಾನು ಒಂದು ಮಾತನ್ನು ಹೇಳುತ್ತೇನೆ, ಈ ಸದನದಲ್ಲಿ ರೆಕಾರ್ಡ್‌ನಲ್ಲಿ ಇರಲಿ. ಬದುಕಿರುವವರೆಗೆ ಈ ನಾಡಿನ ಜನ ನಮ್ಮನ್ನು ವಿರೋಧಪಕ್ಷದಲ್ಲಿಯೇ ಕುಳಿತುಕೊಳ್ಳಬೇಕೆಂದು ಆಶೀರ್ವಾದ ಮಾಡಿ ಇಲ್ಲಿಯೇ ಕೂರಿಸಿದರೆ ನಾವು ಇದು ಒಂದು ಪವಿತ್ರವಾದಂಥ ಕೆಲಸವೆಂದು ತಿಳಿದುಕೊಂಡು ಬದುಕಿರುವವರೆಗೆ ವಿರೋಧಪಕ್ಷದಲ್ಲಿಯೇ ಕುಳಿತುಕೊಂಡು ಕೆಲಸ ಮಾಡಲಿಕ್ಕೆ ನಾವು ಸಿದ್ಧರಾಗಿದ್ದೇವೆ.

ಶ್ರೀ ಎ. ಕೃಷ್ಣಪ್ಪ: - ಅದೂ ಸಾಧ್ಯವಾಗುವುದಿಲ್ಲ. ವಿರೋಧಪಕ್ಷದವರು ಎಂದರೆ ಜನತಾದಳ. ನೀವು ಇಬ್ಬರೆ ಬಂದಿರುತ್ತೀರಿ; ಅಷ್ಟೇ ಇರಬೇಕಾಗುತ್ತದೆ. ಈ ಸಲ ಅಕಸ್ಮಾತ್ 4 ಜನ ಬಂದಿರಬಹುದು.

ಶ್ರೀ ಬಿ.ಎಸ್ ಯಡಿಯೂರಪ್ಪ: - ನಿಮಗೆ ಕೆಟ್ಟಮೇಲಾದರೂ ಬುದ್ಧಿ ಬರುತ್ತದೆಂದು ತಿಳಿದುಕೊಂಡಿದ್ದೆ. ಈ ದೇಶದ ನಾಲ್ಕು ರಾಜ್ಯಗಳಲ್ಲಿ ಭಾರತೀಯ ಜನತಾಪಾರ್ಟಿಯ ಸರ್ಕಾರ ಬಂದಿದೆ. ಏನಾಯಿತು ನಿಮ್ಮ ಸ್ಥಿತಿ.

ಶ್ರೀ ಎ. ಕೃಷ್ಣಪ್ಪ: - ಕರ್ನಾಟಕದಲ್ಲಿ ಬಂದಿದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ: - ನೀವು ಮಾತನಾಡಬೇಕಾದರೆ ದಿನವೆಲ್ಲ ಮಾತನಾಡಿ; ನಾವು ಇವತ್ತು ನಿಶ್ಚಯ ಮಾಡಿದ್ದೇವೆ, ನೀವು ಏನೇನು ಮಾತನಾಡುತ್ತೀರಿ, ಅದೆಲ್ಲಾ ರೆಕಾರ್ಡ್‌ಗೆ ಹೋಗಲೇಬೇಕು. ಏತಕ್ಕೆಂದರೆ ನಿಮಗೆ ಇನ್ನು ಅವಕಾಶವೇ ಸಿಗುವುದಿಲ್ಲ. ಈ ಒಂದು ಅವಧಿ ಮುಗಿದ ಮೇಲೆ ನಿಮಗೆ ಅಲ್ಲಿ ಕುಳಿತುಕೊಳ್ಳುವ ಅವಕಾಶವೇ ಸಿಗುವುದಿಲ್ಲ. ಏತಕ್ಕೆಂದರೆ ನೋಡಿ, ಡಾಕ್ಟರ್ ಹೇಳುತ್ತಾರೆ, ಸಾಯುವ ಕೊನೇಕಾಲದಲ್ಲಿ ಸಂಬಂಧೀಕರನ್ನೆಲ್ಲಾ ಕರೆಸುತ್ತಾರೆ, ಡಾಕ್ಟರ್ ಅವನಿಗೆ ಕೊಡಬೇಕಾದ ಎಲ್ಲಾ ಟ್ರೀಟ್‌ಮೆಂಟನ್ನೆಲ್ಲಾ ಕೊಟ್ಟು ಮುಗಿದಮೇಲೆ ಈ ಕಾಯಿಲೆ ವಾಸಿಯಾಗುವುದಿಲ್ಲ, ಸಾಯುವುದು ನಿಶ್ಚಿತವೆಂದು ಗೊತ್ತಾದಮೇಲೆ, ಅವರಿಗೆ ಏನೆಲ್ಲಾ ಬೇಕು ಅದೆಲ್ಲವನ್ನೂ ಕೊಟ್ಟುಬಿಡಿ, ರೋಗಿಯ ಆಸೆಯೆಲ್ಲಾ ಪೂರೈಸಿಬಿಡಲಿ, ಏತಕ್ಕೆಂದರೆ ಉಳಿಯುವ ಸಾಧ್ಯತೆ ಇಲ್ಲ ಎನ್ನುವ ಹಾಗೆ ತಾವು ಉಳಿಯುವುದಿಲ್ಲವೆನ್ನುವ ಸಂದರ್ಭದಲ್ಲಿ, ತಾನೇ ಈ ರೀತಿಯಾದ

ಬಡಿದಾಟ ಶುರುವಾಗಿರುವುದು.

ಶ್ರೀ ಎ. ಕೃಷ್ಣಪ್ಪ:- ಇವರ ಟ್ರಾಕ್, ಮಾತನಾಡುವುದಕ್ಕೆ ತಮ್ಮನ್ನು ಬಿಟ್ಟುಬಿಡಿ; ನೀವು ಸುಮ್ಮನೆ ಇರಿ ಎಂದು ಹೇಳುತ್ತಾರೆ. ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ. ನೀವು ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸ್ವಾಮಿ ಮೂರು ಮುಕ್ಕಾಲು ವರ್ಷದಲ್ಲಿ ಮೂರು ಜನ ಮುಖ್ಯಮಂತ್ರಿಗಳಾದರು. ಒಬ್ಬರು ಉಪಮುಖ್ಯಮಂತ್ರಿಗಳಾದರು. 92 ಜನ ಮಂತ್ರಿಗಳಾದರು. ಇನ್ನೂ ನಿಮಗೆ ಆಸೆ ತೀರಲಿಲ್ಲವೇ? ನಾನು ಹೇಳುತ್ತೇನೆ, ನಿಮ್ಮ ಕಾಂಗ್ರೆಸ್ ಸಿ.ಪಿ.ಎಲ್, ಮೀಟಿಂಗ್‌ನಲ್ಲಿ ಒಂದು ತೀರ್ಮಾನಕ್ಕೆ ಬನ್ನಿ. ನಾನು ಹೇಳುವುದೇನೆಂದರೆ, ಈ ರಾಜಕೀಯ ಅಸ್ಥಿರತೆ ಹೋಗಬೇಕೆಂದಿದ್ದರೆ, ಈ ಕಾಂಗ್ರೆಸ್ ಪಕ್ಷ ಇನ್ನು ಸ್ವಲ್ಪ ದಿವಸ ಉಳಿಯಬೇಕೆಂದಿದ್ದರೆ, ನಿಮಗೆ ಜನ ಆಶೀರ್ವಾದಮಾಡಿ ಕಳುಹಿಸಿ ನೀವು ಐದು ವರ್ಷ ಅಧಿಕಾರದಲ್ಲಿ ಉಳಿಯಬೇಕೆಂದು ಅಪೇಕ್ಷೆ ಇದ್ದರೆ ಒಂದು ತೀರ್ಮಾನ ಮಾಡಿ. ಇನ್ನು ಒಂದಿಬ್ಬರು ಇಲ್ಲವೇ ಮೂರು ಜನ ನನಗೆ ಗೊತ್ತಿರುವ ಪ್ರಕಾರ ಮುಖ್ಯಮಂತ್ರಿಗಳಾಗಬೇಕೆಂದು ಇದ್ದೀರಿ. ಹೇಗೂ ಸುಮಾರು ಇನ್ನೂ ಒಂದು, ಒಂದೂ ಕಾಲುವರ್ಷ ಟೈಮ್ ಇದೆ. 186-188 ಜನರಲ್ಲಿ ಈಗಾಗಲೇ 92 ಜನ ಆಗಿಹೋಗಿದ್ದಾರೆ. ಇನ್ನು ಅರ್ಧಭಾಗದ ಜನರು ಮಾತ್ರ ಏನು ಪಾಪ ಮಾಡಿದ್ದಾರೆ.ಅದಕ್ಕೋಸ್ಕರ ಇನ್ನು ಉಳಿದಿರುವ ಒಂದೂಕಾಲು ವರ್ಷದಲ್ಲಿ 4-4 ತಿಂಗಳಿಗೆ ಒಬ್ಬರು ಮುಖ್ಯಮಂತ್ರಿಗಳು, ಯಾರೋ ಅಳಿದುಳಿದಂಥ ಸುಮಾರು 99 ಜನರೇನಿದ್ದಾರೆ ಅವರನ್ನು ಮಂತ್ರಿಗಳೆಂದು ಮಾಡಿಬಿಟ್ಟರೆ ಈ ಕಚ್ಚಾಟ ಏತಕ್ಕೆ ಬರುತ್ತದೆ. ಇದರಲ್ಲಿ ಜನಹಿತ ಇದೆಯೇ ಸ್ವಾಮಿ? ಪ್ರಾಮಾಣಿಕವಾಗಿ ಹೇಳಿ. ಈ ಬಡಿದಾಟದಲ್ಲಿ ಈ ನಾಡಿನ ಜನರ ಹಿತವನ್ನು ಇಟ್ಟುಕೊಂಡು ಹೋರಾಟ ಮಾಡುತ್ತಿದ್ದೀರಾ? ಈಗ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ; ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿದೆ. ಸರ್ಕಾರದ ಬೊಕ್ಕಸಕ್ಕೆ ಬರಬೇಕಾದಂಥ ಹಣ ಸೋರಿ ಹೋಗುತ್ತಿದೆ. ಕೊಟ್ಟಂತಹ ಆಶ್ವಾಸನೆಗಳು ಈಡೇರಿಸಲಿಲ್ಲ. ಇದರಿಂದಾಗಿ ಕಾಂಗ್ರೆಸ್ ಪಕ್ಷಕ್ಕೆ ಕಳಂಕ ಬರುವಂಥ ಪರಿಸ್ಥಿತಿ ಬಂದಿದೆ. ಚುನಾಯಿತ ಪ್ರತಿನಿಧಿಯಾಗಿ ನಮ್ಮ ಕ್ಷೇತ್ರಗಳಿಗೆ ಹೋಗುವ ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳು ಆಗಿಲ್ಲ. ಅದಕ್ಕಾಗಿ ತಾವು ರಾಜೀನಾಮೆಯನ್ನು ಕೊಡಬೇಕೆಂದು ಕೇಳಿದರೆ ಜನರು ಶಹಭಾಸ್ ಎಂದು ಹೇಳುತ್ತಾರೆ. ನಾವು ಕೇವಲ ನಾಲ್ಕು ಜನರಿದ್ದೇವೆ. ನಾವು ಹೇಳಿದರೆ ನೀವು ಯಾವುದನ್ನೂ ಗಮನಕ್ಕೆ ತೆಗೆದುಕೊಳ್ಳುವುದಿಲ್ಲವೆನ್ನುವುದು ನಮಗೆ ಗೊತ್ತಿದೆ. ನಿಮಗೆ ನಮ್ಮ ಬುದ್ಧಿವಾದ ಹಿಡಿಯುವುದಿಲ್ಲ. ಅದು ನಮಗೆ ಚೆನ್ನಾಗಿ ಗೊತ್ತಿದೆ. ಆದರೆ ಒಂದು ಮಾತ್ರ ಮರೆಯಬೇಡಿ. ಇದೇ ಸದನದಲ್ಲಿ ಈ ರಾಜ್ಯದ ಇತಿಹಾಸದಲ್ಲಿ ಹಿಂದೆಂದೂ ಆಗದಂಥ ಘಟನೆಗಳು ನಡೆದುಹೋಯಿತು. ಸ್ವಾಮಿ, ನಮ್ಮ ವಿರೋಧಪಕ್ಷದ ಮಾಜಿ ನಾಯಕರಾದ ಚಂದ್ರೇಗೌಡರು 3-9-91ರಂದು ಒಂದು ಅವಿಶ್ವಾಸ ನಿರ್ಣಯವನ್ನು ಬಂಗಾರಪ್ಪನವರ ಸರ್ಕಾರದ ವಿರುದ್ಧ ಮಂಡನೆ ಮಾಡಿದರು. ಅವತ್ತು ಚಂದ್ರೇಗೌಡರು ವಿರೋಧಪಕ್ಷದ ನಾಯಕರು, ಬಂಗಾರಪ್ಪನವರು ಮುಖ್ಯ ಮಂತ್ರಿಗಳು. ಎರಡೇ ವರ್ಷದಲ್ಲಿ ವೀರಪ್ಪಮೊಯಿಲಿಯವರು ಮುಖ್ಯ ಮಂತ್ರಿಗಳು, ವಿರೋಧ ಪಕ್ಷದ ನಾಯಕರಾಗಿ ದೇಶಪಾಂಡೆಯವರು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುತ್ತಿದ್ದಾರೆ. ಅವತ್ತು ಬಂಗಾರಪ್ಪನವರನ್ನು ಅಧಿಕಾರದಿಂದ ಇಳಿಯಬೇಕೆಂದು ಇದೇ ಕೂಗಾಟ, ಇದೇ ಚೀರಾಟ ತಾವು ಮಾಡಿದಿರಿ. ನೀವು ಅಂದುಕೊಂಡಿದ್ದೀರಿ, ನಾವು ಬಂಗಾರಪ್ಪನವರನ್ನು ಇಳಿಸಿದೆವು ಎಂದು. ಸತ್ಯಸಂಗತಿ ನಿಮಗೆ ಗೊತ್ತಿಲ್ಲ. ಈ ನಾಡಿನ ಜನಕ್ಕೆ ಈ ದೇಶದ ಜನಕ್ಕೆ ದೇಶದ ಇತಿಹಾಸದಲ್ಲಿಯೇ ಇಂಥ ಘಟನೆ

ನಡೆದಿಲ್ಲವೆಂದು ಒಂದು ಚಾರ್ಜ್‌ಷೀಟ್ ತಯಾರಿಸಿ ಯಾವ ರೀತಿ ಸರ್ಕಾರಕ್ಕೆ ಬರಬೇಕಾದ ಕೋಟ್ಯಾಂತರ ರೂಪಾಯಿ ಲೂಟಿ ಮಾಡುವಂಥ ಹಗಲು ದರೋಡೆ ನಡೆಯಿತು ಎಂದು ರಾಜ್ಯದ ಉದ್ದಗಲಕ್ಕೂ ನಾವು ಹೋದ ಪರಿಣಾಮ ಏನೆಂಬುದು ನಿಮಗೆ ಗೊತ್ತಿದೆ. ಸ್ವತಃ ಭಾರತೀಯ ಜನತಾ ಪಕ್ಷದ ನಿಯೋಗ ಪ್ರಧಾನಿಯವರನ್ನು, ರಾಷ್ಟ್ರಪತಿಯವರನ್ನು ಭೇಟಿ ಮಾಡಿ ಈ ಚಾರ್ಜ್‌ಷೀಟ್ ಕೊಟ್ಟಿತು. ಸುಮಾರು 38 ಹಗಲು ದರೋಡೆಗಳನ್ನು ಕುರಿತು ಸರ್ಕಾರದ ಬೊಕ್ಕಸದಿಂದ ಹಣ ಲೂಟಿ ಮಾಡಿದಂಥ ಚಾರ್ಜ್‌ಷೀಟ್ ಕೊಟ್ಟೆವು. ಇದುವರೆಗೆ ಈ ಸದನದಲ್ಲಿ ಯಾರಾದರೂ ಒಬ್ಬರು ನಿಂತುಕೊಂಡು ಇದನ್ನು ವಿರೋಧ ಮಾಡಿದ್ದೀರಾ? ಇದು ಅಸತ್ಯವಾದುದು ಎಂದು ಹೇಳಿದ್ದೀರಾ? ಅದರ ಬದಲಿಗೆ ನೀವು ಏನು ಪ್ರಧಾನಿಯವರಿಗೆ ಕೊಟ್ಟಿದ್ದೀರಿ ಚಾರ್ಜ್‌ಷೀಟ್ ಅವತ್ತಿನ ಮುಖ್ಯ ಮಂತ್ರಿಗಳಾದ ಬಂಗಾರಪ್ಪನವರ ವಿರುದ್ಧ, ಏನೇನು ಆಪಾದನೆ ಮಾಡಿದ್ದೀರಿ, ಅದರಲ್ಲಿ ಯಾವುದಾದರೂ ಒಂದು ಅಂಶ ಈ ಚಾರ್ಜ್‌ಷೀಟ್‌ನಲ್ಲಿ ಇಲ್ಲದಿರುವ ಅಂಶವನ್ನು ಸೇರಿಸಿದ್ದೇವೆಯೇ ಎಂಬುದನ್ನು ತೋರಿಸಿ ವೆರಿಫೈ ಮಾಡಿ ಹೇಳಿ. ನಾನು ಏತಕ್ಕೆ ಈ ಮಾತು ಹೇಳುತ್ತಿದ್ದೇನೆಂದರೆ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಪ್ರಾಮಾಣಿಕವಾಗಿ, ನಮ್ಮಲ್ಲಿ ಬೇರೆಬೇರೆ ಕಾರಣಕ್ಕೆ ಭಿನ್ನಾಭಿಪ್ರಾಯ ಇರಬಹುದು, ಆದರೆ ನಮ್ಮ ಶಕ್ತಿ ಮೀರಿ ನಮ್ಮ ಕರ್ತವ್ಯವನ್ನು ಮಾಡುತ್ತಿದ್ದೇವೆ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ಅಧಿಕಾರಕ್ಕೆ ಬರಬಹುದು. ಆದರೆ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಈ ಸರ್ಕಾರ ಮಾಡುವ ಜನ ವಿರೋಧಿ ನೀತಿಯನ್ನು ವಿರೋಧಿಸಿ ಜನಜಾಗೃತಿ ಮಾಡುವಂಥ ನಮ್ಮ ಕರ್ತವ್ಯವನ್ನು ಸದನದೊಳಗೆ ಮತ್ತು ಹೊರಗೆ ಮಾಡದಿದ್ದರೆ ಜನರು ನಮ್ಮನ್ನು ಕ್ಷಮಿಸುವುದಿಲ್ಲ. ಅದಕ್ಕಾಗಿ ನಾನು ಇಲ್ಲಿ ನಿಂತಿರುವುದು. ದಯವಿಟ್ಟು ನಿಮ್ಮ ಉಳಿವಿನ ದೃಷ್ಟಿಯಿಂದ ನಿಮ್ಮ ಕಾಂಗ್ರೆಸ್ಸಿನ ಉಳಿವಿನ ದೃಷ್ಟಿಯಿಂದ ನಾವು ಹೇಳುವ ಮಾತನ್ನು ಗಮನಿಸಿ ಆಗಿರುವ ಕೊರತೆಗಳನ್ನು ತಿದ್ದಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅದು ಯಾವಾಗ ಸಾಧ್ಯ? ಅದು ಯಾವಾಗ ಸಾಧ್ಯವಾಗುತ್ತದೆಂದರೆ ಕೇವಲ ನಿಮ್ಮ ಕುರ್ಚಿಗೋಸ್ಕರ ನಿಮ್ಮ ಸ್ಥಾನಮಾನಕ್ಕೋಸ್ಕರ ಒಬ್ಬ ಮುಖ್ಯಮಂತ್ರಿಯನ್ನು ಇಳಿಸಿ ಇನ್ನೊಬ್ಬರು ಮುಖ್ಯಮಂತ್ರಿಯಾದರೆ ಜನಹಿತ ಮಾಡಿದಂತಾಗುವುದಿಲ್ಲ. ಕಳೆದ 46-47 ವರ್ಷಗಳಲ್ಲಿ ಕಾಂಗ್ರೆಸ್ ಸಂಸ್ಕೃತಿ ಏನಿದೆಯೆಂದರೆ, ಕುರ್ಚಿಗಾಗಿ, ಸ್ಥಾನಮಾನಕ್ಕಾಗಿ ಜನಹಿತವನ್ನು ಮರೆತು ಜನತಾ ಪ್ರತಿನಿಧಿಗಳ ಕರ್ತವ್ಯ ಮರೆತು ಏನು ಕೆಲಸ ಮಾಡಿಕೊಂಡು ಬಂದಿರಿ ಅದರ ಪರಿಣಾಮದಿಂದ ದೇಶದಲ್ಲಿ ಕಾಂಗ್ರೆಸ್ ಸರ್ವನಾಶವಾಗುತ್ತದೆಂಬುದನ್ನು ಮರೆಯಬೇಡಿ. ಹೇಗಿತ್ತು ಸ್ವಾಮಿ, ಈ ದೇಶದ ಪರಿಸ್ಥಿತಿ? ಅವತ್ತಿನ ಕಾಂಗ್ರೆಸ್ ಇದೆಯಲ್ಲಾ, ಸ್ವಾತಂತ್ರ್ಯ ಪೂರ್ವದ ಕಾಂಗ್ರೆಸ್ ಇದೆಯಲ್ಲಾ ಅದು ಈ ದೇಶದ ಎಲ್ಲಾ ಜನರು ಗೌರವ ಕೊಡಬೇಕಾದಂಥ ಪಕ್ಷವಾಗಿತ್ತು ಅದು ರಾಜಕೀಯ ಪಕ್ಷವಾಗಿರಲಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯಕ್ಕೋಸ್ಕರ ಕಟ್ಟಿದ್ದ ದೊಡ್ಡ ಸಂಸ್ಥೆ ಅದು. ಅದಕ್ಕಾಗಿ ಅವತ್ತು ಹೇಳಿದರು, ಈ ದೇಶಕ್ಕೆ ಸ್ವಾತಂತ್ರ್ಯಗಳಿಸಿಕೊಟ್ಟ ಮಹಾತ್ಮಗಾಂಧಿ ದಯವಿಟ್ಟು ಕಾಂಗ್ರೆಸ್ಸನ್ನು ವಿಸರ್ಜನೆ ಮಾಡಿ ಎಂದು ಏಕೆಂದರೆ ನಾವು ಈ ದೇಶಕ್ಕೆ ಸ್ವಾತಂತ್ರ್ಯಗಳಿಸಿ ಕೊಟ್ಟೆವು ಎಂದು ಎಲ್ಲಿ ಈ ದೇಶದ ಜನರ ಆಸೆ ಅಪೇಕ್ಷೆಗಳನ್ನು ಪೂರೈಸದೆ ಕುರ್ಚಿಗಾಗಿ ಬಡಿದಾಡಿ ಅನ್ಯಾಯ ಮಾಡುತ್ತಾರೆಂಬ ಭಯದಿಂದ ನಿಮಗೆ ಅವರು ಬುದ್ಧಿವಾದ ಹೇಳಿದರು. ಆ ಬುದ್ಧಿವಾದವನ್ನು ನೀವು ಕೇಳಲಿಲ್ಲ. ನೀವು ಬೇರೆ ಪಕ್ಷ ಕಟ್ಟಿಕೊಳ್ಳಬಹುದಾಗಿತ್ತು. ಆದರೆ ನೀವು ಏನು ಮಾಡಿದಿರಿ? ನಾವೇ ಈ ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟೆವು ಎಂದು ಅದರ ಒಂದು ಲಾಭವನ್ನು ಪಡೆದುಕೊಂಡದ್ದು

ಯಾವುದೋ ನಾಮಬಲದಿಂದ ಎಂಬುದನ್ನು ಮರೆಯಬೇಡಿ. ಆ ಕಡೆ ಕುಳಿತಿರುವವರಲ್ಲಿ ಕೆಲವರು ಇರಬಹುದು ಸ್ವಾಮಿ; ನಿಮ್ಮ ಸ್ವಶಕ್ತಿಯಿಂದ ನಿಮ್ಮ ಕ್ಷೇತ್ರಕ್ಕೆ ಹೋಗಿ ನಾನು ಚುನಾವಣೆಯಲ್ಲಿ ಗೆದ್ದು ವಾಪಸ್ಸು ಬರುತ್ತೇನೆಂದು ಹೇಳುವವರು ಎಷ್ಟು ಜನರಿದ್ದೀರಿ, ಕೈಯೆತ್ತಿ ನೋಡೋಣ. ಇದುವರೆಗೆ ನಡೆದಂಥ ಚುನಾವಣೆಗಳು ಅಂದರೆ ಹೈಕಮಾಂಡ್ ಮನ ಒಲಿಸಿ, ಡೆಲ್ಲಿ ದೊರೆಗಳನ್ನು ಮನಒಲಿಸಿ ಸೀಟ್ ತೆಗೆದುಕೊಂಡು ಬಂದರು ಎಂಬುದು ಜನರಿಗೂ ಗೊತ್ತು. ಕಾಂಗ್ರೆಸ್ ಸೀಟು ಸಿಕ್ಕಿತು ಎಂದರೆ ಗೆದ್ದ ಹಾಗೆ, ಅದು ಲೋಕ ಸಭೆ ಚುನಾವಣೆ ಇರಬಹುದು, ವಿಧಾನಸಭೆ ಚುನಾವಣೆ ಇರಬಹುದು; ಆದರೆ ಇವತ್ತು ಸ್ವಾತಂತ್ರ್ಯ ಬಂದು 47 ವರ್ಷಗಳ ನಂತರ ಈ ನಿಮ್ಮ ಪಕ್ಷಕ್ಕೆ ನಾಯಕರು ಇಲ್ಲದೆ ತಬ್ಬಲಿ ಆಗುವ ಪರಿಸ್ಥಿತಿ ಒದಗಿಬಂದಿದೆ. ಇವತ್ತು ನಿಮ್ಮ ಸ್ವಶಕ್ತಿಯಿಂದ ನಿಮ್ಮ ಜನಪರ ಕಾರ್ಯಕ್ರಮಗಳ ಮೂಲಕ ಮಾತ್ರ ರಾಜಕಾರಣ ಮಾಡಿ ಅಧಿಕಾರ ಸ್ಥಾನಮಾನ ಗಳಿಸಬಹುದೇ ಹೊರತು ಈ ರೀತಿ ಹಳೆಯ ಯಾವುದೋ ಒಂದು ಕಥೆ ಹೇಳಿಕೊಂಡು ಜನರಿಗೆ ವಂಚನೆ ಮಾಡಿ ಅಧಿಕಾರಕ್ಕೆ ಬರಬಹುದೆಂಬ ಭ್ರಮೆ ನಿಮಗೆ ಇರಬಾರದೆಂಬ ಕಿವಿ ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ನಾನು ನಿಮ್ಮನ್ನು ಕೇಳುತ್ತೇನೆ. ಮೂರುಮುಕ್ಕಾಲು ವರ್ಷಗಳ ಹಿಂದೆ ವೀರೇಂದ್ರಪಾಟೀಲರನ್ನು ನೀವು ದೆಹಲಿಯಿಂದ ಕರೆದುಕೊಂಡು ಬಂದಿರಿ. ಏಕೆ? ಇಲ್ಲಿ ನಾಯಕರು ಇರಲಿಲ್ಲವೇ? ಮೂರುಮುಕ್ಕಾಲು ವರ್ಷಗಳ ಹಿಂದೆ ನಿಮಗೆ ಸ್ಪಷ್ಟವಾಗಿ ಗೊತ್ತಿತ್ತು. ಇಲ್ಲಿ ಇರುವ ನಾಯಕವರ್ಗದ ಮುಖವನ್ನು ತೋರಿಸಿ ಹೊರಟರೆ ತಾವು ಅಧಿಕಾರಕ್ಕೆ ಬರುವುದಿಲ್ಲ ಎನ್ನುವುದು ಕೇಂದ್ರದ ನಾಯಕರಿಗೆ ಗೊತ್ತಿತ್ತು, ರಾಜ್ಯದ ನಾಯಕರಿಗೆ ಗೊತ್ತಿತ್ತು. ಆದಕ್ಕಾಗಿ ಕರೆದುಕೊಂಡು ಬಂದಿರಿ. ಚುನಾವಣೆ ಆಯಿತು. ತಾವು ಮೂರುಮುಕ್ಕಾಲು ವರ್ಷಗಳ ಹಿಂದೆ ಏನು ಹೇಳಿದಿರಿ? ಅದು ರೆಕಾರ್ಡ್‌ನಲ್ಲಿ ಇದೆ. ನಾವು ತಪ್ಪು ಮಾಡಿದೆವು, ರಾಜ್ಯದ ಜನತೆಗೆ ಅನ್ಯಾಯ ಮಾಡಿ ನಾವು ಎರಡು ಬಾರಿ ಚುನಾವಣೆಯಲ್ಲಿ ಸೋತು ಜನತಾ, ಜನತಾದಳ ಅಧಿಕಾರಕ್ಕೆ ಬರುವುದಕ್ಕೆ ಅವಕಾಶ ಕೊಟ್ಟಿದ್ದೇವೆ; ನಮ್ಮ ತಪ್ಪನ್ನು ಕ್ಷಮಿಸಿ; ದಕ್ಷ, ಸ್ವಚ್ಛ ಹಾಗೂ ಸ್ಥಿರವಾದ ಸರ್ಕಾರವನ್ನು ಜನತೆಗೆ ಕೊಡುತ್ತೇವೆನ್ನುವ ಭರವಸೆಯನ್ನು ನಿಮ್ಮ ನಾಯಕರಾದ ವೀರೇಂದ್ರಪಾಟೀಲರು ಕೊಟ್ಟರು. ಇವತ್ತು ನಾನು ಕೇಳುತ್ತೇನೆ. ಮೂರುಮುಕ್ಕಾಲು ವರ್ಷಗಳ ಹಿಂದೆ ಈ ಭರವಸೆಯನ್ನು ನಿಮ್ಮ ಪರವಾಗಿ ಕಾಂಗ್ರೆಸ್‌ನ ಪರವಾಗಿ ಕೊಟ್ಟ ವೀರೇಂದ್ರಪಾಟೀಲರು ಅಥವಾ ರಂಗನಾಥ್ ಅವರಂತಹ ಹಿರಿಯರ ಭಾವನೆಗಳನ್ನು ಅರ್ಥಮಾಡಿಕೊಂಡು ಸರ್ಕಾರ ನಡೆಸುವ ಪ್ರಯತ್ನವನ್ನು ತಾವು ಮಾಡಿದಿರಾ? ಎಷ್ಟೋ ಘಟನೆಗಳು ನಡೆದು ಹೋದವು. ಬಹುಶಃ ಈ ದೇಶದ ಇತಿಹಾಸದಲ್ಲಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಬಹಳ ಗಂಭೀರವಾದ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ ನಿನ್ನೆಯಿಂದ ಪ್ರಾರಂಭವಾಗಿದೆ. ನಿನ್ನೆ ಉತ್ತರಾರ್ಧದಲ್ಲಿ ರಾಜ್ಯ ವಿಧಾನ ಸಭೆಯ ಅಧಿಕೃತ ಮಾನ್ಯತೆ ಪಡೆದ ವಿರೋಧಪಕ್ಷದ ನಾಯಕರು ಮಾತನಾಡಿದರು. ರಾಷ್ಟ್ರೀಯ ಪಕ್ಷದ ಶ್ರೀಮಾನ್ ಯಡಿಯೂರಪ್ಪನವರು ಈಗ ಮಾತನಾಡುತ್ತಿದ್ದಾರೆ. ಯಾರ ವಿರುದ್ಧ ನಾವು ಅವಿಶ್ವಾಸ ನಿರ್ಣಯವನ್ನು ತಂದಿದ್ದೇವೋ ಅವರು ಇವತ್ತು ಇಲ್ಲಿ ಇಲ್ಲ. ಮುಖ್ಯಮಂತ್ರಿಗಳು ನಿನ್ನೆಯಿಂದಲೂ ಇಲ್ಲಿ ಇಲ್ಲ. ಇದರ ಅರ್ಥ ಎರಡು ಇರಬಹುದು. ಒಂದು, ಅವಿಶ್ವಾಸ ನಿರ್ಣಯ ಅವರ ದೃಷ್ಟಿಯಲ್ಲಿ ಕ್ಷುಲ್ಲಕವಾಗಿ ಕಾಣಬಹುದು. ಇಲ್ಲವೇ, ಸದನಕ್ಕೆ ಅಪಮಾನ ಮಾಡತಕ್ಕ ಅಭಿಪ್ರಾಯ ಇರಬಹುದು. ಸರ್ಕಾರದ ಕಾರ್ಯಕಲಾಪಗಳು ಎಂದರೆ ಜಂಟೀ ಜವಾಬ್ದಾರಿ ಬರುತ್ತದೆ. ಆದಕ್ಕೆ ಯಾರು ಬೇಕಾದರೂ

ಉತ್ತರ ಹೇಳಬಹುದು. ಇಲ್ಲಿ ನೇರವಾಗಿ ಮುಖ್ಯಮಂತ್ರಿಗಳಾದ ವೀರಪ್ಪಮೊಯ್ಲಿಯವರ ಮಂತ್ರಿಮಂಡಲದ ಸದಸ್ಯರ ವಿರುದ್ಧ ಅವಿಶ್ವಾಸ ನಿರ್ಣಯ ತಂದಿರುವುದು. ನಾನು ಒಂದಲ್ಲ ಒಂದು ಕಾರಣಕ್ಕೆ ಅವರು ಬರಬಹುದು ಎಂದು ಹೇಳಿ ಬಹಳ ಚರ್ಚೆ ಮಾಡಿದೆ. ಆದುದರಿಂದ ಇದು ಒಂದು ರೀತಿಯಲ್ಲಿ ಸಹನಕ್ಕೆ ಅಪಚಾರ ಮಾಡಿದಂತೆ. ಇದು ಒಂದು ಬ್ರಹ್ಮಾಸ್ತ್ರ. ಈ ಅಸ್ತ್ರವನ್ನು ಬಿಡುವುದಕ್ಕೆ ಮುಂಚೆ ನಾವು ಸಾಕಷ್ಟು ಅಳೆದುಸುರಿದು ಆಲೋಚನೆ ಮಾಡಿ ಸದನದ ಸಮಯವನ್ನು ಹಾಳುಮಾಡಬಾರದೆಂಬ ಸದಿಚ್ಛೆಯಿಂದ ನಾವು ಪ್ರಯತ್ನ ಮಾಡಿದ್ದೇವೆ. ಮುಖ್ಯಮಂತ್ರಿ ಮತ್ತು ಅವರ ಮಂತ್ರಿಮಂಡಲದ ಸದಸ್ಯರ ವಿರುದ್ಧ ನಾವು ಅವಿಶ್ವಾಸ ನಿರ್ಣಯ ಮಂಡನೆ ಮಾಡಿದಾಗ ಉತ್ತರವನ್ನು ಹೇಳಬೇಕಾದ ಮುಖ್ಯಮಂತ್ರಿಗಳು ಸದನದ ಹೊರಗಡೆ ಉಳಿದರೆ ಯಾರಿಗೋಸ್ಕರ, ಯಾತಕ್ಕೋಸ್ಕರ ನಾವು ಚರ್ಚೆ ಮಾಡಬೇಕು? ಇದು ಸರಿಯಾದ ನೀತಿ ಅಲ್ಲ. ಇದು ಜನತಂತ್ರ ವಿರೋಧಿಯಾದ, ಅದರಲ್ಲೂ ಪಾರ್ಲಿಮೆಂಟರಿ ಸಿಸ್ಟಮ್ ಆಫ್ ಡೆಮಾಕ್ರಸಿಯಲ್ಲಿ ಇದು ಸಲ್ಲದು. ಮೊನ್ನೆ ಸಂಸತ್ತಿನಲ್ಲೂ ಕೂಡ ಇಂತಹದ್ದು ಚರ್ಚೆ ಆಯಿತು. ಅಲ್ಲಿನ ದಾಖಲೆ ನೋಡಿದೆ. ಪ್ರಧಾನಮಂತ್ರಿಗಳ ವಿರುದ್ಧ ಅವಿಶ್ವಾಸ ಮಂಡನೆಯಾಗಿ ಅದು ತೀರ್ಮಾನ ಆಗುವವರೆಗೆ ಅವರು ಸದನದಲ್ಲಿ ಕುಳಿತಿದ್ದರು ಎಂದು ಕೇಳಿದ್ದೇನೆ. ಆ ರೀತಿ ನಡೆದುಕೊಳ್ಳತಕ್ಕ ಜವಾಬ್ದಾರಿ ಮುಖ್ಯಮಂತ್ರಿಯವರಿಗೆ ಇರಬೇಕು. ಉಳಿದ ವಿಚಾರದಲ್ಲಿ ಜಂಟೀ ಜವಾಬ್ದಾರಿ. ಯಾರೇ ಉತ್ತರ ಹೇಳಬಹುದು. ಇಲ್ಲಿ ನೇರವಾಗಿ ಅವರ ವಿರುದ್ಧ ಈ ನಿರ್ಣಯ ತಂದಿರುವಾಗ ಸದನದ ಹೊರಗಡೆ ಅವರು ಉಳಿಯುವ ಪ್ರಕ್ರಿಯೆ ಬಹುಶಃ ಅವರಿಗೆ ನಾವು ಚರ್ಚೆ ಮಾಡದೆ ಅವಿಶ್ವಾಸ ನಿರ್ಣಯವನ್ನು ಒಪ್ಪಿಕೊಂಡಿದ್ದಾರೆನ್ನುವ ಸಂಶಯ ನನಗೆ ಬಂದರೆ ಅದು ಅಪರಾಧ ಅಲ್ಲ ಎಂದು ತಾವು ಭಾವನೆ ಮಾಡುತ್ತೀರಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲ ಎನ್ನುವ ವಿಚಾರವನ್ನು ನಾನು ನಿನ್ನೆ ಕೂಡ ಇಲ್ಲಿ ಪ್ರಸ್ತಾಪ ಮಾಡಿದೆ. ಇಲ್ಲಿ ನಾವು ಅವಿಶ್ವಾಸ ನಿರ್ಣಯ ಮಂಡನೆ ಮಾಡಿದ್ದೇವೆ. ಹೊರಗಡೆ ಕಾಂಗ್ರೆಸ್‌ನವರೂ ಅವಿಶ್ವಾಸ ಮಂಡನೆ ಮಾಡಿದ್ದಾರೆ. ಈ ಗದ್ದಲದಲ್ಲಿ ಇದು ನಡೆಯುತ್ತಿದೆ. ಹೊರಗಡೆ ಅಲ್ಲಿ ಅವರು ಉಳಿದುಕೊಳ್ಳಲು ಪ್ರಯತ್ನ ನಡೆಯುತ್ತಿದೆ. ಒಳಗೆ ನಾವು ನೇರವಾಗಿ ನಮ್ಮ ಹಕ್ಕನ್ನು ಚಲಾಯಿಸಿದ್ದೇವೆ. ಹೊರಗಡೆ ಕಾಂಗ್ರೆಸ್ ಪಕ್ಷದಲ್ಲಿ ಆ ಲಾಬಿ ನಡೆಯುತ್ತಿದೆ. ಯಾರನ್ನು ಎಷ್ಟು ಬೇಗ ಉರುಳಿಸಬೇಕು, ದೆಹಲಿಯಿಂದ ಯಾರು ಬರುತ್ತಿದ್ದಾರೆ, ಹೈಕಮಾಂಡ್‌ನಿಂದ ಯಾರು ಬಂದಿದ್ದಾರೆ, ಯಾರು ಬಂದಿಲ್ಲ, ಬರೀ ಇದೇ ಅಲ್ಲಿ ಸಮಸ್ಯೆ ಆಗಿ ಕೂತಿದೆ. ಮುಖ್ಯಮಂತ್ರಿಗಳು ಇಲ್ಲಿ ಕುಳಿತುಕೊಳ್ಳತಕ್ಕ ಕಾಲವನ್ನು ಅದಕ್ಕೋಸ್ಕರ ಉಪಯೋಗಿಸಿ ಮೂರನೆಯ ಮಹಡಿಯಲ್ಲಿ ಕುಳಿತಿದ್ದಾರೆ. ಅವರು ಯಾರ್‍ಯಾರನ್ನು ಗಟ್ಟಿ ಮಾಡಬೇಕು ಯಾರನ್ನು ವಹಿಸಬೇಕು ಯಾರನ್ನು ಬಿಡಬೇಕು, ಈ ಸದನದ ಪರಿಸ್ಥಿತಿ ಏನು? ನಾವು ಜವಾಬ್ದಾರಿಯುತವಾಗಿ ಎಲ್ಲಾ ಪಕ್ಷಗಳು ಸೇರಿ ಇಲ್ಲಿ ಅವಿಶ್ವಾಸ ನಿರ್ಣಯವನ್ನು ನೇರವಾಗಿ ಮುಖ್ಯಮಂತ್ರಿಗಳ ಮೇಲೆ ಮಂಡಿಸಿರುವಾಗ ಈ ಸದನಕ್ಕೆ ಮುಖ್ಯಮಂತ್ರಿಗಳು ತೋರುತ್ತಿರುವ ಅಗೌರವ; ಈ ಸದನಕ್ಕೆ ಅಪಚಾರ ಎನ್ನುವ ಮಾತನ್ನು ತಮ್ಮ ಮೂಲಕ ಹೇಳುತ್ತಿದ್ದೇನೆ.

ಶ್ರೀ ಎನ್.ಜಿ. ನಾಯಕ್ :- ಮಾನ್ಯ ವಾಟಾಳ್‌ನಾಗರಾಜ್‌ರವರೇ, ಇದು ಒಂದು ಫ್ಯಾಮಿಲಿಯ ಒಳಗೆ ಇರತಕ್ಕ ಜಗಳ. ನಮ್ಮ ಒಳಜಗಳವನ್ನು ಕೇಳುವುದಕ್ಕೆ ನಿಮಗೆ ಹಕ್ಕಿಲ್ಲ. ನಮ್ಮ

ಒಳಜಗಳವನ್ನು ಕೇಳುವುದಕ್ಕೆ ನೀವು ಯಾರು?

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ನಾಯಕರವರಿಗೆ ಫ್ಯಾಮಿಲಿಪ್ಲಾನಿಂಗ್ ಆಪರೇಷನ್ ಮಾಡಿಸಿ.

ಶ್ರೀ ವಾಟಾಳ್‌ನಾಗರಾಜ್:- ಅವರನ್ನು ಕುಟುಂಬ ಕಲ್ಯಾಣ ಯೋಜನೆಗೆ ಅಧ್ಯಕ್ಷರನ್ನಾಗಿ ಮಾಡುವುದು ಒಳ್ಳೆಯದು.

ಶ್ರೀ ಎನ್.ಜಿ. ನಾಯಕ್:- ದಯವಿಟ್ಟು ಕುಳಿತುಕೊಳ್ಳಿ, ನಿಮಗೆ ಮಾತನಾಡುವುದಕ್ಕೆ ಹಕ್ಕಿಲ್ಲ.

ಶ್ರೀ ಎಸ್.ಎಂ. ಕೃಷ್ಣ:(ಉಪಮುಖ್ಯಮಂತ್ರಿ) ಮಾನ್ಯ ಯಡಿಯೂರಪ್ಪನವರೇ, ಒಂದು ನಿಮಿಷ ನನಗೆ ಅವಕಾಶ ಕೊಡಿ. ಬಹಳ ಗಂಭೀರವಾದ ಪ್ರಶ್ನೆಯನ್ನು ಮಾನ್ಯ ಡಿ.ಬಿ. ಚಂದ್ರೇಗೌಡರು ಎತ್ತಿದ್ದಾರೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಅದನ್ನು ಪುಷ್ಟೀಕರಿಸಿ ಮುಖ್ಯಮಂತ್ರಿಗಳು ಮೂರನೆಯ ಮಹಡಿಯಲ್ಲಿ ಕುಳಿತಿದ್ದಾರೆಂದು ಅವರ ದಿವ್ಯದೃಷ್ಟಿಯಿಂದ ಕಂಡು ಹೇಳಿದ್ದಾರೆ. ನಾನು ಈಗತಾನೇ ಮೇಲ್ಮನೆಯಿಂದ ಕೆಳಗಿನ ಮನೆಗೆ ಬಂದಿದ್ದೇನೆ. ಮುಖ್ಯಮಂತ್ರಿಗಳು ಅಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಅವರ ಪ್ರಶ್ನೆಗಳಿಗೆ ಉತ್ತರ ಹೇಳುತ್ತಿದ್ದಾರೆ. ಮೇಲ್ಮನೆ ಒಂದನೆಯ ಮಹಡಿಯಲ್ಲಿದೆ. ಅದು ಮೂರನೆಯ ಮಹಡಿಯಲ್ಲಿ ಇಲ್ಲ. ಆದ್ದರಿಂದ ಮುಖ್ಯಮಂತ್ರಿಗಳಿಗಾಗಲೀ, ಮಂತ್ರಿಮಂಡಲದ ಯಾರೇ ಮಂತ್ರಿಗಳಿಗಾಗಲೀ ಉದ್ದೇಶಪೂರ್ವಕವಾಗಿ ಇಂತಹ ಮಹತ್ವದ ಗಂಭೀರ ಸ್ವರೂಪವುಳ್ಳ ಅವಿಶ್ವಾಸ ನಿರ್ಣಯ ಪ್ರಸ್ತಾಪವಾಗತಕ್ಕ ಕಾಲದಲ್ಲಿ ಉದ್ದೇಶಪೂರ್ವಕವಾಗಿ ಇಲ್ಲಿ ಇರಬಾರದು ಎನ್ನುವ ಮನಸ್ಸು ಇಲ್ಲ ಎನ್ನತಕ್ಕದ್ದನ್ನು ಸ್ಪಷ್ಟಪಡಿಸುತ್ತೇನೆ. ಹೊರಗಡೆ ಉಛ್ವಾಸ, ವಿಶ್ವಾಸ, ನಿಶ್ವಾಸ ಅದರ ಬಗ್ಗೆ ಈ ಸದನದ

ಶ್ರೀ ವಾಟಾಳ್‌ನಾಗರಾಜ್:- ಅಷ್ಟು ಸುಲಭವಾಗಿ ಈ ಸದನದಲ್ಲಿ ಚರ್ಚೆ ಮಾಡುವ ಹಾಗೆ ಇಲ್ಲವೆಂದರೆ ಹೇಗೆ? ದಿನಕ್ಕೆ 12 ಹೇಳಿಕೆಗಳನ್ನು ನೀವು ಕೊಡುತ್ತಿದ್ದರೆ. 27 ಹೇಳಿಕೆಗಳನ್ನು ಮುಖ್ಯಮಂತ್ರಿಗಳು ಕೊಡುತ್ತಿದ್ದರು. ನಿಮ್ಮ ನಿಮ್ಮಲ್ಲೇ ದ್ವಂದ್ವ ಇದೆ. ಇದು ಹೇಳಬಾರದು ಈ ಸದನದಲ್ಲಿ ಎಂದು ಹೇಳಿದರೆ ಹೇಗೆ? ಏನು ತಾವು ಈ ತರಹ ಆದರೆ?

ಶ್ರೀ ಎಸ್.ಎಂ. ಕೃಷ್ಣ:ಅವೆರಡೂ ಸೇರಿಸಿದರೆ 64 ಆಗುತ್ತವೆ. ನೀವು ಕೂಡುತ್ತಾ ಕುಳಿತಿರಿ ಎಷ್ಟಾಗುತ್ತದೆಂದು.

ಶ್ರೀ ವಾಟಾಳ್‌ನಾಗರಾಜ್: ನೀವು ಕಳೆಯುತ್ತಾ ಕುಳಿತಿದ್ದೀರಿ; ನಾವು ಕೂಡುತ್ತಾ ಕುಳಿತಿದ್ದೇವೆ.

ಶ್ರೀ ಎಸ್.ಎಂ. ಕೃಷ್ಣ : ನೀವು ಓಟಿಗೆ ಹಾಕಿ ಗೊತ್ತಾಗುತ್ತದೆ. ನಿಮ್ಮ ಭ್ರಮಾ ಪ್ರಪಂಚದಿಂದ ಸ್ವಲ್ಪ ಕೆಳಗೆ ಇಳಿಯಿರಿ.

ಶ್ರೀ ವಾಟಾಳ್‌ನಾಗರಾಜ್:- ಹಾಗಾದರೆ ನಿಮ್ಮ ಹೇಳಿಕೆಗಳು ಸುಳ್ಳು. ನೀವು ಕೊಟ್ಟಿರತಕ್ಕ ಹೇಳಿಕೆಗಳು ಸತ್ಯಕ್ಕೆ ದೂರವಾದವು.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೇ, ಆದ್ದರಿಂದ ನಾನು ವಿನೀತನಾಗಿ ನಾನು ವಿರೋಧಪಕ್ಷದ ನಾಯಕರಲ್ಲಿ ಅರಿಕೆ ಮಾಡುತ್ತಿದ್ದೇನೆ. ಮುಖ್ಯಮಂತ್ರಿಗಳು ಅವರ ಪ್ರಶ್ನೆಗಳು ಮುಗಿದ ನಂತರ ಈ ಸಭೆಗೆ ಹಾಜರಾಗುತ್ತಾರೆ. ಮಾನ್ಯ ಯಡಿಯೂರಪ್ಪನವರ ಭಾಷಣವನ್ನು ಈಗ ನಾವೆಲ್ಲ ಚಿತ್ತಕೊಟ್ಟು ಆಲೈಸುತ್ತಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ: - ನನ್ನ ಅಭ್ಯಂತರ ಅದಲ್ಲ. ಆ ಜಂಟಿ ಜವಾಬ್ದಾರಿ ಕೆಲಸವನ್ನು ನೀವು ಯಾರಾದರೂ ನಿರ್ವಹಿಸಿ. ಇಲ್ಲಿ ಅವಿಶ್ವಾಸ ನಿರ್ಣಯಕ್ಕೆ ಅವರು ನೇರವಾಗಿ ಉತ್ತರ ಹೇಳಬೇಕು; ಅವರೇ ಎದುರಿಸಬೇಕು. ನಾನು ಅದಕ್ಕಾಗಿ ಹೇಳಿದ್ದೇನೆ. ಜಂಟಿ ಜವಾಬ್ದಾರಿ ಮೇಲೆ ಮುಖ್ಯಮಂತ್ರಿಗಳ ಮೇಲೆ ನೇರವಾಗಿರತಕ್ಕ ಹೊಣೆಗಾರಿಕೆಯಿದೆ. ಹೊಣೆಗಾರರು ಮುಖ್ಯಮಂತ್ರಿಗಳು. ಏನೋ ಕಾರಣ ಹೇಳಿ ತಪ್ಪಿಸಿಕೊಳ್ಳತಕ್ಕದ್ದು ಸರಿಯಾದ ನೀತಿಯಲ್ಲ. ಅದು ಸರಿಯಾದುದಲ್ಲ. ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಅನುಭವಿಗಳಾದ ನೀವು, ಹಾಗೂ ಮೇಲೆ ಕುಳಿತು ಕೆಲಸ ಮಾಡಿದಂತಹ ನಿಮ್ಮಿಂದ ನಾವು ಇದನ್ನು ನಿರೀಕ್ಷೆ ಮಾಡಿರಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ತಪ್ಪಿಸಿಕೊಳ್ಳುವ ಪ್ರಶ್ನೆ ಏನಿದೆ? ರೂಲ್ಸ್ ಪ್ರಕಾರ ಪ್ರಶ್ನೋತ್ತರ ಕಾಲದಲ್ಲಿ ಅಲ್ಲಿ ಇರಬೇಕಾಗುತ್ತದೆ. ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಪ್ರಶ್ನೆಗಳು ಇವೆ. ಒಬ್ಬೊಬ್ಬರಿಗೆ ಒಂದೊಂದು ದಿವಸ ನಿಗದಿಯಾಗಿರುತ್ತದೆ. ಈ ದಿವಸ ಅವರಿಗೆ ನಿಗದಿಯಾಗಿರುವುದರಿಂದ ಅವರು ಅಲ್ಲಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ: ಇವತ್ತು ಮಾನ್ಯ ಲೋಕೋಪಯೋಗಿ ಸಚಿವರು ಏನು ವಿವರಣೆ ಕೊಡುತ್ತಿದ್ದಾರೆ, ಅದು ಒಂದು ಕಡೆ ಇರಲಿ. ನಿನ್ನೆ ಮಾನ್ಯ ವಿರೋಧಪಕ್ಷದ ನಾಯಕರು ಭಾಷಣ ಮಾಡುವಾಗ ಕೊನೆಯವರೆಗೂ ಇರಲಿಲ್ಲ. ಅದಕ್ಕೆ ತಾವೇನು ವಿವರಣೆ ಹೇಳುತ್ತೀರಿ?

ಶ್ರೀ ಕೆ.ಹೆಚ್. ರಂಗನಾಥ್: ಪ್ರಸ್ತುತವಾಗಿರತಕ್ಕ ವಿಷಯಕ್ಕೆ ಗಮನಹರಿಸೋಣ. ನಿನ್ನೆ ಪ್ರಶ್ನೆಯಲ್ಲ.

ಶ್ರೀ ಹೆಚ್. ಏಕಾಂತಯ್ಯ: ನಿನ್ನೆ ವಿರೋಧಪಕ್ಷದ ನಾಯಕರು ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ಪ್ರಾರಂಭ ಮಾಡಿದಾಗಿನಿಂದಲೂ ಕೊನೆಯವರೆಗೂ ಸಹ ಕೊನೆಯ ನಿಮಿಷದವರೆಗೂ ಇದ್ದರೇ? ತಾವೇ ಹೇಳಿ?

ಶ್ರೀ ಬಿ.ಎಸ್. ಯಡಿಯೂರಪ್ಪ: - ನಾನು ಗಂಭೀರವಾದ ಕೆಲವು ವಿಷಯಗಳನ್ನು ಈ ಸದನದ ಮುಂದೆ ಹಾಗೂ ಈ ನಾಡಿನ ಜನರ ಮುಂದೆ ಇಡುವ ಪ್ರಯತ್ನ ಮಾಡುತ್ತಿದ್ದೆ. ಮಾನ್ಯ ಚಂದ್ರೇಗೌಡರು ಒಬ್ಬ ಹಿರಿಯ ನಾಯಕರಾಗಿ ಸರ್ಕಾರವನ್ನು ಬಡಿದೆಬ್ಬಿಸುದಂತಹ ಕೆಲಸವನ್ನು ಹಾಗೂ ಸಭಾನಾಯಕರ ಕರ್ತವ್ಯವನ್ನು ಜ್ಞಾಪಕ ಮಾಡುವಂತಹ ಕೆಲಸ ಮಾಡಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಹಾಗೂ ಅನಿವಾರ್ಯವಾದಂತಹ ಪ್ರಸಂಗಗಳಲ್ಲಿ ಅಲ್ಲಿದ್ದರೆ ಬಹುಶಃ ಅವರು ಇಲ್ಲಿ ಬಂದು ಕುಳಿತುಕೊಳ್ಳಲಿ ಅಂತ ನಾನು ನಿರೀಕ್ಷೆ ಕೂಡ ಮಾಡುವುದಿಲ್ಲ. ಏಕೆಂದರೆ ಇದುವರೆಗೂ ನಾಲ್ಕು ಜನ ನಾವು ಮಾತನಾಡಲು ಎದ್ದಾಗ ಎಂದೂ ಅವರು ಕೇಳುವ ಅಭ್ಯಾಸವೇ ಇಲ್ಲ. ಅದಕ್ಕೆ ಅವರು ನಾವು 144 ಜನ ಆಗಿ ಬಂದಾಗ ಕೇಳಬೇಕು ಅಂತ ಆಸೆ ಇರಬಹುದು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇವತ್ತು ಅವರು ಇಲ್ಲ; ಅದಕ್ಕಾಗಿ ನೀವು ಯಾರಾದರೂ ನೋಟ್ ಮಾಡಿಕೊಳ್ಳಿ. ಯಾರಾದರೂ ಅದರ ಬಗ್ಗೆ ಉತ್ತರ ಕೊಡಿ; ಚಿಂತೆ ಇಲ್ಲ; ಪ್ರಶ್ನೆ ಇರುವಂತಾದ್ದು. ಇಂತಹ ಗಾಂಭೀರ್ಯವಾದಂತಹ ಅವಿಶ್ವಾಸ ನಿರ್ಣಯ ಮಂಡನೆ ಆದಂತಹ ಸಂದರ್ಭದಲ್ಲಿ ಬಹುಶಃ ಸ್ವಲ್ಪ ಏನಾದರೂ ಅವರ ಕರ್ತವ್ಯದ ಅರಿವು ಇದ್ದರೆ ಆ ಉತ್ತರವನ್ನು ಸಹ ಅನೇಕ ಸಂದರ್ಭದಲ್ಲಿ ಬೇರೆ ಯಾರಾದರೂ ಸಚಿವರಿಗೆ ಜವಾಬ್ದಾರಿ ಕೊಟ್ಟು ಕೊಡಿಸಿದಂತಹ ಉದಾಹರಣೆಗಳು ಇವೆ. ದಯಮಾಡಿ ಅವರು ಬಂದರೆ ತುಂಬಾ ಸಂತೋಷ ಅಷ್ಟೆ; ಚಂದ್ರೇಗೌಡರು ಅವರ ವಿಚಾರವನ್ನು ತಿಳಿಸಿದ್ದಾರೆ. ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಿದ್ದೆ,

ನೀವು ಯಾವ ಭರವಸೆಯನ್ನು ಈ ನಾಡಿನ ಜನರಿಗೆ ಕೊಟ್ಟು ಅಧಿಕಾರಕ್ಕೆ ಬಂದಿರಲ್ಲಾ, ಆ ಸ್ವಚ್ಛ ದಕ್ಷ, ಸ್ಥಿರವಾದಂಥ ಸರ್ಕಾರವನ್ನು ಕೊಡುವುದಕ್ಕೆ ನಿಮ್ಮಿಂದ ಸಾಧ್ಯವಾಯಿತಾ? ವಿಧಾನಸೌಧ ಎನ್ನುವಂತಹ ಈ ದೇಗುಲವನ್ನೇ ಅಪವಿತ್ರಗೊಳಿಸುವಂತಹ ಮಟ್ಟಕ್ಕೆ ತಮ್ಮವರು ತಮ್ಮ ಸಿಎಲ್‌ಪಿ ಮೀಟಿಂಗ್‌ನಲ್ಲಿ ನಡೆದುಕೊಂಡರಲ್ಲಾ ಬಹುಶಃ ಇದು ಗೌರವ ತರತಕ್ಕಂಥ ಸಂಗತಿಯಾ? ಮುಂದಿನ ಪೀಳಿಗೆಗೆ ನೀವು ಹಾಕಿಕೊಡುವಂತಹ ಅಡಿಪಾಯವೇ ಇದು? ಅದೂ ಹಿರಿಯರಾದಂತಹ ರಂಗನಾಥ್‌ರಂತಹವರು ಸನ್ಮಾನ್ಯ ಕೃಷ್ಣಾರಂಥವರು, ಶ್ರೀ ರಾಮಸ್ವಾಮಿಗಳಂತಹವರು ಇದ್ದೂ ಸಹ ಈ ರೀತಿಯ ಘಟನೆಗಳು ನಡೆಯುತ್ತಾ ಇವೆಯಲ್ಲಾ, ಇದು ತಮಗೆ ಸಂಬಂಧ ಇಲ್ಲ ಅಂತ ತಾವು ಹೇಳಿದರೂ ಸಹ ಒಂದು ಸರ್ಕಾರದಲ್ಲಿದ್ದುಕೊಂಡು ವಿಧಾನಸೌಧದಂಥ ಈ ಕಟ್ಟಡ ನ್ಯಾಯಾಲಯ ಅಂತ ನಾವು ಅಂದುಕೊಂಡಿದ್ದೆವೋ, ದೇಗುಲ ಅಂತ ತಿಳಿದುಕೊಂಡಿದ್ದೆವೋ ಇದನ್ನು ನಿಮ್ಮ ಕಚ್ಚಾಟಕ್ಕೆ, ನಿಮ್ಮ ಬಡಿದಾಟಕ್ಕೆ, ನಿಮ್ಮ ಸ್ವಾರ್ಥಕ್ಕೆ ದುರುಪಯೋಗ ಮಾಡಿಕೊಳ್ಳುವಂಥ ಒಂದು ದುಸ್ಥಿತಿ ನಿಮಗೆ ಬಂತಲ್ಲಾ ಅಂತ ಹೇಳಿ ಈ ನಾಡಿನ ಜನ ನಿಮ್ಮ ಬಗ್ಗೆ ಆಕ್ರೋಶಗೊಂಡಿದ್ದಾರೆ. ಇದರ ಅರಿವು ನಿಮಗೆ ಆಗಬೇಕಾದರೆ ಸ್ವಲ್ಪ ದಿವಸ ಆಗಬಹುದು. ಈವತ್ತು ಯಾರು ಮುಖ್ಯಮಂತ್ರಿ ಆಗಬೇಕು, ಅದರ ಬಗ್ಗೆ ನಮಗೆ ಚಿಂತನೆ ಇಲ್ಲ ಸ್ವಾಮಿ. ನಿಜವಾಗಲೂ ಅದು ನಮಗೆ ಸಂಬಂಧ ಇಲ್ಲದೆ ಇರುವಂತಾದ್ದು. ನೀವು ಗೌರವಯುತವಾಗಿ ಏನು ಬೇಕಾದರೂ ಬದಲಾವಣೆ ಮಾಡಿಕೊಳ್ಳಿ; ಆದರೆ ಮೂರು ಮುಕ್ಕಾಲು ವರ್ಷದಿಂದ ಈ ರೀತಿ ಅಸ್ಥಿರವಾದ ವಾತಾವರಣ, ರಾಜಕೀಯ ಅಸ್ಥಿರತೆ, ವ್ಯಾಪಕ ಭ್ರಷ್ಟಾಚಾರ ರಾಜಕೀಯ ದಿವಾಳಿತನದಲ್ಲಿ ಏನು ತಲ್ಲೀನರಾಗಿದ್ದೀರಿ; ಈಗಲಾದರೂ ನಿಮ್ಮಂತಹ ಹಿರಿಯರಾದವರಿಗೆ ಸದ್ಬುದ್ಧಿ ಬಂದು ಈ ನಾಡಿನ ಜನರ ಹಿತದೃಷ್ಟಿಯಿಂದ ಜನರ ವಿಶ್ವಾಸ ಕಳೆದುಕೊಂಡಿರುವಂತಹ ಈ ಸಂದರ್ಭದಲ್ಲಿ, ಶಾಸಕಾಂಗ ಪಕ್ಷದಲ್ಲಿ ನಿಮ್ಮ ನಾಯಕರ ಮೇಲೆ ನಿಮಗೆ ವಿಶ್ವಾಸ ಇಲ್ಲವೆಂದು ಹೇಳುತ್ತಿರುವಂತಹ ಸಂದರ್ಭದಲ್ಲಿ ಹಿಂದಿನ ಮುಖ್ಯಮಂತ್ರಿಗಳ ಬಗ್ಗೆ ಇರಬಹುದು ಈಗಿನ ಮುಖ್ಯಮಂತ್ರಿ ಬಗ್ಗೆ ಇರಬಹುದು, ಪ್ರಧಾನಿಯವರನ್ನು ಕಂಡು ಅನೇಕ ಅವ್ಯವಹಾರಗಳನ್ನು ಬಯಲು ಮಾಡುವ ಕಾರಣಕೋಸ್ಕರ ಇಳಿಯಬೇಕು ಎಂದು ಹೇಳುತ್ತಿರುವಂತಹ ಈ ಸಂದರ್ಭದಲ್ಲಿ ಇದನ್ನು ತಿದ್ದುವುದಕ್ಕೆ ಸಾಧ್ಯವಿಲ್ಲ ಅಂತ ಮನವರಿಕೆ ಆದ ಮೇಲೂ ಸಹ ಹಿರಿಯರಾದ ನಿಮ್ಮಂತಹವರ ಕರ್ತವ್ಯವೆಂದರೆ ರಾಜೀನಾಮೆ ಕೊಟ್ಟು ಹೊರಗೆ ಹೋಗುವಂಥಾದ್ದು, ವಿಧಾನ ಸಭೆಯನ್ನು ವಿಸರ್ಜನೆ ಮಾಡುವಂತಾದ್ದು ಅಥವಾ ಜನತಾ ನ್ಯಾಯಾಲಯಕ್ಕೆ ಹೋಗುವಂತಾದ್ದು; ಈ ಕೆಲಸವನ್ನು ನೀವು ಮಾಡುತ್ತಿಲ್ಲವಲ್ಲಾ ಎಂದು ನನಗೆ ಪಶ್ಚಾತ್ತಾಪವಾಗುತ್ತಿದೆ. ನಾನು ವೀರೇಂದ್ರ ಪಾಟೀಲರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವ ಆಶ್ವಾಸನೆಯನ್ನು ನೀವು ಈ ನಾಡಿನ ಜನರಿಗೆ ಕೊಟ್ಟಿರಿ ಅದನ್ನು ಈಡೇರಿಸಿದ್ದೀರಾ? ನೀವು ಯಡಿಯೂರಪ್ಪನ ಮಾತು, ಚಂದ್ರೇಗೌಡರ ಮಾತು, ದೇಶಪಾಂಡೆಯವರ ಮಾತು, ಖಂಡಿತಾ ಕೇಳಬೇಡಿ ನಾವು ವಿರೋಧಪಕ್ಷದಲ್ಲಿದ್ದೇವೆ; ನಾವು ಟೀಕೆ ಮಾಡುತ್ತೇವೆ ಯಾವುದು ಅಗತ್ಯ ಇದೆ ಅದನ್ನು ತೆಗೆದುಕೊಳ್ಳಿ; ಉಳಿದಿದ್ದು ಬಿಟ್ಟುಬಿಡಿ; ವೀರೇಂದ್ರ ಪಾಟೀಲರು ಹಿಂದಿನ ಸರ್ಕಾರದ ಬಗ್ಗೆ ಏನು ಹೇಳಿದ್ದಾರೆಂದರೆ, ಶ್ರೀ ಬಂಗಾರಪ್ಪನವರು ಹೆಂಡದ ದೊರೆಗಳ ಕೈಗೊಂಬೆಯಾಗಿದ್ದಾರೆ. ಕಾಂಗ್ರೆಸ್ಸಿನವರೆಂದು ರಸ್ತೆಯಲ್ಲಿ ತಲೆ ಎತ್ತಿ ಓಡಾಡದಂತೆ ಮಾಡಿದರೆಂದು ಎಲ್ಲಿ ಹೇಳಿದರು ಸ್ವಾಮಿ? ಈ ಸದನದ ಒಳಗಡೆ ಹೇಳಿದ್ದು ರೆಕಾರ್ಡ್‌ನಲ್ಲಿದೆ. ಇವತ್ತು ಶಸ್ತ್ರಚಿಕಿತ್ಸೆ ಮಾಡುತ್ತೇನೆಂದು

ಹೇಳಿದರಲ್ಲಾ, ಹಿಂದಿನ ಸರ್ಕಾರದ ಬಗ್ಗೆ ; ವೀರಪ್ಪಮೊಯ್ಲಿಯವರು ಏನು ಹೇಳಿದರು ಸ್ವಾಮಿ? "182 ಜನ ಶಾಸಕರನ್ನು ಹೊಂದಿ, ಒಟ್ಟು ಸಂಖ್ಯೆಯಲ್ಲಿ ಮುಕ್ಕಾಲರಷ್ಟು ಬಹುಮತ ಪಡೆದಿದ್ದರೂ ಸಹ ರಾಜಕೀಯ ಅಸ್ಥಿರತೆ, ಗೊಂದಲ, ಭಿನ್ನಮತೀಯ ಚಟುವಟಿಕೆ ತಾಂಡವವಾಡುತ್ತಿರುವುದರಿಂದ ರಾಜ್ಯದ ಜನತೆ ಬೇಸತ್ತು ಹೋಗಿದ್ದಾರೆ. ಆರೋಪ, ಪ್ರತ್ಯಾರೋಪಗಳು, ವಿರೋಧಾಭಾಸದ ಹೇಳಿಕೆಗಳು ಸರ್ವೇಸಾಮಾನ್ಯವಾಗಿ ಹೋಗಿದೆ. ಮುಖ್ಯಮಂತ್ರಿ ಯಾವಾಗ ಬದಲಾಗುತ್ತಾರೆ ಎನ್ನುವ ನಿತ್ಯ ಊಹಾಪೋಹ ಆಡಳಿತ ಯಂತ್ರವನ್ನೇ ಅಸ್ತವ್ಯಸ್ತಗೊಳಿಸಿದೆ. ರಾಜ್ಯ ಸರ್ಕಾರಕ್ಕೆ ಶಸ್ತ್ರ ಚಿಕಿತ್ಸೆ ಅಗತ್ಯ ಇದೆ" ಎಂಬ ಮಾತನ್ನು ವೀರಪ್ಪಮೊಯ್ಲಿಯವರು ಹೇಳಿದಂತಾದ್ದು. ನಾವು ಮೊನ್ನೇ ಸದನವನ್ನು ಮೂರು ದಿವಸ ಮುಂದೂಡಿ ಯಾವ ದಿಟ್ಟತನದಿಂದ ಬಿಚ್ಚುಮನಸ್ಸಿನಿಂದ ಹೋರಾಟಮಾಡಿಕೊಂಡು ಬಂದಂತಹ ಒಬ್ಬ ಮುಖ್ಯಮಂತ್ರಿ ಆಗಿ ಗುಂಡೂರಾಯರು ಕೆಲಸ ಮಾಡಿದರೋ ಯಾರ ಬಗ್ಗೆ ನಾವು ಶ್ರದ್ಧಾಂಜಲಿಯನ್ನು ಅರ್ಪಿಸಿದೆವೋ, ಯಾರು ತಪ್ಪುನೆಪ್ಪುಗಳು ಆಗಿದ್ದರೂ ಸಹ ಸತ್ಯವನ್ನು ಒಪ್ಪಿಕೊಂಡು ಜನ ಪರ ಕೆಲಸ ಮಾಡಿದರೋ ಅವರು ಏನು ಹೇಳಿದರು ಸ್ವಾಮಿ?

(ಸನ್ಮಾನ್ಯ ಉಪಾಧ್ಯಕ್ಷರು ಶ್ರೀ ಅಂಜನಮೂರ್ತಿ ಅಧ್ಯಕ್ಷ ಪೀಠವನ್ನಲಂಕರಿಸಿದರು)

ನಿಮ್ಮ ಸರ್ಕಾರದ ಬಗ್ಗೆ, ಹೊರಗಡೆ ಇದ್ದುಕೊಂಡು ಅವರು ಏನು ಹೇಳಿದರು. ಮಾಜಿ ಮುಖ್ಯಮಂತ್ರಿಗಳಾದ ಗುಂಡೂರಾವ್‌ರವರು ಹೇಳುತ್ತಾರೆ,"ರಾಜ್ಯಸರ್ಕಾರ ಹಾಗೂ ಆಡಳಿತ ಸೂತ್ರವನ್ನು ಹಿಡಿದಿರುವ ಕಾಂಗ್ರೆಸ್ ಪಕ್ಷ ಜನತೆಯ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದು ಆಡಳಿತ ವ್ಯವಸ್ಥೆ ಅಧೋಗತಿಗೆ ಇಳಿದಿದೆ. ವಿಧಾನಸಭೆಗೆ ಈಗಲೇ ಚುನಾವಣೆ ನಡೆದಿದ್ದೇ ಆದಲ್ಲಿ , ಕೇವಲ 20 ಸ್ಥಾನಗಳನ್ನೂ ಗೆಲ್ಲಲು ಕಾಂಗ್ಯೆಗೆ ಸಾಧ್ಯವಿಲ್ಲ" ಇದನ್ನು ಮಾಜಿ ಮುಖ್ಯಮಂತ್ರಿಗಳಾದ ಗುಂಡೂರಾವ್‌ರವರು, ಕಾಂಗ್ರೆಸ್ಸಿನ ಹಿರಿಯ ನಾಯಕರು ಹೇಳಿದಂಥ ಮಾತು . ಇದರ ಜೊತೆಗೆ ಮಾನ್ಯ ವೀರಪ್ಪಮೊಯ್ಲಿ ಅವರು ಶಸ್ತ್ರಚಿಕಿತ್ಸೆಯ ಅಗತ್ಯ ಇದೆಯೆಂದು ಹೇಳಿದರು. ಆ ಶಸ್ತ್ರಚಿಕಿತ್ಸೆಯನ್ನು ನೀವು ಮಾಡಿದಿರಾ? ಜಾಯಿಂಟ್ ರೆಸ್ಪಾನ್ಸಿಬಲಿಟಿ ಇದೆ. ಮುಖ್ಯಮಂತ್ರಿಗಳೇ ಅಲ್ಲ, ಸಚಿವ ಸಂಪುಟದ ಮಂತ್ರಿಗಳೆಲ್ಲರೂ ಇದ್ದಾರೆ. ಏನು ಶಸ್ತ್ರಚಿಕಿತ್ಸೆ ಮಾಡಿದಿರಿ, ಒಂದು ಉದಾಹರಣೆಯನ್ನು ಕೊಡಿ. ಅಂದರೆ, ಮುಖ್ಯಮಂತ್ರಿಯಾದ ಬಂಗಾರಪ್ಪನವರಿಗೂ ಸಹ ನಿಮ್ಮವರೇ ದ್ರೋಹ ಮಾಡಿದಿರಿ. ಅವರು ಭ್ರಷ್ಟಾಚಾರವನ್ನು ಸರಿಪಡಿಸಬೇಕೆಂಬ ಆಸಕ್ತಿ ನಿಮಲ್ಲಿ ಇರಲಿಲ್ಲದ ಸರ್ಕಾರದ ಬೊಕ್ಕಸ ಲೂಟಿಯಾಗುವುದನ್ನು ತಡೆಯಬೇಕೆಂಬ ಇಚ್ಛೆ ನಿಮ್ಮಲ್ಲಿ ಇರಲಿಲ್ಲ. ನಿಮ್ಮ ಏಕೈಕ ಉದ್ದೇಶ ಇರುವಂತಾದ್ದು, ಬಂಗಾರಪ್ಪನವರನ್ನು ಇಳಿಸಿ, ಮಂತ್ರಿ ಪದವಿ ಸಿಕ್ಕದವರು, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಬೇಕೆಂಬ ಸ್ವಾರ್ಥದಲ್ಲಿ ನೀವು ತೊಡಗಿದಿರಿ. ಬಂಗಾರಪ್ಪನವರನ್ನು ಒಪ್ಪಬಹುದು, ಅವರು ಏನು ಹೇಳಿದರು. ತಮ್ಮನ್ನು ಭ್ರಷ್ಟನನ್ನಾಗಿ ಮಾಡಿದವರು ಯಾರು ಎಂದು ಓಪನ್ ಆಗಿ ಹೇಳಿದರು. ಅವರು ಹಿಂದೆ ಮುಂದೆ ನೋಡಲಿಲ್ಲ. ಅಂದರೆ, ನಿಮ್ಮ ಈ ರಾಜಕೀಯ ಚದುರಂಗದಾಟ. ಈ ನಾಡಿನ ಜನ ಏತಕ್ಕಾಗಿ ಆಯ್ಕೆ ಮಾಡಿ ನಿಮ್ಮನ್ನು ಕಳುಹಿಸಿದ್ದಾರೆ? ವಿಧಾನ ಸಭೆಯಲ್ಲಿ ಕುಳಿತು, ಒಂದೊಂದು ನಿಮಿಷ ಹೇಳುವ ಮಾತೂ ಸಹ ಜನಗಳ ಭಾವನೆಗಳನ್ನು ಪ್ರತಿಬಿಂಬಿಸುವುದಕ್ಕೆ ಬಂದಿರುವಂಥ ಚುನಾಯಿತ ಪ್ರತಿನಿಧಿಗಳೆಂಬ ಅರಿವು ಇಲ್ಲದಂತೆ ನಡೆದುಕೊಂಡು , ಇವತ್ತು ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿ, ನಾಡಿನ ರೈತ, ಹೊಟ್ಟೆಗೆ ಹಿಟ್ಟಿಲ್ಲದೆ, ಬರಗಾಲ, ಅತಿವೃಷ್ಟಿ, ನೆರೆ ಹಾವಳಿಗೆ ಸಿಕ್ಕಿ ಸಾಯತಕ್ಕ ಸಂದರ್ಭ ಬಂದಿದೆ. ನಿರಪರಾಧಿ ಯುವಕ ಉದ್ಯೋಗ ಸಿಗದೆ, ತಂದೆ ತಾಯಿಗಳಿಗೆ

ಭಾರವಾಗಿ, ಸಮಾಜಕ್ಕೆ ಭಾರವಾಗಿ, ತಲೆತಗ್ಗಿಸಿ ಓಡಾಡತಕ್ಕ ದುಸ್ಥಿತಿ ಬಂದಿದೆ. ನಿಮ್ಮನ್ನೇ ನಂಬಿ ಬಂದ ಹರಿಜನ ಗಿರಿಜನರಿಗೆ ಕುಡಿಯುವುದಕ್ಕೆ ನೀರಿಲ್ಲದೆ, ರಸ್ತೆ ಇಲ್ಲದೆ, ದೀಪ ಇಲ್ಲದೆ ಒದ್ದಾಡತಕ್ಕ ದುಸ್ಥಿತಿ ಈ ನಾಡಿನಲ್ಲಿರಬೇಕಾದರೆ, ಈ ರೀತಿ ಕುರ್ಚಿಗಾಗಿ, ಬಡಿದಾಡುತ್ತಿರುವುದು ಸರಿಯೇ? ಇದು ಪ್ರಶ್ನೆ. ನಾನು ವೀರೇಂದ್ರಪಾಟೀಲರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ನಿಜವಾಗಿಯೂ ಸಹ ಒಬ್ಬ ಹಿರಿಯರಾಗಿ, ಈ ನಾಡಿನ ಜನ ಇಟ್ಟುಕೊಂಡಿದ್ದ ಗೌರವವನ್ನು ಉಳಿಸಿಕೊಳ್ಳಬೇಕೆಂಬ ಕಳಕಳಿ ಇದ್ದರೆ, ಕಳೆದ ಮೂರೂವರೆ ವರ್ಷಗಳ ಕಾಲ , ಯಾವ ಭರವಸೆಯನ್ನು ಕೊಟ್ಟು ಕಾಂಗ್ರೆಸ್ ಪಕ್ಷವನ್ನು ಎಲ್ಲರೂ ಸೇರಿ ಅಧಿಕಾರಕ್ಕೆ ತಂದಿರೋ, ಅವರು ಕಾಂಗ್ರೆಸ್‌ಗೆ ರಾಜಿನಾಮೆ ಕೊಟ್ಟು, ಹೊರಗೆ ಬಂದು, ಈ ನಾಡಿನ ಜನರ ಮುಂದೆ ಕ್ಷಮಾಪಣೆ ಕೇಳಬೇಕಾಗುತ್ತದೆ. ಏಕೆಂದರೆ, ಮೊದಲನೇ ಜವಾಬ್ದಾರಿ ಅವರದ್ದು. ಚುನಾವಣೆಯ ಸಂದರ್ಭದಲ್ಲಿ, ಈ ನಾಡಿನ ಜನರಿಗೆ ಏನು ಭರವಸೆಯನ್ನು ಕೊಡುತ್ತೇವೆಯೋ, ಆ ಭರವಸೆಗಳನ್ನು ಈಡೇರಿಸುವಂಥ ದೊಡ್ಡ ಕರ್ತವ್ಯ ಆಡಳಿತ ಪಕ್ಷದ ಮೇಲೆ ಇದೆ ಎನ್ನುವಂಥ ಅರಿವು ಇಲ್ಲವಲ್ಲಾ ಎಂಬುದು ನನಗೆ ದುಃಖ ತರುವಂಥ ಸಂಗತಿ. ಮಾನ್ಯ ವೀರಪ್ಪಮೊಯ್ಲಿಯವರು ಮುಖ್ಯಮಂತ್ರಿಯಾದ ತಕ್ಷಣ ಬಹುಶಃ ಅವರು ಕೆಟ್ಟ ಘಳಿಗೆಯಲ್ಲಿ ಮುಖ್ಯಮಂತ್ರಿಯಾದರು ಎಂದು ಕಾಣುತ್ತದೆ; ಅವರ ಜೊತೆಗೇ ಇದ್ದಂಥ, ಅವರ ಆತ್ಮೀಯ ಸ್ನೇಹಿತರಾದ ಪ್ರೇಮಚಂದ್ರಸಾಗರ್‌ರವರು ಮಂತ್ರಿಯಾದ ಕೂಡಲೇ, ಹೊರಗಡೆ ಬಂದರು. ಅವರ ಮಾತಿಗೆ, ಇವರು ಗೌರವವನ್ನು ಕೊಡತಕ್ಕ ಪರಿಸ್ಥಿತಿ ಇರಲಿಲ್ಲ. ಅಧಿಕಾರಿಗಳ ಎದುರುಗಡೆ ಹಗುರವಾಗಿ ನಡೆದುಕೊಳ್ಳುವುದು ಪ್ರಾರಂಭವಾಯಿತು. ಇದರಿಂದ , ಅವರ ಸ್ವಾಭಿಮಾನಕ್ಕೆ ಧಕ್ಕೆ ಬಂದು ರಾಜೀನಾಮೆ ಕೊಟ್ಟು ಹೊರಗೆ ಬರಬೇಕಾಯಿತು. ಅಂದರೆ, ಆಪ್ತರೂ ಸಹ ಇವರ ಜೊತೆ ಉಳಿಯುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅಂದರೆ, ವೀರಪ್ಪ ಮೊಯ್ಲಿಯವರಲ್ಲಿ ಕಾಣುತ್ತಿರತಕ್ಕ ದೊಡ್ಡ ಕೊರತೆ ಎಂದರೆ, ತನ್ನ ಮಂತ್ರಿಮಂಡಲದ ದೊಡ್ಡ ಸದಸ್ಯರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳತಕ್ಕ ಪ್ರಾಮಾಣಿಕ ಪ್ರಯತ್ನ, ಸರಿ ತಪ್ಪುಗಳಾದರೂ ಸಹ ವಿಶ್ವಾಸಕ್ಕೆ ತೆಗೆದುಕೊಂಡು ಹೋಗಿ; ಈ ನಾಡಿನ ಜನರ ಸಮಸ್ಯೆಗಳನ್ನು ಬಗೆಹರಿಸುವ ಕಡೆಗೆ ಯಾವ ಕಳಕಳಿಯನ್ನು ತೋರಬೇಕಾಗಿತ್ತೋ ಆ ಕಳಕಳಿಯನ್ನು ತೋರಿಸದೇ, ಇವತ್ತು ಮತ್ತೊಮ್ಮೆ ಅಧೋಗತಿಯನ್ನೂ, ದುಸ್ಥಿತಿಯನ್ನೂ ಕಾಣುತ್ತಿದ್ದೇವೆ. ಇದು ಅಕ್ಷಮ್ಯ ಅಪರಾಧ; ಒಂದು ದಿವಸ, ಒಂದು ತಿಂಗಳು, ಒಂದು ವರ್ಷ, ಎರಡು ವರ್ಷ ಸಮಯ ಕೊಡಬಹುದು. ಈ ಕಡೆ ನಾವು ಕುಳಿತುಕೊಂಡು, ನೀವು ಮಾಡಿದ ಎಲ್ಲಾ ಕೆಲಸಗಳಿಗೂ, ಎಲ್ಲಾ ರೀತಿಯ ಬೆಂಬಲವನ್ನು ಕೊಟ್ಟೆವು. ಯಾವುದಾದರೂ ಸಮಸ್ಯೆಗಳು ಬಂದಾಗ ನಾವು ಸಹಕಾರ ಕೊಟ್ಟೆವು. ಆದರೆ, ಈ ನಾಡಿನ ಜನ ಅಜೀರ್ಣವಾಗುವಷ್ಟು ಬಹುಮತ ಕೊಟ್ಟಿದ್ದೇ ಅಪರಾಧವೆಂದು ತಿಳಿದುಕೊಂಡಿದ್ದೀರಾ? ನಾಡಿನ ಜನರ ಪರವಾಗಿ ನಾನು ಕ್ಷಮಾಪಣೆ ಕೇಳುತ್ತೇನೆ, ಮತ್ತೆ ಆ ತಪ್ಪನ್ನು ಅವರು ಮಾಡುವುದಿಲ್ಲ, ಆ ಭರವಸೆ ಯನ್ನು ಕೊಡುತ್ತೇನೆ. ಈಗಲಾದರೂ ವಿಧಾನಸಭೆಯನ್ನು ವಿಸರ್ಜನೆ ಮಾಡುತ್ತೀರಾ? ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೆ ತರುತ್ತೀರಾ? ಸ್ವಾಮಿ, ಮಾನ್ಯ ರಂಗನಾಥ್ ಅವರು ನನಗೆ ಲೇವಡಿ ಮಾಡಿ, ಯಡಿಯೂರಪ್ಪನವರೇ, ನಿಮಗೆ ಅಧಿಕಾರದ ಹುಚ್ಚು ಹಿಡಿದಿದೆಯೇ ಎಂದು ಕೇಳಿದರು; ಜೊತೆಗೆ ಅದು ಸಾಧ್ಯವೇ ಇಲ್ಲವೆಂದರು. ಅದಕ್ಕಾಗಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಮ್ಮಂಥ ಅದರಲ್ಲೂ ಹಿರಿಯರಾದ ರಂಗನಾಥ್‌ರವರಿಂದ ಈ ಮಾತನ್ನು ನಾನು ಅಪೇಕ್ಷೆಪಟ್ಟಿರಲಿಲ್ಲ. ದೇಶದ ರಾಜಕೀಯ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ, ಇವತ್ತು ಕೆಲವೇ ವರ್ಷದ ಹಿಂದೆ ಕಾಂಗ್ರೆಸ್ ಎಂದರೆ ಎಲ್ಲಾ

ವಿರೋಧಪಕ್ಷದವರು ಒಂದಾಗಿ ಬಡಿದಾಡಿದರೂ ಸಹ, ಹೋರಾಡಿದರೂ ಸಹ ನಿಮ್ಮನ್ನು ಅಲ್ಲಾಡಿಸುವುದಕ್ಕೆ ಆಗುತ್ತಾ ಇರಲಿಲ್ಲ. ಆ ರೀತಿ ಈ ನಾಡಿನ ಜನ ನಿಮ್ಮನ್ನು ನಂಬಿಕೊಂಡಿದ್ದರು; ಈ ದೇಶದ ಜನರು ನಿಮ್ಮನ್ನು ನಂಬಿಕೊಂಡಿದ್ದರು.

ಆದರೆ ಇತ್ತೀಚೆಗೆ ನೀವು 4 ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಳ್ಳಬೇಕಾಯಿತು. ಅನೇಕ ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಳ್ಳಬೇಕಾಯಿತು. ಇವತ್ತು ನಿಮ್ಮ ಉಳಿವಿಗಾಗಿ ಇತರೆ ವಿರೋಧಿಪಕ್ಷಗಳವರನ್ನು ಬಾಚಿ ಅಪ್ಪಿಕೊಂಡು ಅವರ ಕಾಲಿಗೆ ಬೀಳುವಂತಹ ದುಸ್ಥಿತಿಯಲ್ಲಿದ್ದೀರಿ ಇಷ್ಟಾದರೂ ಸಹ ಅದೇ ಯಾವುದೋ ಹಳೆಯ ಭ್ರಮೆಯಲ್ಲಿ ನೀವು ಇದ್ದೀರಲ್ಲಾ, ಇದಕ್ಕಾಗಿ ನಾನು ದುಃಖ ಪಡಬೇಕಾಗಿದೆ. ಇದಕ್ಕಾಗಿ ನಾನು ನಿಮ್ಮ ಬಗ್ಗೆ ಅನುಕಂಪ ಪಡಬೇಕಾಗಿದೆ. ಸ್ವಾಮಿ ಒಂದು ಹೇಳುತ್ತೇನೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ನಾಳೆ ಇಲ್ಲಿ ಮುಖ್ಯಮಂತ್ರಿಯಾಗುತ್ತಾನೆ. ಯಾವ ಸರ್ಕಾರ ಬರುತ್ತದೆ ಎನ್ನುವುದು ಮುಖ್ಯ ಅಲ್ಲ. ಪ್ರಜಾತಂತ್ರ ಉಳಿಯಬೇಕಾದರೆ ನಿಜವಾದಂತಹ ಒಂದು ಅಧಿಕೃತವಾದಂತಹ ಒಳ್ಳೆಯ ಒಂದು ವಿರೋಧಪಕ್ಷದ ಅಗತ್ಯ ಇದೆ. ಇಲ್ಲಿ ಇವತ್ತು ನಾನು ಹೇಳುತ್ತೇನೆ. ಈ ಭಾಗದಲ್ಲಿ ಒಂದು ನೂರು ಜನ ವಿರೋಧಪಕ್ಷದ ಶಾಸಕರನ್ನು ಯಾವುದೇ ಪಕ್ಷದಲ್ಲಿ ಇರಬಹುದು ಜನ ಆಯ್ಕೆ ಮಾಡಿ ಕಳುಹಿಸಿದ್ದರೆ, ಈ ರೀತಿ ಅಧಿಕಾರದ ಮದದಿಂದ ನೀವು ಮೆರೆಯುವುದಕ್ಕೆ ಅಗುತ್ತಿರಲಿಲ್ಲ. ಮಾನ್ಯ ಕೃಷ್ಣಾರವರು ಹೇಳಿದರು. ನೋಡಿ ಏನಾಗುತ್ತದೆ; ನಿಮ್ಮ ಲೆಕ್ಕಾಚಾರ ತಪ್ಪಾಗುತ್ತದೆ ಅಂತ ನಮಗೆ ಗೊತ್ತಿದೆ, ನಮ್ಮ ಲೆಕ್ಕಾಚಾರ ತಪ್ಪಾಗುತ್ತದೆ ಅಂತ. ನಿಮ್ಮ ಲೆಕ್ಕಾಚಾರ ಒಂದೇ. ಮುಖ್ಯಮಂತ್ರಿ ಮಂತ್ರಿಗಿರಿಗಿಟ್ಟಿಸುವಂತಾದ್ದು; ನೀವು ಒಬ್ಬರನ್ನು ಇಳಿಸುವುದು ಮತ್ತೊಬ್ಬರನ್ನು ಕೂರಿಸುವುದು. ಇದು ಬಿಟ್ಟು ಇನ್ನೇನು ಇದೆ? ಆದ್ದರಿಂದ ನಮ್ಮ ಲೆಕ್ಕಾಚಾರ ತಪ್ಪಾಗುತ್ತದೆಂದು ಗೊತ್ತಿದ್ದು ಅವಿಶ್ವಾಸ ನಿರ್ಣಯದಮೇಲೆ ಚರ್ಚೆ ಪ್ರಾರಂಭ ಮಾಡಿದ್ದೇವೆ ಸ್ವಾಮಿ. ಚರ್ಚೆ ಮಾಡುತ್ತಿದ್ದೇವೆ ಏತೆ? ಈ ನಾಡಿನ ಜನ ನಾಳೆ ನಮಗೆ ಶಾಪ ಹಾಕಬಹುದು. ವಿಧಾನಸೌಧದಲ್ಲಿ ಸಿ.ಎಲ್.ಪಿ.ಮೀಟಿಂಗ್‌ನಲ್ಲಿ ಇವರು ಕಚ್ಚಾಡುತ್ತಿರಬೇಕಾದರೆ ವಿಧಾನಸೌಧ ಇವತ್ತು ಉಳಿದಿದೆಯೇ? ಅಧಿಕಾರಿಗಳು ಇಲ್ಲಿ ಕೆಲಸ ಮಾಡುತ್ತಿದ್ದಾರೆಯೇ? ಮಂತ್ರಿಗಳು ಯಾರಾದರೂ ಪ್ರವಾಸ ಮಾಡುತ್ತಿದ್ದೀರಾ? ಜಿಲ್ಲಾ ಮಂತ್ರಿಗಳು ಯಾವಯಾವ ಜಿಲ್ಲೆಗೆ ಹೋಗಿ ಎಷ್ಟೆಷ್ಟು ಸಭೆಗಳನ್ನು ಮಾಡಿದ್ದೀರಾ ಎನ್ನುವುದನ್ನು ಏನಾದರೂ ನೋಡಿಕೊಂಡಿದ್ದೀರಾ? ಏನೇನೋ ಭರವಸೆಗಳನ್ನು ನಾವು ಕೇಳಿದ್ದೇವೇನು? ನೀವು ಬಜೆಟ್‌ವರೆಗೂ ಕಾಯಬೇಡಿ ವರ್ಷದವರೆಗೂ ಕಾಯಬೇಡಿ. ನಿಮ್ಮ ನೂರುದಿನಗಳ ಪ್ರೋಗ್ರಾಂ ಎಲ್ಲಿ ಹೋಯಿತು ಸ್ವಾಮಿ? ಈ ಉತ್ತರನ ಪೌರುಷದ ಮಾತನ್ನು ಮುಖ್ಯಮಂತ್ರಿಗಳ ಕಡೆಯಿಂದ ಯಾರು ನಿರೀಕ್ಷೆ ಮಾಡಿದ್ದರು? ದೊಡ್ಡದೊಡ್ಡ ಕಾರ್ಯಕ್ರಮಗಳ ಬಗ್ಗೆ ಪೊಳ್ಳು ಘೋಷಣೆಯನ್ನು ಮಾಡಿ ನಂತರ ಅದನ್ನು ಜಾರಿಗೆ ತರದಂತಹ ವಚನ ಭ್ರಷ್ಟ ಸರ್ಕಾರ ನಿಮ್ಮದಾಗಿದೆ. ಆದಕ್ಕಾಗಿ ನಾನು ಈ ನಾಡಿನ ಜನರ ಪರವಾಗಿ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ. ಇದು ನಿಮ್ಮ ಅಳಿವು ಉಳಿವಿನ ಪ್ರಶ್ನೆ ಅಲ್ಲ. ಈ ನಾಡಿನ ಜನರ ಅಳಿವು ಉಳಿವಿನ ಪ್ರಶ್ನೆ. ಒಂದು ದಿವಸ ನಿಮ್ಮ ಕರ್ತವ್ಯವನ್ನು ಮರೆತರೆ ಮಂತ್ರಿ ತನ್ನ ಕರ್ತವ್ಯವನ್ನು ಮರೆತರೆ ಈ ರಾಜ್ಯದಲ್ಲಿ ತಾವು ಕಚ್ಚಾಟದಲ್ಲಿ ತಲ್ಲೀನರಾದರೆ ಎಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗುತ್ತವೆನ್ನುವ ಅರಿವು ನಿಮಗೆ ಇದೆಯೇನು? ಯಾವ ಸಮಯದಲ್ಲಿ ಸರ್ಕಾರ ಹೋಗುತ್ತೋ ಬರುತ್ತೋ ಎನ್ನುವ ಬಗ್ಗೆ ಯೋಚನೆ ಮಾಡುತ್ತಿರುವಂತಹ ಈ ಕಾಲದಲ್ಲಿ ಒಬ್ಬ ಅಧಿಕಾರಿ ಒಂಮ ತೀರ್ಮಾನವನ್ನು

ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದಾನೇನು? ಏನು ತೀರ್ಮಾನ ತೆಗೆದುಕೊಂಡರೆ ಯಾವ ಸಮಯದಲ್ಲಿ ನನ್ನ ಮೇಲೆ ಬರುತ್ತದೋ ಎಂದು ಹೆದರಿ ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿಲ್ಲ. ಹಿಂದಿನ ಮುಖ್ಯಮಂತ್ರಿ ಕಾಲದಲ್ಲಿ ಯಾರು ಊಟ ಮಾಡಿದ್ದಾರೆ. ಅವರಿಗೆ ಪಾಪದ ಫಲ ಸಿಕ್ಕಿದೆ. ಸ್ವಾಮಿ, ಯಾವ ಮಟ್ಟಕ್ಕೆ ತಂದುಬಿಟ್ಟರಿ; ಆ ಸಿಓಡಿ, ಸಿಬಿಐ, ಲೋಕಾಯುಕ್ತ ಸಂಸ್ಥೆಗಳು ಮಾಡಿರುವ ತನಿಖಾ ವರದಿಯನ್ನು ತರಿಸಿಕೊಳ್ಳುವುದಕ್ಕೆ ನೀವು ಏನು ಪ್ರಯತ್ನ ಮಾಡಿದಿರಿ? ಅದಕ್ಕೊಂದು ಪಾವಿತ್ರ್ಯತೆ ಏನಿತ್ತು ಅದನ್ನೂ ಹಾಳು ಮಾಡಿಬಿಟ್ಟರಿ. ಈ ತನಿಖಾ ವರದಿಗಳನ್ನು ನಿಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತೀರೆಂದು ಜನ ಇವತ್ತು ಮಾತನಾಡುತ್ತಿದ್ದಾರೆ. ಅಲ್ಲಿ ಅಧಿಕಾರಿಗಳು ಪ್ರಾಮಾಣಿಕವಾಗಿ ವರದಿಯನ್ನು ಕೊಡಲು ಸಹ ನೀವು ಬಿಡುತ್ತಿಲ್ಲ. ನಿಮ್ಮ ಸರ್ಕಾರವೇ ಮಾಡಿದಂತಹ ತನಿಖೆಗೆ "ಬಿ" ರಿಪೋರ್ಟ್ ಹಾಕಿದ್ದೀರಿ. ಚೀಫ್ ಸೆಕ್ರೆಟರಿ ಅಲೆಗ್ಸಾಂಡರ್ ಬಗ್ಗೆ ಏನು ಮಾಡಿದಿರಿ ಎಂಬುದು ಎಲ್ಲರಿಗೂ ಗೊತ್ತಿದೆ. ಮತ್ತೆ ನಿಮ್ಮ ಮಂತ್ರಿಮಂಡಲದಲ್ಲಿ ಅದನ್ನು ಪುನರ್‌ಪರಿಶೀಲನೆ ಮಾಡಲು ಹೊರಟಿದ್ದೀರಿ. ಅಂದರೆ ಏನು ಅರ್ಥ? ಹಿಂದೆ ನಿಮ್ಮ ಮುಖ್ಯಮಂತ್ರಿಯೇ ಸರ್ಕಾರದಲ್ಲಿದ್ದಾಗ ನೀವೇ ಮಂತ್ರಿಗಳಾಗಿದ್ದಾಗ ನಿಮ್ಮದೇ ಜಂಟಿ ಜವಾಬ್ದಾರಿ ಇದ್ದಾಗ ನೀವೇ ತಿರುಚಿ "ಬಿ" ರಿಪೋರ್ಟ್‌ನ್ನು ಕೊಡಿಸಿದಿರಿ. ನೀವು ಮತ್ತೆ ಅದನ್ನೇ ತನಿಖೆ ಮಾಡಲು ಹೊರಟಿದ್ದೀರಿ. ಇದರಿಂದ ಯಾರಿಗಾದರೂ ನಂಬಿಕೆ ಹಾಗೂ ವಿಶ್ವಾಸ ಬರುತ್ತದೆಯೇ? ನಾನು ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಡುತ್ತೇನೆ. ಅವರೇನೂ ಶಾಶ್ವತ ಅಲ್ಲ. ಯಾರು ಅಧಿಕಾರಕ್ಕೆ ಬರುತ್ತಾರೆ ಅದು ಮುಖ್ಯ ಅಲ್ಲ. ಯಾರು ನಾಳೆ ಅಧಿಕಾರಕ್ಕೆ ಬರುತ್ತಾರೆ ಆಗ ಮತ್ತೆ ಈ ತನಿಖೆಗಳು ಮರುಪರಿಶೀಲನೆಯಾಗುತ್ತವೆ, ಮತ್ತೆ ತನಿಖೆಗಳು ಆಗುತ್ತವೆ ಎಂಬುದನ್ನು ಅವರು ತಿಳಿದುಕೊಳ್ಳಬೇಕು. ಯಾರು ಈ ಒಂದು ಅವ್ಯವಹಾರದಲ್ಲಿ ತೊಡಗಿದ್ದಾರೆ, ಅವರುಗಳು ಕೇಂದ್ರ ಮತ್ತು ರಾಜ್ಯಗಳಲ್ಲಿ ನಮ್ಮದೇ ಸರ್ಕಾರ ಇದೆ, ಆದ್ದರಿಂದ ಇದನ್ನು ಜೀರ್ಣ ಮಾಡಿಕೊಳ್ಳಬಹುದೆಂದಿದ್ದರೆ ಇದನ್ನು ಜೀರ್ಣ ಮಾಡಿಕೊಳ್ಳುವುದಕ್ಕೆ ವಿರೋಧ ಪಕ್ಷದಲ್ಲಿ ಕುಳಿತಿರುವವರು, ಅಂದರೆ ನಾವು ಬಿಡುವುದಿಲ್ಲ. ಕೃಷ್ಣಾರವರು ಒಂದು ಮಾತನ್ನು ಹೇಳಿದರು. ನಾಗರಾಜುರವರೇ, ಲೆಕ್ಕಾ ಹಾಕಿ ಏನೂ ಆಗುವುದಿಲ್ಲ ಎಂದು ನಮಗೆ ಗೊತ್ತಿದೆ ಏನೂ ಆಗುವುದಿಲ್ಲ ಎಂದು ಭಾರತೀಯ ಜನತಾ ಪಾರ್ಟಿ ತೀರ್ಮಾನ ಮಾಡಿದೆ; ಅವಿಶ್ವಾಸ ನಿರ್ಣಯಕ್ಕೆ ಆತ್ಮ ಸಾಕ್ಷಿಯಾಗಿ ನೀವು ಬೆಂಬಲ ಕೊಟ್ಟು ನಿಮ್ಮ ಸರ್ಕಾರ ಬಿದ್ದು ಇಲ್ಲಿ ವಿಧಾನಸಭೆ ವಿಸರ್ಜನೆ ಮಾಡಿ ರಾಷ್ಟ್ರಪತಿ ಆಡಳಿತಕ್ಕೆ ನೀವು ಅವಕಾಶ ಮಾಡಿಕೊಂಡದಿದ್ದರೆ ಇಲ್ಲಿಂದ ನೇರವಾಗಿ ಈ ನಾಡಿನ ನಾಲ್ಕೂವರೆ ಕೋಟಿ ಜನತೆಯ ಮುಂದೆ ಭಾರತೀಯ ಜನತಾ ಪಾರ್ಟಿ ಹೋಗುವುದಿದೆ; ನಿಮ್ಮ ಸ್ವಾರ್ಥ, ನಿಮ್ಮ ರಾಜಕೀಯ ಗೊಂದಲ, ನಿಮ್ಮ ಚದುರಂಗದಾಟವನ್ನು ಬಯಲು ಮಾಡುವವರಿದ್ದೇವೆ. ಮನೆ ಮನೆಗೂ ಹೋಗಿ ಜನಜಾಗ್ರತಿಯನ್ನು ಉಂಟುಮಾಡುತ್ತೇವೆ. ಈ ಕಾಂಗ್ರೆಸ್ ಸಂಸ್ಕೃತಿಯನ್ನು ಬೇರು ಸಮೇತ ಕಿತ್ತು ಹಾಕುವಂತಹ ಒಂದು ಕಾರ್ಯಕ್ರಮವನ್ನು ಮಾಡುತ್ತೇವೆ ನೋಡುವಿರಂತೆ.

ಶ್ರೀ ಆರ್.ಎನ್. ನಾಯಕ್:- ಅಂದರೆ, ನಮಗೆ ಮನೆ ಮನೆಗೂ ಹೋಗುವುದು ಗೊತ್ತಿಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಆ ಕೆಲಸ ಮಾಡುತ್ತೇವೆ. ಸ್ವಾಮಿ, ವಿರೋಧಪಕ್ಷವಾಗಿ ಆದರೂ ಇಲ್ಲಿ ನೀವು ಕುಳಿತುಕೊಳ್ಳಬೇಕು ಎಂದು ಆಸೆ ಇದ್ದರೆ ವಿಧಾನಸಭೆಯನ್ನು ವಿಸರ್ಜನೆ ಮಾಡಿ ರಾಷ್ಟ್ರಪತಿ ಆಡಳಿತವನ್ನು ಜಾರಿಗೆ ತನ್ನಿ. ಇಲ್ಲದಿದ್ದರೆ ನಿಶ್ಚಿತವಾಗಿ ಬಹುಶಃ ಬಹಳ ಕೆಟ್ಟ ಕಾಲ ಹತ್ತಿರ

ಬರುತ್ತಿದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಕಾಲ ಇತ್ತು, ಪ್ರಧಾನ ಮಂತ್ರಿಯವರ ಎ.ಐ.ಸಿ.ಸಿ. ವೀಕ್ಷಕರ ಒಂದು ಕೃಪಾ ಕಟಾಕ್ಷದಿಂದ ಈ ನಾಡಿನ ನಾಲ್ಕೂವರೆ ಕೋಟಿ ಜನರು ಆಯ್ಕೆ ಮಾಡಿ ಕಳುಹಿಸಿರುವಂತಹ ಈ ರಾಜ್ಯದ ಆಡಳಿತವನ್ನು ಜನರ ಅಭಿಪ್ರಾಯದ ಬಗ್ಗೆ ಯೋಚನೆ ಮಾಡದೆ ಅವರ ಆಶೀರ್ವಾದದಿಂದ ನಾವು ಅಧಿಕಾರದಲ್ಲಿ ಮುಂದುವರಿಯಬಹುದು ಎನ್ನುವ ಭ್ರಮೆಯಲ್ಲಿ ನೀವು ಇದ್ದೀರಿ. ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವರಿಕೆ ಆಗಿರಬಹುದು, ಹಣ ಇಲ್ಲದಿದ್ದರೆ, ಯಾರನ್ನೋ ತೃಪ್ತಿಪಡಿಸದಿದ್ದರೆ ನಾನು ಕುರ್ಚಿಯಲ್ಲಿ ಉಳಿಯುವುದಕ್ಕೆ ಸಾಧ್ಯ ಇಲ್ಲ ಎನ್ನತಕ್ಕಂಥ ಕಟು ಸತ್ಯದ ಅರಿವು ಈವತ್ತು ಮುಖ್ಯಮಂತ್ರಿ ಆಗಿರುವ ವೀರಪ್ಪಮೊಯ್ಲಿಯವರಿಗೆ ಆಗಿದೆ. ಇವತ್ತು ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಲ್ಕನೇ ಮುಖ್ಯಮಂತ್ರಿ ಮತ್ತೊಂದು ಮಂತ್ರಿಮಂಡಲ ಈ ರಾಜ್ಯದಲ್ಲಿ ಆಗುವುದಕ್ಕೆ ನಾವು ಬಿಡುವುದಿಲ್ಲ. ಬಹುಮತ ಇದೆ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಮನಬಂದಂತೆ ರಾಜಕೀಯ ದೊಂಬರಾಟ ಆಡುವುದಕ್ಕೆ ನಾವು ಬಿಡುವುದಿಲ್ಲ. ಅದನ್ನು ಕೊನೆ ಮಾಡುವುದಕ್ಕೆ ಈ ನಾಡಿನ ಜನ ಸಿದ್ಧರಾಗಿದ್ದಾರೆ. ಜನಜಾಗೃತಿ ಒಂದೇ ದಾರಿ ಎನ್ನುವ ಅರಿವೂ ಸಹ ನಮಗೆ ಇದೆ. ಅದಕ್ಕಾಗಿ ಇಲ್ಲಿ ಹೆಚ್ಚು ಸಮಯವನ್ನು ಕಳೆಯದೆ ನಿಮ್ಮ ಜೊತೆಯಲ್ಲಿ ಹೆಚ್ಚು ಚರ್ಚೆಗೆ ನಾವು ಕುಳಿತುಕೊಳ್ಳದೆ ನೀವು ಬೇಕಾದ ಟೀಕೆ ಟಿಪ್ಪಣಿಗಳನ್ನು ಮಾಡಿದರೂ ಸಹ ಕಳೆದ ಮೂರು ನಾಲ್ಕು ವರ್ಷಗಳಿಂದ ಹಳ್ಳಿಹಳ್ಳಿಗೂ ಹೋಗಿ ಜನಜಾಗೃತಿಯನ್ನು ಉಂಟು ಮಾಡುತ್ತಿದ್ದೇವೆ. ಈ ಭ್ರಷ್ಟ ರಾಜಕೀಯದ ವಿರುದ್ಧ ಜನಜಾಗೃತಿಯನ್ನು ಉಂಟು ಮಾಡುತ್ತಿದ್ದೇವೆ.ಅದರ ಪರಿಣಾಮ ಸನ್ಮಾನ್ಯ ರಂಗನಾಥ್‌ರವರಿಗೆ ಗೊತ್ತಿರಬಹುದು. ಇದೇ ಸದನದಲ್ಲಿ ತಾವು ಹೇಳಿದ್ದೀರಿ, ನಾವು 18 ಜನ ಇದ್ದವರು ನಾನು ಒಬ್ಬನೇ ಆಗಿದ್ದೇ; ನನ್ನ ಪಕ್ಕದಲ್ಲಿದ್ದವರು ಇರಲಿಲ್ಲ ನಾನು ತಬ್ಬಲಿಯಂತೆ ನಿಂತಾಗ ನಿಮ್ಮ ಪಕ್ಕದಲ್ಲಿದ್ದ ವಸಂತ ಬಂಗೇರವರು ಇಲ್ಲ ಯಡಿಯೂರಪ್ಪನವರೇ ಅಂತ ನೀವು ತಮಾಷೆ ಮಾಡಿದಿರಿ. ಅದನ್ನು ನಾನು ಕೇಳಿದ್ದೆ. ಆದರೆ ರಂಗನಾಥ್‌ರವರೇ, ಮರೆಯಬೇಡಿ, ಇದೇ ರಾಜ್ಯದಲ್ಲಿ ನಾಲ್ಕು ಮೂಲೆಗಳಿಂದ ನಾಲ್ಕು ಜನ ಲೋಕಸಭಾ ಸದಸ್ಯರು ನಮ್ಮ ಪಕ್ಷದಿಂದ ಆಯ್ಕೆಯಾಗಿ ಹೋದರು, ಅದನ್ನು ಮರೆಯಬೇಡಿ. ನೀವು ಹೇಳಿದಂತಹ ಎರಡು ಪರ್ಸೆಂಟ್ ತೆಗೆದುಕೊಂಡಂತಹ ಭಾರತೀಯ ಜನತಾ ಪಾರ್ಟಿ ಮೊನ್ನೆ ಲೋಕಸಭಾ ಚುನಾವಣೆಯಲ್ಲಿ 29 ಪರ್ಸೆಂಟ್ ಓಟು ತೆಗೆದುಕೊಂಡಿದೆ ಎಂಬುದನ್ನು ಮರೆಯಬೇಡಿ. ನೀವು ತಮಾಷೆ ಮಾಡುತ್ತಿರುವಂತಹ ಈ ಪಾರ್ಟಿ ಮೊನ್ನೆ ಯಲಹಂಕ ಚುನಾವಣೆಯಲ್ಲಿ 36 ಪರ್ಸೆಂಟ್ ಓಟು ತೆಗೆದುಕೊಂಡಿತು. ಇದನ್ನು ಮರೆಯಬೇಡಿ. ವಿರೋಧಪಕ್ಷದಲ್ಲಿರುವ ನಮ್ಮ ಸ್ನೇಹಿತರು ಇಲ್ಲಿ ಅಧಿಕಾರಕ್ಕೆ ಬರುತ್ತಾರೆಂದು ನೀವು ಹೇಳಿದ್ದೀರಲ್ಲಾ ಅದು ಅವರಿಗೇ ನಂಬಿಕೆ ಇಲ್ಲ; ಏಕೆಂದರೆ ಅವರು ಠೇವಣಿಯನ್ನು ಕಳೆದುಕೊಂಡಿದ್ದು ಕಟು ಸತ್ಯ. ಇದನ್ನೂ ಮರೆಯಬೇಡಿ. ನಮ್ಮ ಅವರನ್ನು ಬೇರ್ಪಡಿಸುವಂತಹ ಪ್ರಯತ್ನ ಬೇಡ.

ಶ್ರೀ ಎ. ಕೃಷ್ಣಪ್ಪ:- ಇಲ್ಲಿಯವರೆಗೆ ಮೂರು ಉಪ ಚುನಾವಣೆಗಳು ನಡೆದಿವೆ. ಅದನ್ನೂ ಸಹ ತಾವು ಜ್ಞಾಪಕದಲ್ಲಿಟ್ಟುಕೊಳ್ಳಿ.

ಶ್ರೀ ಬಿ.ಎಚ್. ಬನ್ನಿಕೋಡ್ :- ಮಾನ್ಯ ಯಡಿಯೂರಪ್ಪನವರು ಕುಣಿಗಲ್‌ನಲ್ಲಿ ಏನಾಯಿತು ಎಂಬುದನ್ನು ಮರೆತಿದ್ದಾರೆ; ಒಂದು ಭಾಗ ಗೆದ್ದಿದ್ದನ್ನು ಹೇಳುತ್ತಾರೆ; ಎರಡು ಭಾಗದ ಸೋಲನ್ನು ಅವರು ಒಪ್ಪಿಕೊಳ್ಳುವುದಕ್ಕೆ ತಯಾರು ಇಲ್ಲ.

ಶ್ರೀ ಗುರುದೇವ :- ತಾವು ಮಾನ್ಯ ರಂಗನಾಥ್‌ರವರಿಗೆ ದುಸ್ವಪ್ನ ಏನಾದರೂ ಕಂಡಿರಾ ಎಂದು

ಹೇಳಿದ್ದೀರಿ. ಹಾಗಾದರೆ ಬಿ ಜೆ ಪಿ ಅಧಿಕಾರಕ್ಕೆ ಬರುವುದು ಕೂಡ ದುಸ್ವಪ್ನ ಎಂಬುದು ತಮಗೂ ಗೊತ್ತಿದೆ.

ಶ್ರೀ ಬಿ.ಎಸ್ ಯಡಿಯೂರಪ್ಪ:- ಸ್ವಾಮಿ, ಈ ಸದನದಲ್ಲಿ ಇದರ ಬಗ್ಗೆ ಚರ್ಚೆ ಆಗಿದೆ. ಗದಗ್‌ನಲ್ಲಿ ಆದಂತಹ ಚುನಾವಣೆ, ಕುಣಿಗಲ್‌ನಲ್ಲಿ ಆದಂತಹ ಚುನಾವಣೆ, ಅವತ್ತಿನ ಕೆ.ಎಚ್. ಪಾಟೀಲರವರ ಹೋರಾಟ, ಅದಕ್ಕೆ ಸಿಕ್ಕಿದ ಜಯ ಅಂತ ನೀವೇ ಒಪ್ಪಿಕೊಂಡಿದ್ದೀರಾ? ಅದರಲ್ಲಿ ಯಾವುದೇ ಪ್ರಶ್ನೆ ಇಲ್ಲ. ನೀವು ಹೇಳಿದಂತೆ ನಾವು ಠೇವಣಿ ಕಳೆದುಕೊಂಡಿದ್ದೇವೆ. ನಮ್ಮ ಅಡ್ರಸ್ ಇರಲಿಲ್ಲ. ಈಗ ನಮ್ಮ ಅಡ್ರಸ್ ಯಲಹಂಕದಲ್ಲಿ ಶುರು ಆಗಿದೆ. ಕುಣಿಗಲ್‌ನಲ್ಲಿ ಗೆದ್ದ ರಾಮಯ್ಯನವರು ಇಲ್ಲಿ ಇದ್ದಾರೆ. ಜನ ಹೇಳಿದರು, ಇದು ರಾಮಯ್ಯನವರ ವೈಯುಕ್ತಿಕ ಗೆಲುವು. ಯಾವುದೇ ಪಕ್ಷ ಇದು ನನ್ನ ಗೆಲುವು ಅಂತ ಹೇಳಿಕೊಳ್ಳುವುದಕ್ಕೆ ಸಾಧ್ಯ ಇಲ್ಲ ಎಂದು; ನಾವು ಅಲ್ಲಿ ಠೇವಣಿ ಕಳೆದುಕೊಂಡಿರುವುದು ನಿಜ. ಆದರೆ ಠೇವಣಿ ಕಳೆದುಕೊಂಡೆವು ಅಂತ ಹೇಳಿ ಕುರ್ಚಿಗಾಗಿ ಮಾಡಬಾರದ ಕೆಲಸವನ್ನು ನಾವು ಮಾಡಲಿಲ್ಲ. ಸ್ವಾಮಿ, ನನ್ನ ಮನೆಯಲ್ಲಿ ನನ್ನ ಹೆಂಡತಿ ಅಥವಾ ನಮ್ಮ ಮನೆ ಹೆಂಗಸರು ಅನ್ನ ಬಸಿಯಬೇಕಾದರೆ ಬೆಂದಿದೆಯೋ ಇಲ್ಲವೋ ಎಂದು ಎರಡು ಅಗಳು ಅನ್ನ ನೋಡಿ ಬಸಿಯುತ್ತಾರೆ. ಇವತ್ತು ಮಧ್ಯದಲ್ಲಿ ಇನ್ನೂ ಅನ್ನ ಕುದಿಯುತ್ತಿರಬೇಕಾದರೆ ನಿನ್ನೆ ಮೊನ್ನೆ ರಾಜಕೀಯ ಪ್ರಾರಂಭ ಮಾಡಿದ್ದೇವೆ; ನಾವು ಠೇವಣಿ ಕಳೆದುಕೊಂಡರೂ ನಮ್ಮ ಕೆಲಸ ಶುರು ಮಾಡಿದ್ದೇವೆ.

ಉಪಾಧ್ಯಕ್ಷರು:- ಮಾನ್ಯ ಯಡಿಯೂರಪ್ಪನವರೇ, ಬೇಗ ಮುಗಿಸಿ. ಇನ್ನೂ ಮಾತನಾಡುವವರಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಈಗ ಶುರು ಮಾಡಿದ್ದು ಸ್ವಾಮಿ;

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಉಪಾಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ತಾವು ಪೀಠಕ್ಕೆ ಬಂದರೆ ನಮಗೆ ಏನೋ ಒಂದು ತರಹ ಭಯ ಆಗುತ್ತದೆ. ತಾವು ಆಗಾಗ ಬೆಲ್ ಭಾರಿಸುವ ಅಭ್ಯಾಸ ಮಾಡಿಕೊಂಡಿದ್ದೀರಿ. ಹಾಗಾಗಿ ನಮಗೆ ಒಂದು ತರಹದ ಭಯ.

ಉಪಾಧ್ಯಕ್ಷರು:- ಮಾನ್ಯ ಸದಸ್ಯರುಗಳು ಸಂದರ್ಭ ನೋಡಿಕೊಂಡು ಮಾತನಾಡಬೇಕೆಂದು ಆಗಾಗ ಹೇಳಬೇಕಾಗುತ್ತದೆ. ಈಗ ಸಭೆ ಮುಂದುವರೆದು ಮತ್ತೆ ಮಧ್ಯಾಹ್ನ 2-30 ಗಂಟೆಗೆ ಸೇರುತ್ತದೆ ಎಂದು ಹೇಳ ಬಯಸುತ್ತೇನೆ.

(ಸದನವು:- 1-36ಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 2-30ಗಂಟೆಗೆ ಸೇರಲು ತೀರ್ಮಾನಿಸಿತು.)

(ಸಭೆಯು ಪುನಃ 3.25ಕ್ಕೆ ಸಮಾವೇಶಗೊಂಡಿತ್ತು ಅಧ್ಯಕ್ಷ (ಶ್ರೀ ವಿ.ಎಸ್ ಕೌಜಲಗಿ)ರವರು ಪೀಠದಲ್ಲಿದ್ದರು)

ವಿಷಯ:- ಅವಿಶ್ವಾಸ ನಿರ್ಣಯದ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

ಶ್ರೀ ಬಿ.ಎಸ್. ಯಡಿಯೂರಪ್ಪ(ಶಿಕಾರಿಪುರ):- ಮಾನ್ಯ ಅಧ್ಯಕ್ಷರೆ, ಮಧ್ಯಾಹ್ನದ ಮೇಲಾದರೂ ಮಾನ್ಯ ಮುಖ್ಯಮಂತ್ರಿಗಳು ಬರಬಹುದು. ಸ್ವಲ್ಪ ಉತ್ಸಾಹದಿಂದ ಮಾತನಾಡೋಣ ಎಂದು ನಾನು ಆಸೆ ಇಟ್ಟುಕೊಂಡಿದ್ದೆ. ಮಾನ್ಯ ವಿರೋಧ ಪಕ್ಷದ ನಾಯಕರು, ಚಂದ್ರೇಗೌಡರು ಈ ಬಗ್ಗೆ ಹೇಳಿದಾಗ ಹಿರಿಯ ಸಚಿವರುಗಳಂತಹ ರಂಗನಾಥ್, ಅವರು ಪ್ರಾಮಿಸ್ ಮಾಡಿದಾಗ ಸ್ವಲ್ಪ

ಉತ್ಸಾಹ ಬರುತ್ತದೆ, ಮಾನ್ಯ ಮುಖ್ಯಮಂತ್ರಿಗಳು ಎದುರುಗಡೆ ಬಂದು ಕುಳಿತುಕೊಳ್ಳಬಹುದು ಎಂದು ಆಸೆ ಇಟ್ಟುಕೊಂಡಿದ್ದೆ. ಏಕೋ ಅದು ನಿರಾಸೆ ಆಗುತ್ತಿದೆ. ಬಹುಶಃ ಈಗಲಾದರೂ ಬರಬಹುದೇನೋ ಎಂದು ನಿರೀಕ್ಷೆ ಮಾಡಿಕೊಂಡು ನಾನು ನನ್ನ ಮಾತನ್ನು ಮುಂದುವರಿಸುತ್ತೇನೆ. ಬಹುಶಃ ಈ ಒಂದು ವಾತಾವರಣವನ್ನು ನೋಡಿದಾಗ ಒಂದು ತರಹದ ಗೊಂದಲದ ವಾತಾವರಣ ಈಗಾಗಲೇ ಪ್ರಾರಂಭ ಆಗಿದೆ; ನಾವು ನೋ-ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡುತ್ತಿದ್ದ ಹಾಗೆಯೇ ಕೆಲವರು ಎಐಸಿಸಿ ವೀಕ್ಷಕರು ದೆಹಲಿಯಿಂದ ಬರುತ್ತಾರೆ; ಈ ಸರ್ಕಾರವನ್ನು ಇಳಿಸುತ್ತಾರೆ ಎಂದು ಆಡಳಿತ ಪಕ್ಷದ ಭಿನ್ನಮತೀಯ ಶಾಸಕರು ಕೆಲವರು ಆಸೆ ಇಟ್ಟುಕೊಂಡಿದ್ದಾರೆ, ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಪತ್ರಿಕಾಗೋಷ್ಠಿಯನ್ನು ಕರೆದು ಹೇಳಿದರು, ಯಾವುದೇ ಎಐಸಿಸಿ ದೆಹಲಿ ವೀಕ್ಷಕರೂ ಇಲ್ಲ, ಗೀಕ್ಷಕರೂ ಇಲ್ಲ ಎಂದು. ಯಾರೂ ಬರುವುದಿಲ್ಲ ಎಂದು ಹೇಳಿದ್ದಾರೆ. ಅಂದರೆ ಅವರ ಮನಸ್ಸಿನಲ್ಲಿ ಏನು ಇದೆ? ನಮ್ಮನ್ನು ಇಳಿಸುವವರು, ಉಳಿಸುವವರು ಎಐಸಿಸಿಯವರು, ದೆಹಲಿಯ ದೊರೆಗಳು ಎನ್ನುವ ಭಾವನೆ ಇದೆ. ಇದೇ ಪ್ರಜಾತಂತ್ರಕ್ಕೆ ಆಗಿರುವ ಕುತ್ತು ಹಾಗೂ ಅಪಚಾರ. ದೆಹಲಿಯ ದೊರೆಗಳು, ವೀಕ್ಷಕರು ಗೀಕ್ಷಕರು ಬರುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ಈ ನಾಡಿನ ನಾಲ್ಕೂವರೆ ಕೋಟಿ ಜನ ಇವತ್ತು ನಿಮ್ಮ ನಡವಳಿಕೆಯನ್ನು ನೋಡುತ್ತಿದ್ದಾರೆ, ಅವರು ಬರುತ್ತಾರೆ, ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತಾರೆ. ಅವರು ನಿಮ್ಮನ್ನು ಕುರ್ಚಿಯಿಂದ ಇಳಿಸುತ್ತಾರೆ. ಎನ್ನುವಂತಹ ಕಿವಿ ಮಾತನ್ನು ಹೇಳುತ್ತಿದ್ದೇನೆ ಯಾವುದೋ ದೆಹಲಿಯ ದೊರೆಗಳ ಮೇಲೆ ನಂಬಿಕೊಂಡು ಕುಳಿತಿರುವಂತಹ ಭ್ರಮೆಯಲ್ಲಿ ತಾವು ಇರಬೇಡಿ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಮುಖ್ಯಮಂತ್ರಿಗಳ, ಉಪಮುಖ್ಯಮಂತ್ರಿಗಳ ಹಾಗೂ ಕಂದಾಯ ಸಚಿವರ ಪರಸ್ಪರ ಪತ್ರವ್ಯವಹಾರ ನೇರವಾಗಿ ನಡೆದಿದೆ. ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, ಪತ್ರ ವ್ಯವಹಾರವೇ ನಡೆದಿಲ್ಲ ಎಂದು; ಪತ್ರ ಬರೆದಿಲ್ಲ ಎಂದು. ಆದರೆ ಸನ್ಮಾನ್ಯ ಹಿರಿಯ ಸಚಿವರಾದಂತಹ ರಾಜಶೇಖರ ಮೂರ್ತಿಗಳು ಮತ್ತೆ ಸನ್ಮಾನ್ಯ ಉಪಮುಖ್ಯಮಂತ್ರಿಗಳಾಗಿರುವಂತಹ ಮಾನ್ಯ ಕೃಷ್ಣ ಅವರು ಪತ್ರ ಬರೆದಿರುವುದು ಬಹಿರಂಗವಾಗಿ ಬಂದಿದೆ. ಅದು ಪೂರ್ಣವಾಗಿ ಬಂದಿಲ್ಲದೇ ಇರಬಹುದು. ನೀವು ಯಾವ ರೀತಿ ನಮಗೆ ಕೈ ಬಲಪಡಿಸುತ್ತಿದ್ದೀರೋ ಆ ರೀತಿ ನಾವು ನಿಮ್ಮ ಕೈ ಬಲಪಡಿಸುತ್ತಿದ್ದೇವೆ ಎಂಬ ಒಂದು ಮಾರ್ಮಿಕವಾದ ಮಾತು ಅದರಲ್ಲಿದೆ. ಅಂದರೆ ಯಾವ ಒಂದು ಮಂತ್ರಿಮಂಡಲದಲ್ಲಿ ಪರಸ್ಪರ ವಿಶ್ವಾಸ ಇರಬೇಕಾಗಿತ್ತೋ, ಜಾಯಿಂಟ್ ರೆಸ್ಪಾನ್ಸಿಬಲಿಟಿ ಇರಬೇಕಾಗಿತ್ತೋ, ಅದು ಇಲ್ಲದೇನೇ ಒಂದು ರೀತಿಯ ದೊಂಬರಾಟದ ರಾಜಕಾರಣ ಆಗುತ್ತಿರುವುದನ್ನು ಈ ನಾಡಿನ ಜನ ಇವತ್ತು ಗಮನಿಸುತ್ತಿದ್ದಾರೆ. ಬಹುಶಃ ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ, ಇವತ್ತಿನ ಗೊಂದಲದ ವಾತಾವರಣವನ್ನು ನೋಡಿದರೆ ಬಹುಶಃ ಆ ಭಗವಂತನೇ ಪ್ರತ್ಯಕ್ಷವಾಗಿ ಬಂದು ನಿಮ್ಮನ್ನು ಉಳಿಸಬೇಕು ಎನ್ನುವ ಪ್ರಯತ್ನ ಮಾಡಿದರೂ ಸಹ ಇವತ್ತು ನೀವು ಉಳಿಯುವುದಕ್ಕೆ ಸಾಧ್ಯ ಇಲ್ಲ. ಅವಸಾನದ ಕಾಲವು ಹತ್ತಿರ ಬರುತ್ತಿರುವಂತಹ ಎಲ್ಲಾ ರೀತಿಯ ಒಂದು ವಾತಾವರಣ, ಆ ಮಂಕು ಕವಿದ ವಾತಾವರಣವನ್ನು ಈ ಸದನದ ಹೊರಗೆ ಹಾಗೂ ಒಳಗಡೆ ಎಲ್ಲಾ ಕಡೆ ನೋಡುವಂತಹ ಒಂದು ವಿಚಿತ್ರವಾದ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ನನಗೆ ಚಿಂತೆ ಇರುವಂತಹುದ್ದು ಒಂದು ಅಸ್ಥಿರತೆಯ ವಾತಾವರಣ ಉಂಟಾದಾಗ ಒಬ್ಬ ಮುಖ್ಯಮಂತ್ರಿ ತನ್ನ ಕರ್ತವ್ಯವನ್ನು ಹಾಗೂ ತನ್ನ ಒಂದು ಜವಾಬ್ದಾರಿಯನ್ನು ನಿಭಾಯಿಸುವಂತಹ ಪರಿಸ್ಥಿತಿ ಬಂದಾಗ ಈ ರೀತಿ ಒಂದು ಅಸ್ಥಿರತೆ ವಾತಾವರಣ ಬಂದರೆ ಪರಿಸ್ಥಿತಿ

ಯಾವ ರೀತಿ ಆಗಬಹುದು. ಅವರು ಸಮಯ ಕೊಡುವುದಕ್ಕೆ ಸಾಧ್ಯಾನಾ? ಚಿಂತೆ ಮಾಡುವುದಕ್ಕೆ ಸಾಧ್ಯಾನಾ? ಜನರ ಸಮಸ್ಯೆಗಳನ್ನು ನೋಡುವುದಕ್ಕೆ ಸಾಧ್ಯಾನಾ? 24 ಗಂಟೆ ತನ್ನ ಕುರ್ಚಿಯ ಉಳಿವಿಗಾಗಿ, ತನ್ನ ಸ್ಥಾನದ ಉಳಿವಿಗಾಗಿ ಒಂದು ರೀತಿಯ ಷಂಡ ರಾಜಕಾರಣವನ್ನು ಮಾಡುವಂತಹ ಅನಿವಾರ್ಯ ಪ್ರಸಂಗವನ್ನು ನಾವು ಅನೇಕ ವರ್ಷಗಳಿಂದ ನೋಡಿಕೊಂಡು ಬರುತ್ತಿದ್ದೇವೆ. ಇವತ್ತು ಅದು ಪುನರಾವರ್ತನೆ ಆಗುತ್ತಿದೆ. ಒಂದು ರೀತಿಯಲ್ಲಿ ಇದರ ಪರಿಸ್ಥಿತಿ ಏನಾಗಬಹುದುಲ ಸಹಜವಾಗಿ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರವಾಗಿ ಕುದುರೆ ವ್ಯಾಪಾರ ಪ್ರಾರಂಭ ಆಗುತ್ತದೆ. ಕೊಂಡು ತೆಗೆದುಕೊಳ್ಳುವಂತಹ ವ್ಯಾಪಾರ ಬೇರೆಬೇರೆ ರೂಪದಲ್ಲಿ ಇರಬಹುದು. ಅಧಿಕಾರ ಇರುವಂತಹ ಮುಖ್ಯಮಂತ್ರಿಗಳು ಕೆಲವು ಛೇರ್ಮನ್‌ಗಿರಿಯನ್ನು ಕೊಡುತ್ತೇವೆಂದು ಆಸೆ ಆಮಿಷಗಳನ್ನು ಒಡ್ಡಿ ಅವರಿಗೆ ಅಡ್ರೆಸ್ ಕೊಟ್ಟು, ನಿನಗೆ ಅದು ; ನಿನಗೆ ಇದು, ನೀನು ಹುಡುಕಿಕೊಂಡು ಬಾ. ನಿನಗೆ ಯಾವುದು ಬೇಕು ಕೇಳಿಕೊಂಡು ಬಾ. ಛೇರ್ಮನ್‌ಗಿರಿ ಆಶ್ವಾಸನೆ ಇರಬಹುದು; ಇಲ್ಲವೇ ಕೆಲವು ಮಂತ್ರಿಗಳನ್ನು ತೆಗೆಯುತ್ತಿದ್ದಾರೆ. ನಿನ್ನನ್ನು ಅಲ್ಲೇ ಕೂರಿಸಿರುತ್ತೇನೆ ಚಿಂತೆ ಮಾಡಬೇಡ ಎನ್ನುವ ಮಂತ್ರಿಗಿರಿ ಆಶ್ವಾಸನೆ ಇರಬಹುದು; ನಿನಗೆ ಎಂಎಲ್‌ಸಿ ಮಾಡುತ್ತೇನೆ, ಮತ್ತೊಂದು ಮಾಡುತ್ತೇನೆ ಎನ್ನುವ ಆಸೆ ಇರಬಹುದು; ಅಥವಾ ಇನ್ನೂ ಏನಾದರೂ ಆಸೆ ಒಡ್ಡುವುದು; ಈ ರೀತಿ ಕರ್ನಾಟಕ ರಾಜ್ಯದಲ್ಲಿ ಒಂದು ರೀತಿ, ಕಳೆದ ಮೂರು ವರ್ಷದಿಂದೀಚೆಗೆ ಕುದುರೆ ವ್ಯಾಪಾರವನ್ನು ಕೊಂಡು ತೆಗೆದುಕೊಳ್ಳುವಂತಹ ವ್ಯವಹಾರವನ್ನು ಅನಿವಾರ್ಯವಾಗಿ ನಾವು ಅಜೀರ್ಣವಾದ ಬಹುಮತ ಇರುವಾಗಲೂ ಸಹಿತ ನಡೆದಿರುವುದನ್ನು ನಾವು ಕೈಕಟ್ಟಿ ನೋಡಿ ಕುಳಿತುಕೊಳ್ಳುವಂತಹ ಒಂದು ವಿಚಿತ್ರವಾದ ಪರಿಸ್ಥಿತಿ ಬಂದಿದೆ. ಒಬ್ಬ ಮುಖ್ಯಮಂತ್ರಿಗೆ ಆಮಿಷ, ಒತ್ತಡ, ಹೆದರಿಕೆ, ದಿನ ನಿತ್ಯದ ವಿಷಯಗಳು ಆಗಿರುವಂತಹದ್ದು ನಿಜಕ್ಕೂ ಸಹ ನಾವು ಯಾರೂ ನಿರೀಕ್ಷೆ ಮಾಡಿರಲಿಲ್ಲ. ಈ ನಾಡಿನ ಜನಕ್ಕೆ ಬಹುಮತ ಸಿಕ್ಕಿರುವಂತಹ ಸರ್ಕಾರದವರು ಈ ರೀತಿ ನಡವಳಿಕೆಯನ್ನು ಮಾಡಬಹುದು ಎಂದು ನಾವು ನಿರೀಕ್ಷೆ ಮಾಡಿರಲಿಲ್ಲ.

ಶ್ರೀನ್ನು. ಮಹದೇವ್ : – ಪಾಯಿಂಟ್ ಆಫ್ ಆರ್ಡರ್ ಅಧ್ಯಕ್ಷರೇ, ಈಗ ಕುದುರೆ ವ್ಯಾಪಾರ ನಡೆಯುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಆದರೆ 180 ಜನ ಶಾಸಕರು ಒಂದೇ ಪಕ್ಷದವರಿರುವಾಗ ನಮಗೆ ಕುದುರೆ ವ್ಯಾಪಾರದ ವಿಚಾರ ಏಕೆ ಬರುತ್ತದೆ. ದಯವಿಟ್ಟು ತಾವು ಹೇಳಿ. ಇದು ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ನಡೆಯಿತು; ನಮ್ಮ ಕಾಲದಲ್ಲಿ ಅಂತೂ ನಡೆಯಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಕುದುರೆ ವ್ಯಾಪಾರದಲ್ಲಿ ನಿಮ್ಮನ್ನು ಸಸ್ಪೆಂಡ್ ಮಾಡಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ: ರಾಮಕೃಷ್ಣ ಹೆಗಡೆ ಅವರ ಕಾಲದಲ್ಲಿ ನೀವೇನು ಕುದುರೆ ವ್ಯಾಪಾರ ಮಾಡುವುದಕ್ಕೆ ಬಂದಿದ್ದರಾ? ಸುಮ್ಮನೇ ಕೂಡಿ; ಸಸ್ಪೆಂಡ್ ಆದ ಮೆಂಬರ್ ನೀವು. ಏನು ಮಾತನಾಡುತ್ತೀರಿ?

ಶ್ರೀ ವಾಟಾಳ್‌ನಾಗರಾಜ್ :– ಇವರು ಯಾವ ಪಕ್ಷ ಎಂದು ಮೊದಲು ನಿರ್ಧಾರ ಆಗಬೇಕಾಗಿದೆ, ಆಮೇಲೆ ಮುಂದಿನ ವಿಚಾರ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಕುದುರೆ ವ್ಯಾಪಾರದಲ್ಲಿ ನಿರತರಾದವರು ಸಿಕ್ಕಿಬಿದ್ದು

ಸಸ್ಪೆಂಡ್ ಆಗಿದ್ದಾರೆ. ಈಗ ಇವರ ಪರಿಸ್ಥಿತಿ ನೋಡಿ, ಹೇಗಾಗಿದೆಯೆಂದು? ಇವೊತ್ತು ನಿಮ್ಮನ್ನು ನಾವು ಸಸ್ಪೆಂಡ್ ಮಾಡಿದ್ದೇವೆಯೇ? ನಿಮ್ಮನ್ನು ಗೆಲ್ಲಿಸಿದ ನಿಮ್ಮ ಕ್ಷೇತ್ರದ ಜನರು ಸಸ್ಪೆಂಡ್ ಮಾಡಿದ್ದಾರಾ? ನಿಮ್ಮ ಪಕ್ಷದವರೇ ನಿಮ್ಮನ್ನು ಸಸ್ಪೆಂಡ್ ಮಾಡಿದ್ದಾರೆಂದರೆ, ನೀವು ಕುದುರೆ ವ್ಯಾಪಾರ ನಡೆಸಿರುವುದಕ್ಕೆ ಇದಕ್ಕಿಂಥ ಸಾಕ್ಷಿ ಇನ್ನೇನು ಬೇಕು? ನಾಚಿಕೆಯಾಗಬೇಕು.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಕುದುರೆಗಳನ್ನು ಮಾನ್ಯ ಸದಸ್ಯರಾದ ಮಹದೇವುರವರಿಗೆ ಹೋಲಿಸುವುದು ಸರಿಯಲ್ಲ, ಅವರನ್ನು ಆನೆಗೆ ಹೋಲಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ನಾವು ವಿಶೇಷವಾಗಿ ಕಾಣುತ್ತಿರುವಂತಾದ್ದು, ಈಗ ಕಾಣುತ್ತಿರುವಂತಾದ್ದು, ಒಂದು ರೀತಿಯ ರಾಜಕೀಯ ಅಸ್ಥಿರತೆಯ ವಾತಾವರಣ; ವ್ಯಾಪಕವಾಗಿ ಭ್ರಷ್ಟಾಚಾರ ತಾಂಡವವಾಡುತ್ತಿರುವ ಅನೇಕ ಘಟನೆಗಳು, ಆರ್ಥಿಕ ದಿವಾಳಿತನದ ದುಸ್ಥಿತಿ, ಪೊಳ್ಳು ಘೋಷಣೆಗಳು, ಸ್ಥಗಿತಗೊಂಡಿರತಕ್ಕ ಅಭಿವೃದ್ಧಿ ಕಾರ್ಯ, ಇದರಿಂದ ನಾಡಿನ ಜನರು ಬೇಸತ್ತಿರುವ ಒಂದು ವಿಚಿತ್ರವಾದಂಥ ಪರಿಸ್ಥಿತಿ. ಕೇಂದ್ರ ಸರ್ಕಾರದಲ್ಲಿರುವ ಒಬ್ಬ ಎಐಸಿಸಿ ವೀಕ್ಷಕರು ಕಾಂಗ್ರೆಸ್ ಸಂಸ್ಕೃತಿ ಬಗ್ಗೆ ಹೇಳಿರುವುದು ಉದಯವಾಣಿ ಪತ್ರಿಕೆಯ ಮುಖಪುಟದಲ್ಲಿ ಬಂದಿದೆ. ಕಾಂಗ್ರೆಸ್ ಸಂಸ್ಕೃತಿ ಹೇಗಿದೆಯೆಂದು ಅವರೇ ಒಪ್ಪಿಕೊಂಡಿದ್ದಾರೆ. ಇದು ಯಡಿಯೂರಪ್ಪನವರು ಹೇಳುವ ಮಾತಲ್ಲ. ಸನ್ಮಾನ್ಯ ಶ್ರೀ ವಿ.ಎನ್. ಗಾಡ್ಗೀಲ್‌ರವರು ನಿನ್ನೆ ಉದಯವಾಣಿ ಪತ್ರಿಕೆಯ ಸುದ್ದಿಗಾರರೊಂದಿಗೆ ಮಾತನಾಡುತ್ತಾ, 'ಬಿಕ್ಕಟ್ಟು ಎದುರಾದಾಗಲೇ ಒಗ್ಗಟ್ಟಾಗುವುದು ಕಾಂಗ್ರೆಸ್‌ನ ವಿಶೇಷ' ಎಂದು ಹೇಳಿದ್ದಾರೆ. ಅಂದರೆ, ಅಜೀರ್ಣವಾಗುವಷ್ಟು ಬಹುಮತವನ್ನು ನಿಮಗೆ ಕೊಟ್ಟಂಥ ಈ ನಾಡಿನ ಜನರಿಗೆ ನೀವೇ ಸಮಸ್ಯೆಗಳನ್ನು ಉದ್ಭವಿಸಿಕೊಂಡು, ಬಿಕ್ಕಟ್ಟು ತಂದುಕೊಂಡು, ಇವರು ಸರಿಯಿಲ್ಲ ಎಂದು ಅವರು, ಅವರು ಸರಿಯಿಲ್ಲವೆಂದು ಇವರು ಹೇಳುತ್ತಾ, ಈ ರೀತಿಯ ಒಂದು ರಾಜಕೀಯ ಗೊಂದಲದ ವಾತಾವರಣ ಸೃಷ್ಟಿಸುತ್ತಾ, ಈ ರಾಜಕೀಯ ದೊಂಬರಾಟ ಏನು ನಡೆಯುತ್ತಿದೆ, ಇದನ್ನು ಈ ನಾಡಿನ ಜನರು ಸಹಿಸಬೇಕೆಂದು ತಾವು ಹೇಳುತ್ತೀರಾ? ಇದು ಸರಿಯೇ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ: ಮಾನ್ಯ ಸದಸ್ಯರಾದ ಯಡಿಯೂರಪ್ಪನವರ ಭಾಷಣದಲ್ಲಿ ಇವೊತ್ತು ಏನು ವಿಶೇಷವಿದೆಯೆಂದರೆ, ಒಂದು ನಿರ್ಣಯವನ್ನು ಏನು ಸಭೆಯ ಮುಂದಿಟ್ಟಿದ್ದಾರೆ, ಆ ನಿರ್ಣಯಕ್ಕೆ ಸಂಬಂಧವಿಲ್ಲದಿರುವಂಥ ಮಾತುಗಳನ್ನು ಆಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದೊಳಗೆ ಏನೇನು ವಿದ್ಯಮಾನಗಳು ನಡೆಯುತ್ತಿವೆ, ದೆಹಲಿಯಲ್ಲಿ ಏನು ನಡೆಯುತ್ತಿದೆ, ಬೆಂಗಳೂರಿನಲ್ಲಿ ಏನು ನಡೆಯುತ್ತಿದೆ, ಇದರ ಬಗ್ಗೆಯೇ ಹೇಳುತ್ತಿದ್ದಾರೆಯೇ ವಿನಹ, ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ಹೋದ ವರ್ಷ ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ? ಈ ವರ್ಷ ಎಷ್ಟು ಹಣ ಖರ್ಚು ಮಾಡಿದೆ? ಜನತಾ ದಳ ಸರ್ಕಾರವಿದ್ದಾಗ ಅಭಿವೃದ್ಧಿ ಕಾರ್ಯಗಳಿಗಾಗಿ ಎಷ್ಟು ಹಣ ಖರ್ಚು ಮಾಡಿದರು? ಇವರ ಪಕ್ಷದವರು ಬೆಂಬಲ ಕೊಡದಿರುವಂಥ ಪಕ್ಷದ ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ ಎಂಬ ಬಗ್ಗೆ ಅಂಕಿ-ಅಂಶಗಳ ಸಮೇತ ಪ್ರಸ್ತಾಪಿಸಿ ಸರ್ಕಾರದ ವೈಫಲ್ಯತೆಯನ್ನು ಎತ್ತಿ ತೋರಿಸುವುದು ಅವರ ಕರ್ತವ್ಯವಾಗಿತ್ತು. ಆದರೆ, ಅದರ ಬಗ್ಗೆ ಪ್ರಸ್ತಾಪಿಸದೆ ಪತ್ರಿಕೆಗಳಲ್ಲಿ ಬಂದ ವರದಿಗಳ ಆಧಾರದ ಮೇಲೆ ಕಾಂಗ್ರೆಸ್ ಪಕ್ಷದಲ್ಲಿ ಉದ್ಭವಿಸಿರುವ ಭಿನ್ನಾಭಿಪ್ರಾಯದ ಬಗ್ಗೆಯೇ ಹೇಳುತ್ತಿದ್ದಾರೆ. ನಮ್ಮ ಪಕ್ಷದೊಳಗೆ ನಡೆಯುತ್ತಿರುವ ವಿದ್ಯಮಾನಗಳನ್ನು ಸದನದಲ್ಲಿ ಹೇಳುತ್ತಾ ಹೋದರೆ ಈ ಸದನದ

ಸತ್ಸಂಪ್ರದಾಯಕ್ಕೆ ಅದು ಎಷ್ಟು ವಿರೋಧವಾಗಿದೆಯೋ, ತಾವು ಹೇಳುವುದೂ ಅದೇ ರೀತಿಯಲ್ಲಿದೆ. ಆದುದರಿಂದ, ತಾವು ದಯಮಾಡಿ ವಿಷಯಕ್ಕೆ ಬನ್ನಿ. ಸರ್ಕಾರದ ಸಾಧನೆ ಯಾವುದು? ಸಾಧನೆ ಇಲ್ಲದಿರುವುದು ಯಾವುದು? ಎಂಬುದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅದನ್ನು ಹೇಳುತ್ತೇನೆ: ತಾವು ಪೆನ್ನು, ಪೇಪರನ್ನು ಕೈಯಲ್ಲಿಟ್ಟುಕೊಳ್ಳಿ. ಇವೊತ್ತು ಒಬ್ಬ ಸಚಿವರಾಗಿ ಏನು ಹೇಳಿದ್ದಾರೆ ಸ್ವಾಮಿ? ಇದು ಅಗತ್ಯವಿಲ್ಲವೆಂದು ನೀವು ಹೇಳುವುದಾದರೆ ನನ್ನ ದೃಷ್ಟಿಯಲ್ಲಿರುವ ಅಂಕಿ-ಅಂಶ ಏನು ಹೇಳಬಹುದು? ನೀವು ಕೆಲವು ಆಶ್ವಾಸನೆಗಳನ್ನು ಕೊಟ್ಟಿದ್ದೀರಿ? ಅದನ್ನು ನಾವು ಹೇಳಿದ್ದೇವೆಯೇ? ನಿನ್ನೆ ಸದನದಲ್ಲಿ ಯಾವುದೋ ಪ್ರಶ್ನೆ ಬಂದಾಗ ಉತ್ತರವಾಗಿ ಬೆಳಿಗ್ಗೆ ಮಾನ್ಯ ಸಚಿವರಾದ ರಂಗನಾಥ್‌ರವರು ಹೇಳಿದರು. ಏನೆಂದರೆ, ಯಾವುದೇ ಸರ್ಕಾರವಿದ್ದರೂ ಎಲ್ಲವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ, ಆದರೆ, ಯಾವುದನ್ನು ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾತ್ರ ಹೇಳಿದೆ ಎಂದು. ಜನರ ಮುಂದೆ ಪೊಳ್ಳು ಘೋಷಣೆಗಳನ್ನು ಹೇಳಿಕೊಂಡು, ಕಾಲ ಕಳೆಯುವಂಥ ರಾಜಕಾರಣ ಏನು ಮಾಡುತ್ತಿದ್ದೀರಿ, ಇದರ ಬಗ್ಗೆ ನಮಗೆ ಚಿಂತೆಯಾಗಿದೆ. ಇವೊತ್ತು ನಿಮ್ಮ ಮಂತ್ರಿಮಂಡಲದ ಸಚಿವರು ಯಾವುದರ ಬಗ್ಗೆ ಗಮನ ಕೊಡಬೇಕು? ಜನರ, ನಾಡಿನ ಅಭಿವೃದ್ಧಿ ಬಗ್ಗೆ ಯೋಚನೆ ಮಾಡಬೇಕು. ಯಾರೋ ಹೇಳಿದ್ದನ್ನು ಇಲ್ಲಿ ಹೇಳಬೇಡಿ ಎಂದೆನ್ನುತ್ತೀರಾ? ನಿಮ್ಮ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿಯವರು 'ಪಕ್ಷದೊಳಗೆ ಉದ್ಭವಿಸಿರತಕ್ಕ ಚಾಕು-ಚೂರಿ ಸಂಸ್ಕೃತಿ ವಿರುದ್ಧ ಅಧಿವೇಶನ ಮುಗಿದ ನಂತರ ವಿವಿಧ ಸಂಘ-ಸಂಸ್ಥೆಗಳೊಡಗೂಡಿ ಹೋರಾಡುತ್ತೇವೆ' ಎಂದು ಹೇಳಿದ್ದಾರೆ. ಇದಕ್ಕೋಸ್ಕರವೇ ನಿಮ್ಮನ್ನು ಜನರು ಆಯ್ಕೆ ಮಾಡಿ ಕಳುಹಿಸಿರುವುದು? ಈ ರೀತಿ ಹೇಳಿಕೆ ಕೊಡುವುದಕ್ಕೋಸ್ಕರವೇ ಇವರನ್ನು ಮಂತ್ರಿಗಳನ್ನಾಗಿ ಮಾಡಲಾಗಿದೆಯೆ? ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಇದು ನೇರವಾಗಿ ಈ ನಾಡಿನ ಜನರಿಗೆ ಸಂಬಂಧಪಟ್ಟಂಥ ವಿಚಾರ. ಯಾರೋ ರಸ್ತೆಯಲ್ಲಿ ಒಬ್ಬರು ನಿಂತುಕೊಂಡು ಮಾತನಾಡಿದಂಥ ಮಾತನ್ನು ನಾನು ಹೇಳುತ್ತಿಲ್ಲ. ಇವೊತ್ತು ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ, 'ನಮ್ಮವರಾದ ಕೆಲವು ಕಾಂಗ್ರೆಸ್ ಭಿನ್ನಮತೀಯ ಶಾಸಕರು ತಮ್ಮ ಜೇಬು ಖಾಲಿಯಾಗಿದೆಯೆನ್ನುವ ಕಾರಣಕ್ಕಾಗಿ ಸರ್ಕಾರದ ಖಜಾನೆ ಖಾಲಿಯಾಗಿದೆಯೆಂದು ಕೂಗು ಹಾಕುತ್ತಿದ್ದಾರೆ' ಎಂದು. ಅವರು ಹೇಳಿಕೆ ಕೊಡಲಿ, ನೀವೇನಾದರೂ ಅದಕ್ಕೆ ಪ್ರತಿಭಟಿಸಿದ್ದೀರಾ? ನಿಮ್ಮ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಗಲಾಟೆಯಾಗಿರಬಹುದು, ಈ ರಾಜ್ಯದ ಒಬ್ಬ ಮುಖ್ಯಮಂತ್ರಿ ತನ್ನವರ ಪರವಾಗಿ, ತನ್ನ ಶಾಸಕರ ಪರವಾಗಿ 'ಈ ಭಿನ್ನಮತೀಯ ಶಾಸಕರ ಜೇಬು ಖಾಲಿಯಾಗಿದೆ, ಅದಕ್ಕೋಸ್ಕರ ಕೂಗು ಹಾಕುತಿದ್ದಾರೆ' ಎಂದು ಹೇಳುವುದಾದರೆ ನಾವೇನು ತಿಳಿದುಕೊಳ್ಳಬೇಕು? ಈ ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡಿ ಜೇಬುಗಳನ್ನು ಭರ್ತಿ ಮಾಡಿಕೊಳ್ಳುತ್ತಿದ್ದಾರೆಂದು ಅರ್ಥವೇ? ಮುಖ್ಯಮಂತ್ರಿಗಳು ಈಗ ಸದನದಲ್ಲಿಲ್ಲ. ಇದಕ್ಕೆ ಹಿರಿಯರಾಗಿರತಕ್ಕಂಥ ಯಾರಾದರೊಬ್ಬ ಸಚಿವರು ಇಲ್ಲಿ ಎದ್ದು ನಿಂತು ಉತ್ತರ ಕೊಡಬೇಕಾಗುತ್ತದೆ. ಇದರ ಬಗ್ಗೆ ಈ ಕಡೆ ಕುಳಿತಿರುವ ನಾವುಗಳು ಯಾರಾದರೂ ಬಾಯಿ ತಪ್ಪಿ ಹೇಳಿದ್ದೇವೆಯೇ? ಅರ‍್ಯಾಕ್, ಗ್ರಾನೈಟ್, ಕ್ಯಾಪಿಟೇಷನ್ ಇಂತಹ ಲಾಬಿಗಳ ಕಪಿಮುಷ್ಟಿಯಲ್ಲಿ ಸಿಲುಕಿಕೊಂಡಿದ್ದೇವೆಂದು ನಾವು ಹೇಳಿದ್ದೇವೆಯೇ? ಇವೆಲ್ಲವನ್ನೂ ನೀವೇ ಹೇಳಿದ್ದು ತಾನೇ? ಈ ದೇಶದ ಪ್ರಧಾನಿ ಹಾಗೂ ಕಾಂಗ್ರೆಸ್ ಅಧ್ಯಕ್ಷರಿಗೆ ನೀವು ಕೊಟ್ಟಿರುವಂಥ ಮನವಿಯಲ್ಲಿ

ಇರುವಂತಾದ್ದನ್ನು ಹೇಳಬೇಕು ತಾನೇ? ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಯಾವ ಕಾರಣಕ್ಕೋಸ್ಕರ, ಯಾವ ಉದ್ದೇಶಕ್ಕೋಸ್ಕರ ನಿಮ್ಮನ್ನು ಜನರು ಆಯ್ಕೆಮಾಡಿ ಕಳುಹಿಸಿದರೋ, ಆ ಕೆಲಸ ಮಾಡದೆ ನೀವು ಕೆಸರು ಚೆಲ್ಲಿಕೊಳ್ಳುತ್ತಾ, ನಿಮ್ಮ ಕರ್ತವ್ಯವನ್ನು ಮರೆತಿರುವಂಥ ಸಂದರ್ಭದಲ್ಲಿ, ನಿಮ್ಮನ್ನು ಬಡಿದು ಎಬ್ಬಿಸಬೇಕಲ್ಲವೇ? ಅಭಿವೃದ್ಧಿ ಕಾರ್ಯ ಆಗುವುದಿಲ್ಲವೆಂದು ನಮಗೆ ಗೊತ್ತಿದೆ. ಸರ್ಕಾರದ ಬೊಕ್ಕಸದಿಂದ ಸೋರಿಕೆಯಾಗುತ್ತಿರುವುದನ್ನು ತಪ್ಪಿಸಿ ಬೊಕ್ಕಸವನ್ನು ಭರ್ತಿ ಮಾಡಲು ನಿಮ್ಮಿಂದ ಸಾಧ್ಯವಿಲ್ಲವೆನ್ನುವುದು ನಮಗೆ ಗೊತ್ತಿದೆ. ಕೊನೆಯಪಕ್ಷ ಈಗಿರತಕ್ಕ ವ್ಯವಸ್ಥೆಯನ್ನಾದರೂ ಹಾಳು ಮಾಡಬೇಡಿ ಎಂದು ನಾವು ಕೇಳಬೇಕಲ್ಲವೇ? ಇರತಕ್ಕ ವ್ಯವಸ್ಥೆಯನ್ನು ಹಾಳುಮಾಡಬೇಡಿ ಎಂದು ಕೇಳುವುದನ್ನು ಬಿಟ್ಟರೆ ತಾವು ನಮಗೇನನ್ನು ಬಿಟ್ಟು ಕೊಟ್ಟಿದ್ದೀರಿ? ತಾವು ಯೋಜನೆಗಳ ಬಗ್ಗೆ ಹೇಳಿ ಎಂದು ಹೇಳಿದ್ದೀರಿ. ಆಶ್ರಯ, ಅಕ್ಷಯ, ಆರಾಧನ, ಶುಶ್ರೂಷ, ವಿಶ್ವ, ಮುಂತಾದ ಹೊಸಹೊಸ ಯೋಜನೆಗಳನ್ನು ಜಾರಿ ಮಾಡಿ ಈ ರಾಜ್ಯದ ಜನರ ಮುಂದೆ ಆಸೆಯ ಒಂದು ಮಹಾಪೂರವನ್ನೇ ಹರಿಸಿದರು. ಏನಾಯಿತು ಆ ಯೋಜನೆಗಳು? ನಿಮ್ಮದೇ ಸರ್ಕಾರ ಇದೆ ತಾನೇ? ಬೇರೆ ಸರ್ಕಾರ ಬಂದು ಆ ಯೋಜನೆಗಳನ್ನು ತೆಗೆದುಹಾಕಿಲ್ಲ; ಅಂದರೆ ನಿಮ್ಮದೇ ಸರ್ಕಾರ, ನಿಮ್ಮ ಹಿಂದಿನ ಮುಖ್ಯಮಂತ್ರಿಗಳು ಇವೆಲ್ಲಾ ಜನಪರ ಕಾರ್ಯಕ್ರಮಗಳೆಂದು ಹಾಡಿ ಹೊಗಳಿದವರು; ಪತ್ರಿಕೆಯ ಮುಖಪುಟಗಳಲ್ಲಿ ಬಂತು; ಜನರು ಆಸೆಯ ಕಣ್ಣಿಂದ ಎದುರುನೋಡುತ್ತಿದ್ದರು; ಆ ಕಾರ್ಯಕ್ರಮಗಳು ಏತಕ್ಕೆ ನಿಂತುಹೋಯಿತು? ಆ ಕಾರ್ಯಕ್ರಮಕ್ಕೋಸ್ಕರ, ದೊಡ್ಡದೊಡ್ಡ ಪ್ರಚಾರವನ್ನು ಮಾಡುವುದಕ್ಕೋಸ್ಕರ ಏನೇನು ಖರ್ಚು ಮಾಡಿದ್ದೀರೋ ಅದು ಆ ಪ್ರಯೋಜನದಾರರಿಗೆ ತಲುಪಿಲ್ಲವಲ್ಲಾ? ಅದೇನು ಜನಪರ ಕಾರ್ಯಕ್ರಮವಲ್ಲವೇ? ನೀವೇ ಅಲ್ಲಿ ಮಂತ್ರಿಗಳಾಗಿ ಕುಳಿತು ಈ ಒಂದು ಯೋಜನೆಯ ಪರವಾಗಿ ಮಾತನಾಡಿದಂಥ ಅನೇಕ ಟಿಪ್ಪಣಿಯನ್ನು ಕೊಡಲೇ? ಹೊಸಹೊಸ ಘೋಷಣೆಗಳನ್ನೇಕೆ ಮಾಡುತ್ತೀರೆಂದು ನಾನು ನಿಮ್ಮಲ್ಲಿ ಕೇಳುತ್ತೇನೆ. ಅಂದಿನ ಬೀದಿ ಭಾಗ್ಯ ಯೋಜನೆ ಮೊಯ್ಲಿಯವರ ಆಡಳಿತದಲ್ಲಿ ಆಶಾಕಿರಣವೆಂದು ಮಾರ್ಪಾಟಾಯಿತು; ಆಶ್ರಯ ಯೋಜನೆಯನ್ನು ನೆರಳಿನ ಭಾಗ್ಯವಾಗಿ ಬದಲಾವಣೆ ಮಾಡಿದ್ದೀರಿ, ಸ್ವಾತಂತ್ರ್ಯ ದಿನಾಚರಣೆಯ ದಿವಸ ಮುಖ್ಯಮಂತ್ರಿಗಳು ಇಂದಿರಾಜ್ಯೋತಿ ಕಾರ್ಯಕ್ರಮವನ್ನು ಘೋಷಣೆ ಮಾಡಿದರು; ತುಂಬಾ ಸಂತೋಷ, ಅದಕ್ಕೆ ಸ್ವಾಗತ. ಆದರೆ ಮಹಿಳೆಯರ ಬಗ್ಗೆ ನಿಮ್ಮ ಅನೇಕ ಕಾರ್ಯಕ್ರಮಗಳು ಕಾರ್ಯರೂಪಕ್ಕೆ ಬರುತ್ತಿದೆ, ಆದರೆ ಹೊಸ ಹೆಸರನ್ನು ಹೇಳಿ ಏನೋ ಒಂದು ಆಸೆ ಆಕಾಂಕ್ಷೆಯನ್ನು ಜನರಲ್ಲಿ ಉಂಟುಮಾಡಿ ಏನೋ ಸರ್ಕಾರದವರು ಮಾಡಬಹುದು, ಏನೋ ಒಂದು ಕೆಲಸ ಮಾಡಬಹುದು ಎನ್ನತಕ್ಕ ವಿಚಿತ್ರವಾದ ಪರಿಸ್ಥಿತಿಗೆ ನಮ್ಮನ್ನು ತರುತ್ತಿದ್ದೀರಿ, ಇದರ ಬಗ್ಗೆ ತಾವು ಎಚ್ಚರ ವಹಿಸಬೇಕಾಗುತ್ತದೆ. ಸನ್ಮಾನ್ಯ ಹಿರಿಯ ಸಚಿವರಾದ ರಾಮಸ್ವಾಮಿಯವರು ಅಂಕಿಅಂಶಬೇಕೆಂದು ಕೇಳಿದರು. ಅದು ಬೇಕೇ? ಹಾಗಾದರೆ ಒಂದಕ್ಕೆ ನೀವು ಉತ್ತರವನ್ನು ಕೊಡಿ. ನೀವು ಇರುತ್ತೀರೋ, ಸರ್ಕಾರ ಇರುತ್ತದೋ ಗೊತ್ತಿಲ್ಲ, ಆದರೆ ಆಡಳಿತ ವ್ಯವಸ್ಥೆಯಂತೂ ಇರುತ್ತದೆ ತಾನೇ? ನೀವು ಆಶ್ವಾಸನೆಯನ್ನು ಕೊಟ್ಟಿದ್ದೀರಿ ಅಲ್ಲವೇ? ಎರಡೇ ವಿಷಯದ ಬಗ್ಗೆ ತಾವು ಉತ್ತರವನ್ನು ಕೊಡಿ. ಬಜೆಟಿನ ಭಾಷಣದಲ್ಲಿ ತಾವು ಈ ಸಾರಿ ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಸುಮಾರು 2867ಕೋಟಿ ರೂಪಾಯಿ ಆದಾಯ ಬರಬಹುದು ಎಂದು ಹೇಳಿದ್ದೀರಿ. ಆದರೆ ಇವತ್ತಿನ ನಿಮ್ಮ ಪರ್ಫಾರ್‌ಮೆನ್ಸ್ ನೋಡಿದರೆ, ನೀವು ಇದುವರೆಗೆ ಸಂಗ್ರಹ ಮಾಡಿರತಕ್ಕಂಥ ಹಣವನ್ನು ನೋಡಿದಾಗ ನನಗನ್ನಿಸುತ್ತದೆ,

ಈ ಕ್ಲಾಸಿಕ್ ಕಂಪ್ಯೂಟರ್‌ನಿಂದಾಗಿ ಒಂದು ರೀತಿಯಲ್ಲಿ ಸರಕಾರದ ಬೊಕ್ಕಸ ಲೂಟಿಯಾಗಿದೆ. ಎಂದು ತಾವು ಒಪ್ಪುವುದಾದರೆ ಅದು ಸತ್ಯ ಆದರೆ ಏಕೆ ಸಿ.ಬಿ.ಐ ತನಿಖೆಯನ್ನು ನಿಧಾನ ಮಾಡಿಸುತ್ತೀರಿ? ವರದಿ ನಿಮ್ಮ ಕೈಗೆ ಬಂದಿದೆಯೇ? ಕ್ರಿಮಿನಲ್ ಪ್ರೊಸೀಜರ್ ಕೋಡ್ ಅನ್ವಯ ಯಾವ ಮೊದಲನೇ ಅಕ್ಷಮ್ಯ ಅಪರಾಧ ಮಾಡಿರುವಂತಹವರು ಇದ್ದಾರೆ, ಕಾನೂನು ಬಾಹಿರವಾಗಿ ಟೆಂಡರನ್ನು ಟೆಕ್ನಿಕಲ್ ಒಪೀನಿಯನ್ನು ಪಡೆಯದೇ ಒಪ್ಪಿಕೊಂಡಂತಹವರು ಯಾರಿದ್ದಾರೆ ಅವರ ಬಗ್ಗೆ ಸೂಕ್ತ ವಿಚಾರಣೆ ಮಾಡಬೇಕಾಗುತ್ತದೆ. ಸರಕಾರದಲ್ಲಿ ಹಣವಿಲ್ಲದೆ ಜನ ಸಾಯುತ್ತಿರಬೇಕಾದರೆ ಒಂದೂವರೆ ಕೋಟಿಯನ್ನು ಅವತ್ತೇ ಕೊಟ್ಟು ಅವತ್ತೇ ಅಡ್ವಾನ್ಸ್ ಕೊಟ್ಟು ಅವತ್ತೇ ಡ್ರಾ ಮಾಡಿಕೊಂಡು ಬಂದಿರತಕ್ಕಂತಹವರು ಯಾರಿದ್ದಾರೆ, ಅವರನ್ನು ಜೈಲಿಗೆ ಕಳಿಸುತ್ತೀರಾ? ಆ ಧೈರ್ಯ ನಿಮಗಿದ್ದರೆ ಅದಕ್ಕೆ ಶಸ್ತ್ರಚಿಕಿತ್ಸೆ ಎಂದು ಕರೆಯುತ್ತೇವೆ. ವೀರಪ್ಪಮೊಯಿಲಿಯವರಿಗೆ ಅಡ್ಡ ಬೀಳುತ್ತಿದ್ದೆ ಈ ನಾಡಿನಜನತೆಯ ಪರವಾಗಿ; ಅದನ್ನು ಮಾಡಿದ್ದರೆ; ಆದರೆ ಅದನ್ನು ಮಾಡುವುದಕ್ಕೆ ನೀವು ಸಿದ್ಧರಿಲ್ಲ. ಇದು ನಮ್ಮದು ಆರೋಪ. ನೀವು ಸಿ.ಬಿ.ಐ ತನಿಖೆ ಮಾಡದಿದ್ದರೆ ನಾವೇನು ಬಲವಂತ ಮಾಡುವುದಕ್ಕಾಗುತ್ತದೆಯೇ ಇಲ್ಲಿ 30 ಜನ ಇದ್ದುಕೊಂಡು? ಅಂದರೆ ತನಿಖಾ ವ್ಯವಸ್ಥೆಯನ್ನು ಸಹ ನಿಮ್ಮ ರಾಜಕೀಯ ದೊಂಬರಾಟಕ್ಕೆ ದುರುಪಯೋಗ ಮಾಡಿಕೊಳ್ಳುವಂತಹ ಒಂದು ವ್ಯವಸ್ಥೆ ಮಾಡುವುದಕ್ಕೆ ಹೊರಟಿದ್ದೀರಿ. ಇದು ನಿಮಗೆ ಗೌರವ ತರುವಂತಹ ಸಂಗತಿಯೇ? ಆಶ್ರಯ ಯೋಜನೆ , ಇದರ ಬಗ್ಗೆ ನಾನು ಯಾರ ಮೇಲೂ ಆರೋಪ ಮಾಡುವುದಕ್ಕೆ ಸಿದ್ಧನಿಲ್ಲ. ಆದರೆ ನಾನು ನಿಮ್ಮನ್ನು ಕೇಳುತ್ತೇನೆ. ಆಶ್ರಯ ಯೋಜನೆಯಲ್ಲಿ ಈ ನಾಡಿನ ಜನರು, ಕಡುಬಡವರಿಗೆ ಸೂರು ಕೊಡುವಂತಹ ಒಂದು ವ್ಯವಸ್ಥೆ ಇದೆ. ಅಲ್ಲಿಗೆ ಅಂದರೆ ಗೃಹ ಮಂಡಲಿಗೆ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದಿರಿ. ಅಲ್ಲಿರುವಂತಹ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಿಲ್ಲ ಎಂದು ಇವರನ್ನು ನೇಮಕ ಮಾಡಿದಿರಿ. ಅದಕ್ಕಾಗಿ ಸರಕಾರದ ಬೊಕ್ಕಸದ ಕೋಟ್ಯಾಂತರ ರೂಪಾಯಿ ಹಣವನ್ನು ಖರ್ಚು ಮಾಡಿದಿರಿ in the interest of the State; in the interest of the scheme. ಏನಾಯಿತು? ಮನೆಗಳನ್ನು ಕಟ್ಟಿದಿರಾ? ನೀವು ಏನು ಉತ್ತರ ಕೊಟ್ಟಿದ್ದೀರಿ? ತಾಲ್ಲೂಕಿಗೆಒಂದು ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ನೀವೇ ಹೇಳಿದ್ದಿರಿ. ನಮ್ಮ ಎಲ್ಲಾ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದವರೂ ನೀವೆ ತಾನೆ? ಒಂದು ಸಾವಿರ ಬೆನಿಫಿಷರೀಸ್‌ಗಳ ಪಟ್ಟಿಯನ್ನು ಕಳಿಸಿಕೊಟ್ಟಂತಹವರು ನಾವೇ ತಾನೇ? ಈ ನಿಮಿಷದವರೆಗೆ ಒಂದು ಮನೆಯನ್ನೇನಾದರೂ ಕಟ್ಟಿದ್ದೀರಾ? ಮೊನ್ನೆ 27-1-93ರಲ್ಲಿ ಡಿ.ಬಿ. ಚಂದ್ರೇಗೌಡ ಅವರಿಗೆ ನೀವೇ ಇಲ್ಲಿ ಉತ್ತರ ಕೊಟ್ಟಿದ್ದೀರಿ; ಕೊಟ್ಟಿರುವಂತಹ ಉತ್ತರ ಏನು ಎಂದು ಹೇಳುತ್ತೇನೆ. "ಸರಕಾರಿ ಆದೇಶ ಸಂಖ್ಯೆ .ಹೆಚ್‌ಯುಡಿ 352 ಕೆಚ್‌ಬಿ 92 ದಿನಾಂಕ 12-1-92ರ ಆದೇಶದಲ್ಲಿ ಕರ್ನಾಟಕ ಗೃಹ ಮಂಡಲಿ ಆಶ್ರಯ ಯೋಜನೆ ಅಡಿಯಲ್ಲಿ ಮನೆ ನಿರ್ಮಾಣ ಕೆಲಸಕ್ಕೆ ಎಂದು ಗುತ್ತಿಗೆದಾರರಿಗೆ ಬ್ಯಾಂಕ್ ಗ್ಯಾರಂಟಿ ಮತ್ತು ಭದ್ರತೆಯಲ್ಲದೆ ಮುಂಗಡ ಹಣವನ್ನು ಕೊಟ್ಟಿರುವ ವಿಚಾರವನ್ನು ಸಿ.ಒ.ಡಿ ತನಿಖೆಗೆ ವಹಿಸಿದ್ದು ಸಿಒಡಿ ಅವರು ತಮ್ಮ ತಾತ್ಕಾಲಿಕ ವರದಿಯನ್ನು ಸರಕಾರಕ್ಕೆ 30-3-93ರಂದು ಒಪ್ಪಿಸಿರುತ್ತಾರೆ. ಇದರ ಜೊತೆಗೆ ಬ್ಯಾಂಕ್ ಗ್ಯಾರಂಟಿ ಇಲ್ಲದೆ ಗುತ್ತಿಗೆ ಮುಂಗಡವನ್ನು ಕೊಟ್ಟಿರುವುದರ ಬಗ್ಗೆ ನೀವು ಹೇಳಿದ್ದೀರಿ. ನಾನು ತಮ್ಮನ್ನು ಕೇಳುತ್ತೇನೆ. ಯಾರೋ ಒಬ್ಬ ಅಧಿಕಾರಿ ಬ್ಯಾಂಕ್ ಗ್ಯಾರಂಟಿ ಇಲ್ಲದೆ 40 ಕೋಟಿ ರೂ.ಗಳನ್ನು ತಮಗೆ ಬೇಕಾದವನಿಗೆ ಕೊಟ್ಟು ಹಿಂಬಾಗಿಲಿನಿಂದ ತರಿಸಿಕೊಂಡಿರತಕ್ಕದ್ದು

ನಿಜವೇ ಆದರೆ, ಆ ಅಧಿಕಾರಿಯನ್ನು ನೇಣುಹಾಕಿ. ಮಾಡಬಾರದ್ದನ್ನು ನಾವು ಮಾಡಿ ಆ ಅಧಿಕಾರಿಯನ್ನು ದೂರುವುದು ಆಗಬಾರದು ರಾಜಕಾರಣಿಗಳಾದ ನಾವುಗಳು ಅಧಿಕಾರಿಗಳ ಹೆಸರನ್ನು ಹೇಳುತ್ತೇವೆ. ಅದು ಅಸತ್ಯವಾದರೆ, ಅಧಿಕಾರಿಯ ಕೈವಾಡ ಇಲ್ಲದಿದ್ದರೆ, ಅವತ್ತಿನ ಗೃಹ ಮಂಡಲಿಯ ಅಧ್ಯಕ್ಷರು ಆದೇಶವನ್ನು ಕೊಟ್ಟ ಮೇರೆಗೆ ಯಾವುದೇ ಬ್ಯಾಂಕ್ ಗ್ಯಾರಂಟಿ ಇಲ್ಲದೆ ಈ ರೀತಿ 40 ಕೋಟಿಗೂ ಹೆಚ್ಚು ದುರುಪಯೋಗವಾಗಿದೆ ಎಂದು ಹೇಳುವುದಾದರೆ ಮೊದಲನೇ ಅಪರಾಧಿ ಯಾರು? ಯಾರಿಗೆ ಶಿಕ್ಷೆ ಕೊಡಬೇಕಾಗಿತ್ತು? ಏತಕ್ಕೆ ತನಿಖೆ ಮಾಡಿಸಿದಿರಿ? ಇದುವರೆಗೂ ಮನೆಗಳನ್ನು ಕಟ್ಟಿಸಲಿಲ್ಲ. ಸುಮಾರು 7ಸಾವಿರ ಮನೆಗಳನ್ನು ಇಡೀ ರಾಜ್ಯದಲ್ಲಿ ಕಟ್ಟಿಲ್ಲ. ಆ ಮನೆಗಳು ಆಗುತ್ತವೆಂದು ಗುಡಿಸಲುಗಳನ್ನು ಕಿತ್ತುಹಾಕಿಕೊಂಡ ಜನರು ಇವತ್ತು ರಸ್ತೆಯಲ್ಲಿದ್ದಾರೆ. ನಾನು ಹೇಳುತ್ತೇನೆ, ಇದಕ್ಕೆ ಮೇಜರ್ ಸರ್ಜರಿ ಎಂದು. ನಿಜವಾಗಿ ಯಾರೇ ಇರಲಿ. ಒಬ್ಬ ಚುನಾಯಿತ ಪ್ರತಿನಿಧಿ ಜನರ ಪರವಾಗಿ ಅಂಥ ಉನ್ನತ ಹುದ್ದೆಯಾದ ಛೇರ್ಮನ್‌ಗಿರಿಯಲ್ಲಿ ಕುಳಿತಾಗ ಅಲ್ಲಿ ಅಧಿಕಾರಿಗಳು ಹಣವನ್ನು ದುರುಪಯೋಗ ಮಾಡಿಕೊಳ್ಳದಂತೆ ನೋಡಿಕೊಳ್ಳಬೇಕಾಗುತ್ತದೆ ಮತ್ತು ಕಾನೂನು ಬಾಹಿರವಾಗಿ ನಡವಳಿಕೆ ನಡೆಯದಂತೆ, ಕಾನೂನು ಚೌಕಟ್ಟಿನಲ್ಲಿ ಕೆಲಸ ಆಗಬೇಕಾಗುತ್ತದೆ. ಬ್ಯಾಂಕ್‌ಗೆ ಹೋಗಿ 500 ರೂ.ಗಳನ್ನು ಒಬ್ಬ ಬಡವ ತೆಗೆದುಕೊಳ್ಳಬೇಕಾದರೆ ಅವನ ಹೆಂಡತಿಯ ತಾಳಿಯನ್ನು ಗ್ಯಾರಂಟಿಯಾಗಿ ತಂದಿಡಬೇಕಾಗಿದೆ. ಆದರೆ ಇವತ್ತು ಕೋಟಿಗಟ್ಟಲೆ ಹಣವನ್ನು ನೀವು ಹೇಗೆ ಕೊಟ್ಟಿರಿ? ಇದು ಯಾರ ಅಪ್ಪನ ದುಡ್ಡು? ಅವರನ್ನು ಜೈಲಿಗೆ ಕಳುಹಿಸುತ್ತೀರಾ? ಯಾರೇ ಮುಖ್ಯಮಂತ್ರಿ ಆಗಿರಲಿ. ನಾವು ಚಿಂತೆ ಮಾಡುವುದಿಲ್ಲ. ಮೂರು ಮೂರು ದಿನಕ್ಕೆ ಒಬ್ಬೊಬ್ಬ ಮುಖ್ಯಮಂತ್ರಿಗಳನ್ನು ನೀವು ಮಾಡಿಕೊಳ್ಳಿ. ಅದಕ್ಕೆ ನಾವು ಚಿಂತೆ ಮಾಡುವುದಿಲ್ಲ. ಮೊಯ್ಲಿಯವರು ಏನು ಕೆಲಸ ಮಾಡಿದ್ದಾರೆ. ನಾನು ಶಸ್ತ್ರ ಚಿಕಿತ್ಸೆ ಮಾಡಿದೆ. ಅವರನ್ನು ಜೈಲಿಗೆ ಕಳುಹಿಸಿದೆ, ಸಿ.ಬಿ.ಐ ನಿಂದ ತನಿಖೆ ಮಾಡಿಸಿದೆ, ಅವನ ಮನೆ, ಮಠ, ಆಸ್ತಿಗಳನ್ನು ನಾನು ಜಪ್ತಿ ಮಾಡಿಸಿದೆ, ಅದಕ್ಕಾಗಿ ನಾನು ಈ ಅಧಿಕಾರವನ್ನು ಬಿಟ್ಟು ಹೋಗುತ್ತಿದ್ದೇನೆಂದು ಹೇಳಿದ್ದಿದ್ದರೆ ನಾವು ಸೈ ಎಂದು ಹೇಳುತ್ತಿದ್ದೆವು. ಒಳ್ಳೆಯ ಗಂಡಸು ಕೆಲಸವನ್ನು ಮಾಡಿದ್ದೀರಿ ಎಂದು ನಾವು ಹೇಳುತ್ತಿದ್ದೆವು. ಆದರೆ ಈ ರೀತಿ ರಾಜಕೀಯ ದೊಂಬರಾಟವನ್ನು ಏನು ನಡೆಸಿದ್ದೀರಿ, ಅದನ್ನು ನಾವು ಇಲ್ಲಿ ವಿರೋಧಪಕ್ಷದಲ್ಲಿ ಕುಳಿತುಕೊಂಡು ಕ್ಷಮಿಸಬೇಕೇ? ನಾನು ಇವತ್ತು ಒತ್ತಾಯ ಮಾಡುತ್ತಿದ್ದೇನೆ. ಈ ಗೃಹಮಂಡಲಿಯ ಅವ್ಯವಹಾರದ ಬಗ್ಗೆ ತಾವು ಏನು ಸಿ.ಓ.ಡಿ ತನಿಖೆಯನ್ನು ಮಾಡಿಸಿದ್ದೀರಿ ಅದರ ಫೈನಲ್ ರಿಪೋರ್ಟನ್ನು ತರಿಸಿ. ಆ ವರದಿಯನ್ನು ತಿರುಚಿ ವರದಿಯನ್ನು ತರಿಸುವ ಕೆಲಸವನ್ನು ಮಾಡಬೇಡಿ. ಇಲ್ಲಿ ಮೊದಲನೇ ಅಪರಾಧಿಯಾದ ಗೃಹಮಂಡಲಿಯ ಅಧ್ಯಕ್ಷರನ್ನು ಬಂಧನ ಮಾಡಬೇಕಾಗುತ್ತದೆ. ಅದೇ ರೀತಿ ಕಂಪ್ಯೂಟರ್ ಹಗರಣದಲ್ಲಿ ಯಾರು ಅವ್ಯವಹಾರವನ್ನು ನಡೆಸಿದ್ದಾರೆ, ಈ ರಾಜ್ಯದ ಮಾಜಿ ಮುಖ್ಯಮಂತ್ರಿ ಮೊದಲನೇ ಅಪರಾಧಿಯಾಗಿ ಈ ಅವ್ಯವಹಾರದಲ್ಲಿ ಪಾಲ್ಗೊಂಡಿರುವುದು ನಿಜವೇ ಆಗಿದ್ದರೆ ಅವರನ್ನು ಬಂಧನ ಮಾಡಿ. ಇಲ್ಲದಿದ್ದರೆ ಯಾರೋ ಒಬ್ಬ ಚೀಫ್ ಸೆಕ್ರೆಟರಿ ಅಲೆಗ್ಸಾಂಡರ್ ಇರಬಹುದು, ಅಥವಾ ಇನ್ನೊಬ್ಬ ಇರಬಹುದು; ಮತ್ತೊಬ್ಬ ಇರಬಹುದು, ಅವರನ್ನು ಬಂಧನ ಮಾಡಿ. ಆದರೆ ನಾನು ಇಂಥವರನ್ನೇ ಮಾಡಿ ಎಂದು ಹೇಳುವುದಿಲ್ಲ. ಹಾಗಾದರೆ ನೀವು ಈಗ ಇದನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದೀರಲ್ಲವೇ? ಈ ತನಿಖೆಗಳನ್ನು ರಾಜಕೀಯ ಅಸ್ತ್ರವನ್ನಾಗಿ ಭಿನ್ನಮತೀಯ ಚಟುವಟಿಕೆಗಳನ್ನು ತಡೆಯುವುದಕ್ಕಾಗಿ ದುರುಪಯೋಗ ಮಾಡಿಕೊಳ್ಳುತ್ತಿದ್ದೀರೆಂದು ನಾನು

ಹೇಳಬೇಕಲ್ಲವೇ? ಜನರು ಈ ರೀತಿ ಹೇಳಬೇಕಲ್ಲವೇ? ಸ್ವಾಮಿ, ಇದು ಬಹಳ ದಿವಸ ನಡೆಯುವುದಿಲ್ಲ. ನಿಮ್ಮನ್ನು ನಾನು ಕೈಮುಗಿದು ಬೇಡಿಕೊಳ್ಳುತ್ತೇನೆ, ನೀವು ಆ ನೈತಿಕ ಶಕ್ತಿಯನ್ನು ಕಳೆದುಕೊಂಡಿದ್ದೀರಿ. ಯಾರ ಬಗ್ಗೆಯಾದರೂ ನಾವು ಕ್ರಮವನ್ನು ತೆಗೆದುಕೊಂಡರೆ ನಮ್ಮ ಬಣ್ಣ ಎಲ್ಲಿ ಬಯಲಾಗುತ್ತದೋ ಎಂಬ ಭಯದ ವಾತಾವರಣದಲ್ಲಿ ನೀವಿದ್ದೀರಿ. ಪ್ರಾಮಾಣಿಕ ವ್ಯಕ್ತಿಗಳೂ ಕೂಡ ಯಾವುದೋ ಒಂದು ಮುಲಾಜಿಗೆ ತುತ್ತಾಗಿ, ಆಸೆ ಆಮಿಷಕ್ಕೆ ಬಲಿಯಾಗಿದ್ದಾರೆ. ಜನ ಹಿತವನ್ನು ಮರೆತು, ನಿಮ್ಮ ಕರ್ತವ್ಯವನ್ನು ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವ ಈ ನಿಮ್ಮ ಸರ್ಕಾರ ಹೇಗೆ ಅಧಿಕಾರದಲ್ಲಿ ಮುಂದುವರಿಯುತ್ತದೆ? ಈ ನಿಮ್ಮ ಕರ್ಮ ಇಲ್ಲಿಗೇ ಮುಗಿಯಿತೆ? ಈ ನಾಡಿನ ರೈತರಿಗೆ ಏನು ಮಾಡಿದಿರಿ? ಯಾರ್ಯಾರು ಎಲ್ಲೆಲ್ಲಿ ಎಷ್ಟೆಷ್ಟು ಬೇಕೋ ಅಷ್ಟನ್ನೂ ತಿನ್ನುವುದಕ್ಕೆನೀವು ಬಿಟ್ಟುಬಿಟ್ಟಿರಿ. ಆದರೆ ಈ ನಾಡಿನ ರೈತ ಏನು ಪಾಪ ಮಾಡಿದ್ದಾನೆ? ಅವನಿಗೆ ನೀವು ಏನು ಕೊಟ್ಟಿರಿ? ಈಗತಾನೆ ಮಾನ್ಯ ಕೋ-ಆಪರೇಟಿವ್ ಮಂತ್ರಿಗಳು ಉತ್ತರಕೊಡುತ್ತಾ ಹೇಳಿದರು. ರೈತನ ಸಾಲ ಮನ್ನಾ ಆಗಬೇಕೆಂದು ಯಡಿಯೂರಪ್ಪ ಹೇಳಿದ್ದನೇ? ಈ ನಾಡಿನ ಜನರಿಗೆ ಭರವಸೆಯನ್ನು ಕೊಟ್ಟವರು, ಅವತ್ತು ಅಧಿಕಾರದಲ್ಲಿ ಇದ್ದ ಜನರು; ಕೋ-ಆಪರೇಟಿವ್ ಲೋನನ್ನು ತೆಗೆದುಹಾಕುತ್ತೇವೆ, ಅವನನ್ನು ಋಣಮುಕ್ತನನ್ನಾಗಿ ಮಾಡುತ್ತೇವೆಂದು ನೀವು ಭರವಸೆಯನ್ನು ಕೊಟ್ಟಿರಿ. ಆ ನಿಮ್ಮ ಆಶ್ವಾಸನೆಯನ್ನು ನೀವು ಈಡೇರಿಸಿದಿರಾ? ರೈತ ದುಡಿದು ಈ ದೇಶಕ್ಕೆ ಅನ್ನವನ್ನು ಕೊಡಲಿಲ್ಲವೇ? ಅವನು ಬೆಳೆದಂಥ ಬೆಳೆಗೆ ವೈಜ್ಞಾನಿಕ ಬೆಲೆಯನ್ನು ಕೊಡುವ ಪ್ರಯತ್ನವನ್ನು ನೀವು ಮಾಡಿದಿರಾ? ನೀವು ಸಬ್ಸಿಡಿಯನ್ನು ಕೊಡುವುದು ಬೇಡ. ಕೊನೇಪಕ್ಷ ಅವನು ಗೌರವದಿಂದ ಬೆಳೆದಂಥ ಬೆಳೆಗೆ ಸರಿಯಾದ ಬೆಲೆಯನ್ನು ಕೊಡತಕ್ಕ ಪ್ರಾಮಾಣಿಕ ಪ್ರಯತ್ನವನ್ನು ನೀವು ಮಾಡಿದ್ದೀರಾ? ಹಿರಿಯ ಸಚಿವರಾದ ಮಾನ್ಯ ರಂಗನಾಥ್‌ರವರಿಗೆ ನಾನು ಒಂದು ಸಲಹೆಯನ್ನು ಕೊಡಬಯಸುತ್ತೇನೆ. ನಿಮ್ಮ ಹತ್ತಿರ ದುಡ್ಡಿರಲಿಲ್ಲ. ನಿಮ್ಮ ಹಣಕಾಸಿನ ಪರಿಸ್ಥಿತಿ ಸರಿ ಇರಲಿಲ್ಲ. ಆದ್ದರಿಂದ ರೈತನ ಸಾಲವನ್ನು ಮನ್ನಾ ಮಾಡುವುದಕ್ಕೆ ಆಗಲಿಲ್ಲ. ಆದರೆ ಕೊನೇ ಪಕ್ಷ ರೈತನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಈ ಸದನದ ಎಲ್ಲಾ ಮಾನ್ಯ ಸದಸ್ಯರೂ ವಿನಂತಿ ಮಾಡಿಕೊಂಡೆವು. ಮಾನ್ಯ ವೀರಪ್ಪ ಮೊಯ್ಲಿಯವರು ಏನು ಹೇಳಿದರು, ಈಗ ಅವರ ಪಾಪಕ್ಕೆ ಪ್ರಾಯಶ್ಚಿತ್ತವಾಗುತ್ತಿದೆ. ಈ ನಾಡಿನ ಕೋಟಿಕೋಟಿ ರೈತರ ಶಾಪಕ್ಕೆ ನಿಮ್ಮ ಮುಖ್ಯಮಂತ್ರಿ, ಕಾಂಗ್ರೆಸ್ ಪಕ್ಷ, ಮಂತ್ರಿಮಂಡಲ ತುತ್ತಾಗಿದೆ. ಇದನ್ನು ಮರೆಯಬೇಡಿ, ನಿಮ್ಮಹತ್ತಿರ ದುಡ್ಡಿಲ್ಲ. ಆದರೆ ವಿರೋಧಪಕ್ಷದ ಸದಸ್ಯರ ಸಭೆಯನ್ನು ಕರೆದಿರಿ. ನಾವು ಒಮ್ಮತದಿಂದ ನಿಮಗೆ ಸಲಹೆಯನ್ನು ಕೊಟ್ಟೆವು. ಸಾಲವನ್ನು ಮನ್ನಾ ಮಾಡುವುದಕ್ಕೆ ಸಾಧ್ಯವಾಗದಿದ್ದರೆ ಕೊನೇ ಪಕ್ಷ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿ ಎಂದು ಹೇಳಿದೆವು. ನೀವು ಅದನ್ನು ಒಪ್ಪಿಕೊಂಡಿರಿ. ಶುಕ್ರವಾರ, ಶನಿವಾರ, ಭಾನುವಾರ ಸೋಮವಾರ ಎಂದು ಅಧಿವೇಶನದ ಕೊನೆಯವರೆಗೂ ನಮ್ಮನ್ನು ಮುಂದೂಡಿಸಿಕೊಂಡು ಹೋಗುವ ಪ್ರಯತ್ನವನ್ನು ಮಾಡಿದಿರಿ. 8ನೇ ತಾರಿಖು ಅದೃಷ್ಟ ಸಂಖ್ಯೆ ಎಂದು ರೈತ ಕಾಯುತ್ತಾ ಕೂತ. ಬಡ್ಡಿ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದಿರಾ? ಯಾರು ಏನು ಬೇಕಾದರೂ ತಿನ್ನಬಹುದು. ಕಂಪ್ಯೂಟರ್ ಹಗರಣದಲ್ಲಿ ಕೋಟಿಗಟ್ಟಲೆ ತಿಂದು ಜೀರ್ಣ ಮಾಡಿಕೊಳ್ಳಬಹುದು. ಒಂದೂವರೆ ಕೋಟಿ ರೂ ಅಡ್ವಾನ್ಸ್ ಕೊಟ್ಟಿದ್ದನ್ನು ತಿಂದು ಜೀರ್ಣ ಮಾಡಿಕೊಳ್ಳಬಹುದು. ಆಶ್ರಯ ಯೋಜನೆಯ 40 ಕೋಟಿ ರೂ.ಗಳಲ್ಲಿ ಯಾರು ಎಷ್ಟು ಬೇಕಾದರೂ ತಿಂದು ತೇಗಬಹುದು. ಆದರೆ ನಾಡಿನ ರೈತನಿಗೆ, ಹೊಟ್ಟೆಗಾಗಿ ದುಡಿದವನಿಗೆ ಪರಿಹಾರವನ್ನು ಕೊಡುವುದಕ್ಕೆ ನಿಮ್ಮಲ್ಲಿ ದುಡ್ಡಿಲ್ಲ.

ನಾನು ಸಲಹೆ ಕೊಡುತ್ತೇನೆ; ನಿಮ್ಮಲ್ಲಿ ಹಣವಿಲ್ಲ. ನೀವೇ ಉತ್ತರವನ್ನು ಕೊಟ್ಟಿರುವುದನ್ನು ಹೇಳುತ್ತೇನೆ. 1993ರಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗಾಗಿ ಕೇಂದ್ರ ಸರ್ಕಾರ ಇಡೀ ದೇಶಕ್ಕಾಗಿ 100 ಕೋಟಿ ರೂ.ಗಳನ್ನು ಸಬ್ಸಿಡಿ ರೂಪದಲ್ಲಿ ರಸಗೊಬ್ಬರದ ಬೆಲೆ ಜಾಸ್ತಿಯಾದ್ದರಿಂದ ಹಣವನ್ನು ಬಿಡುಗಡೆ ಮಾಡಿತು. ತಮಗೆ ಗೊತ್ತಿರುವಂತೆ ನಮ್ಮ ಕರ್ನಾಟಕಕ್ಕೆ 36.90 ಕೋಟಿ ರೂ.ಬಂತು. ಇದು ಯಾವಾಗ ಬಂತು ಎಂಬುದರ ಬಗ್ಗೆ ಬೆಳಿಗ್ಗೆ ಚರ್ಚೆಯಾಯಿತು. ದಿನಾಂಕ 6-1-93ರಲ್ಲಿ ಕೇಂದ್ರಸರ್ಕಾರದ ಆದೇಶದ ಮೇಲೆ ಬಂತು. ಈ ದುಡ್ಡನ್ನು ಹಂಚುವುದಕ್ಕೆ ಯಾವಾಗ ತೀರ್ಮಾನ ತೆಗೆದುಕೊಂಡಿದ್ದೀರಿ. ನಿಮ್ಮ ಇಲಾಖೆಯಲ್ಲಿ ದಿನಾಂಕ 10-5-93ರ ಸರ್ಕಾರದ ಆಜ್ಞೆಯ ಪ್ರಕಾರ ತೀರ್ಮಾನ ತೆಗೆದುಕೊಂಡಿದ್ದೀರಿ. ಕೇಂದ್ರ ಸರ್ಕಾರದ ಆದೇಶದಂತೆ ನಮ್ಮ ರಾಜ್ಯಕ್ಕೆ 36 ಕೋಟಿ 90 ಲಕ್ಷ ರೂಪಾಯಿಗಳನ್ನು ನೀಡಲಾಯಿತು. ಈ ವಿಶೇಷವಾದ ನೆರವನ್ನು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಅನುಕೂಲವಾಗುವಂತೆ ಯಾವುದೇ ಯೋಜನೆಗಳನ್ನು ಜಾರಿಗೊಳಿಸುವುದಕ್ಕೆ ಉಪಯೋಗಿಸಬೇಕಾಗಿತ್ತು. ಅಂದರೆ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಅನುಕೂಲವಾಗುವಂತೆ ಈ ಹಣವನ್ನು ಉಪಯೋಗ ಮಾಡಿಕೊಳ್ಳಲಿ ಎಂದು ಕೇಂದ್ರ ಸರ್ಕಾರದವರು ಈ 36ಕೋಟಿ 90ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದರು. ನಾನು ಈ ನಿಮಿಷಕ್ಕೆ ಹೇಳುತ್ತೇನೆ. ಸರ್ಕಾರಕ್ಕೆ ರೈತನ ಬಗ್ಗೆ ಕಳಕಳಿ ಇದ್ದಿದ್ದರೆ ಇದರ ಬಗ್ಗೆ ನೀವೇ ಈ ಸದನದಲ್ಲಿ ನನಗೆ ಕೊಟ್ಟಿರುವಂತಹ ಉತ್ತರದ ಪ್ರಕಾರ ಕೇಂದ್ರ ಸರ್ಕಾರ 18-2-93ರಂದು ಸಣ್ಣ, ಅತಿಸಣ್ಣ ರೈತನ ನೆರವಿಗೋಸ್ಕರ 27ಕೋಟಿ 90ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿತ್ತು ಎಂದು ಉತ್ತರ ಕೊಟ್ಟಿದ್ದೀರಿ. ರೈತರಿಗೆ ರಿಯಾಯಿತಿ ದರದಲ್ಲಿ ರಸಗೊಬ್ಬರವನ್ನು ವಿತರಣೆ ಮಾಡಲು ಕೇಂದ್ರಸರ್ಕಾರ ರಾಜ್ಯಕ್ಕೆ 17 ಕೋಟಿ 53ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇದಲ್ಲದೇ ಸಣ್ಣ ಮತ್ತು ಅತಿ ಸಣ್ಣ ರೈತನಿಗೆ ಪ್ರತ್ಯೇಕವಾಗಿ 27ಕೋಟಿ 90ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇದನ್ನು ಆಗ ಖರ್ಚು ಮಾಡಲಿಲ್ಲ ಹಿಂಗಾರು ಮತ್ತು ಬೇಸಿಗೆಯಲ್ಲಿ ಎಲ್ಲಾ ರೈತರಿಗೂ ರಿಯಾಯಿತಿ ದರದಲ್ಲಿ ರಸಗೊಬ್ಬರವನ್ನು ವಿತರಣೆ ಮಾಡಲು 17 ಕೋಟಿ 53ಲಕ್ಷ ರೂಪಾಯಿಗಳನ್ನು ಮತ್ತು 27ಕೋಟಿ 90ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವವರಿದ್ದೇವೆ ಎಂದಿದೆ. ಈ ನಿಮಿಷಕ್ಕೆ ಈ ದುಡ್ಡು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಬಂದಂತಹ 27ಕೋಟಿ 90ಲಕ್ಷ ರೂಪಾಯಿಗಳನ್ನು ನೀವು ಒಂದು ಪೈಸೆಯನ್ನೂ ಖರ್ಚು ಮಾಡಲಿಲ್ಲ. ನಿಮ್ಮ ಹತ್ತಿರ ದುಡ್ಡು ಇರಲಿಲ್ಲ ಅಲ್ಲವೇ? ಎಲ್ಲಕ್ಕೂ ವಿರೋಧಪಕ್ಷದ ಸಹಾಯ ಕೇಳುತ್ತಿದ್ದ ನೀವುಇವತ್ತು ಮನಸ್ಸು ಮಾಡಿದ್ದರೆ 1993-94ರಲ್ಲಿ ಈಗ ಬಂದಿರುವಂತಹ 36ಕೋಟಿ 90ಲಕ್ಷ ರೂಪಾಯಿಗಳನ್ನು ಮತ್ತು 27ಕೋಟಿ 90ಲಕ್ಷ ರೂಪಾಯಿಗಳು, ಈ ಎರಡೂ ದುಡ್ಡನ್ನು ನೀವು ಉಪಯೋಗ ಮಾಡಿಕೊಂಡಿದ್ದರೆ 64ಕೋಟಿ 80ಲಕ್ಷ ರೂಪಾಯಿಗಳು ಆಗುತ್ತಿತ್ತು. 1992-93ರಲ್ಲಿ ಕೇಂದ್ರಸರ್ಕಾರ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಗೊಬ್ಬರವನ್ನು ರಿಯಾಯಿತಿ ದರದಲ್ಲಿ ಮಾರಲು ಕೊಟ್ಟಂತಹ 27ಕೋಟಿ 90 ಲಕ್ಷ ರೂಪಾಯಿಗಳು; 1993-94ರಲ್ಲಿ ಬಿಡುಗಡೆಯಾದಂತಹ 36ಕೋಟಿ 90ಲಕ್ಷ ಹೀಗೆ ಒಟ್ಟು 64ಕೋಟಿ 80 ಲಕ್ಷ ರೂಪಾಯಿಗಳು ಯಾವ ರೀತಿ ರೈತರಿಗೆ ಉಪಯೋಗಿಸಬೇಕೆಂದು ಕೇಂದ್ರದವರು ತಿಳಿಸಿದ್ದರೋ, ಅದಕ್ಕೆ ರಾಜ್ಯಸರ್ಕಾರವು 20ಕೋಟಿ ರೂಪಾಯಿಗಳನ್ನು ಹಾಕಿ ಒಟ್ಟು 85-90ಕೋಟಿ ರೂಪಾಯಿಗಳನ್ನು ಕೂಡಿಸಿಕೊಂಡು ಈ ನಾಡಿನ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸಾಲ ಮನ್ನಾ ಮಾಡಬಹುದಾಗಿತ್ತು.

ಶ್ರೀ ಸಿ. ಬೈರೇಗೌಡ : – ಆ ಹಣ ಪೂರ್ತಿ ಖರ್ಚಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : – ಇಡೀ ರಾಜ್ಯದ ರೈತರ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ನೀವು ಈ ಹಣವನ್ನು ಉಪಯೋಗಮಾಡಬಹುದಾಗಿತ್ತು. ಯಾವ ರೀತಿ ಸರ್ಕಾರ ರೈತ ವಿರೋಧಿ ಇದೆ ಎಂದರೆ ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ಪುರಸೊತ್ತು ಇಲ್ಲವೆನ್ನುವುದಕ್ಕೆ ನಾನು ವಿವರವನ್ನು ಕೊಡುತ್ತಿದ್ದೇನೆ. ಎಂಥ ಪಾಪ ಮಾಡಿದ್ದೀರಿ ಅಂದರೆ ಈ 36ಕೋಟಿ 90ಲಕ್ಷದ ಲಾಭವನ್ನು ಒಬ್ಬ ರೈತನಿಗೂ ಕೊಟ್ಟಿಲ್ಲ. ಸರ್ಕಾರಿ ಆಜ್ಞೆಯ ಪ್ರಕಾರ ಏನು ಕೊಟ್ಟಿದ್ದೀರಾ? 5ಎಕರೆ ಒಳಗೆ ಇರುವವರಿಗೆ 27ಕೋಟಿ 50ಲಕ್ಷರೂಪಾಯಿಗಳನ್ನು ಕೇಂದ್ರಸರ್ಕಾರ 25-2-92ರಲ್ಲಿ ಕೊಟ್ಟಿದೆ. ಕೃಷಿ ಸಾಮಾಗ್ರಿಗಳು ಪಾಸ್‌ಪುಸ್ತಕ ಮುದ್ರಣ ಮಾಡುವುದಕ್ಕೆ 40ಲಕ್ಷ ರೂಪಾಯಿಗಳು, ಸಹಕಾರಿ ಕ್ಷೇತ್ರದಸಕಾಲಿಕ ಮರುಪಾವತಿ ಪ್ರೋತ್ಸಾಹ ಯೋಜನೆಗೆ ಶೇ. 5ರಷ್ಟು ಕೊಡುವುದಕ್ಕೆ 5ಕೋಟಿ ರೂಪಾಯಿಗಳು, ವಿಫಲಬಾವಿ ಪ್ರೋತ್ಸಾಹ ಯೋಜನೆಗೆ 2ಕೋಟಿ ರೂಪಾಯಿಗಳು, ಪ್ರಾಮಾಣೀಕರಿಸಿದ ಬೀಜಗಳನ್ನು ಪೂರೈಸಲು ಸಹಾಯಧನ 2ಕೋಟಿ ರೂಪಾಯಿಗಳೆಂದು ಹೇಳಿದ್ದೀರಿ. ರೈತನ ತಲೆ ಬೋಳಿಸುವುದಕ್ಕೆ ಇದೇ ದುಡ್ಡು ಬೇಕಾಗಿತ್ತಾ? 5ಕೋಟಿ ರೂಪಾಯಿಗಳನ್ನು ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿ, ಕನ್ಸಿಷನ್ ಕೊಡುತ್ತೇವೆಂದು ಹೇಳಿ ಈ ದುಡ್ಡನ್ನೇ ಉಪಯೋಗ ಮಾಡಿಕೊಳ್ಳಬೇಕಾಗಿತ್ತಾ? ರೆವಿನ್ಯೂ ಡಿಪಾರ್ಟ್‌ಮೆಂಟ್ ಮೂಲಕ ರೈತರಿಗೆ ಪಾಸ್‌ಪುಸ್ತಕ ಕೊಡುತ್ತೇವೆಂದು ಹೇಳಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ. ರೈತರಿಗೆ ಕೃಷಿ ಇಲಾಖೆಯ ಪಾಸ್‌ಪುಸ್ತಕ ಏಕೆ ಬೇಕು? ಸಣ್ಣ, ಅತಿಸಣ್ಣ ರೈತರೆಂದು ಪಟ್ಟಿಯಲ್ಲಿ ಇರಲಿಲ್ಲವೇನು? ಇದಕ್ಕೆ 50ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಯಾರ ಮುಂಡಾ ಮೋಚುವುದಕ್ಕೆ ನೀವು ಖರ್ಚು ಮಾಡಿದ್ದೀರಿ? ಇದರ ಅಗತ್ಯವೇನಿತ್ತು.

ಒಬ್ಬ ಮಾನ್ಯ ಸದಸ್ಯರು : – ಇಂದಿರಾಗಾಂಧಿ ಫೋಟೊ ಹಾಕುವುದಕ್ಕೆ ಹಣ ಬೇಕಾಗಿತ್ತು;

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : – ನೀವು ಎಲ್ಲಿ ಬೇಕಾದರೂ ತನಿಖೆ ಮಾಡಿಸಿ; ಇವತ್ತು ಕೃಷಿ ಪಾಸ್‌ಬುಕ್ ಕೊಡುವುದಕ್ಕೆ ನಾವು ಗ್ರಾಮಸಭೆಯಲ್ಲಿ ಗಲಾಟೆ ಮಾಡಿದ್ದೇವೆ. 5 ರೂಪಾಯಿಂದ 10ರೂಪಾಯಿಯವರೆಗೂ ವಸೂಲಿ ಮಾಡುತ್ತಿದ್ದಾರೆ.

3.55 ಪಿ.ಎಂ.

ಮಾನ್ಯ ಅಧ್ಯಕ್ಷರೇ, ನಾನು ಎರಡು ಸಂಗತಿಗಳನ್ನು ಇಲ್ಲಿ ಹೇಳಿದೆ. ಕೃಷಿ ಪಾಸ್‌ಬುಕ್‌ನ ಅಗತ್ಯ ಇತ್ತಾ? ರೆವಿನ್ಯೂ ಇಲಾಖೆಯಿಂದ ಒಂದು ಪಾಸ್ ಬುಕ್ ಇತ್ತು. ನೀವು ಅಧಿಕಾರವನ್ನು ನಡೆಸುತ್ತಾ ಇಲ್ಲ. ಅಧಿಕಾರ ನಡೆಸುತ್ತಾ ಇರುವವರು ಅಲ್ಲಿ ಕುಳಿತಿರುವಂತಹ ಅಧಿಕಾರಿಗಳು ಮನ ಬಂದಂತೆ ಆಡಳಿತ ಮಾಡುತ್ತಿದ್ದಾರೆ. ಅದು ಸರಿಯೋ ತಪ್ಪೋ ನೋಡುವುದಕ್ಕೆ ನಿಮಗೆ ಪುರುಸೊತ್ತು ಇಲ್ಲ. ಬಡವರಿಗೆ ಒಂದು ಸಾರಿ 176 ರೂಪಾಯಿ ಸಬ್ಸಿಡಿ ದುಡ್ಡು ಕೊಡುವುದಕ್ಕೆ ಜಾಸ್ತಿ ಎಂದರೆ ಒಬ್ಬ ರೈತನಿಗೆ 150 ರೂಪಾಯಿ ಸಿಗುತ್ತದೆ. ಅದೂ 5 ಎಕರೆ ಒಳಗಡೆ ಇರುವ ರೈತನಿಗೆ. ಅವನಿಗೆ ನಿಮ್ಮ ಕೃಷಿ ಇಲಾಖೆಯಿಂದ ಪಾಸ್‌ಬುಕ್ ಏಕೆ ಬೇಕು ಸ್ವಾಮಿ? ರೆವಿನ್ಯೂ ಇಲಾಖೆ ಪಾಸ್‌ಬುಕ್ ಇತ್ತು; ನೀವು ಅದಕ್ಕೂ ದುಡ್ಡು ತೆಗೆದುಕೊಳ್ಳುತ್ತೀರಿ. ಮತ್ತು ಅದೇ ದುಡ್ಡಿನಲ್ಲಿ ಸಹಕಾರಿ ಸಾಲದ ಸಕಾಲಿಕ ಮರು

ಪಾವತಿಗೆ ಪ್ರೋತ್ಸಾಹ ಯೋಜನೆಗೆ ಶೇಕಡ 5ರಂತೆ ಕೊಡುವುದಕ್ಕೂ 5ಕೋಟಿ ರೂಪಾಯಿ ವಿಫಲ ಭಾವಿಗೆ 2ಕೋಟಿ ರೂಪಾಯಿ, ಉತ್ತಮ ಬೀಜ ಕೊಡುವುದಕ್ಕೆ 2 ಕೋಟಿ ರೂಪಾಯಿ ಅಂದರೆ ನಮ್ಮ ರಾಜ್ಯಸರ್ಕಾರದ ಜವಾಬ್ದಾರಿ ಏನು ಇತ್ತು. ಮುಖ್ಯಮಂತ್ರಿಗಳು ಈಗ ಸಭೆಗೆ ತಡವಾಗಿ ಬಂದರು. 36ಕೋಟಿ 90ಲಕ್ಷ ರೂಪಾಯಿಗಳನ್ನು ಕೇಂದ್ರಸರ್ಕಾರ ಗೊಬ್ಬರದ ಬೆಲೆ ಜಾಸ್ತಿಯಾದುದರಿಂದ ಅದನ್ನು ಯಾವುದೇ ರೀತಿ ಬೇಕಾದರೂ ಸಣ್ಣ, ಅತಿಸಣ್ಣ ರೈತನಿಗೆ ಉಪಯೋಗ ಮಾಡಿಕೊಳ್ಳುವುದಕ್ಕೆ ಬಿಡುಗಡೆ ಮಾಡಿದ ಹಣ. ಈ ನಿಮಿಷದವರೆಗೂ ಮಾನ್ಯ ಮುಖ್ಯಮಂತ್ರಿಯವರೇ, ಈ ಮಾತನ್ನು ನಾನು ನಿಮಗೆ ಹೇಳುತ್ತೇನೆ, ಇವತ್ತು ನೀವು ಯಾವ ಗೊಬ್ಬರ ಕೊಡಬೇಕು. ಅದನ್ನು ಕೊಡಲಿಲ್ಲ; ಇನ್ನೊಂದು ನೀವು ಏನು ಮಾಡಿದಿರಿ, ನಿಮಗೆ ಈ ದುಡ್ಡನ್ನು ಬಿಡುಗಡೆ ಮಾಡಿ, 4 ತಿಂಗಳು ಕಳೆದಿದ್ದರೂ ಸಹ ಈ ನಿಮಿಷದವರೆಗೂ ಏನೂ ಮಾಡಿಲ್ಲ. ನೀವು ಅಂಕಿ ಅಂಶವನ್ನು ಕೊಡಿ; ಸುಮ್ಮನೆ ನಾವು ಇಲ್ಲಿ ಕುಳಿತಿದ್ದೇವೆ, ಆರೋಪ ಮಾಡಬೇಕು, ಎಲ್ಲರೂ ಒಂದು ಕಲ್ಲು ಎಸೆಯಬೇಕು ಎನ್ನುವ ಪ್ರಶ್ನೆ ಎಂದು ಅಲ್ಲ. ನಾನು ಅಂಕಿ ಅಂಶ ಕೊಡುತ್ತೇನೆ. ನೂರಕ್ಕೆ 20 ಜನರಿಗೆ ಈ ಸಬ್ಸಿಡಿ ದರದ ಗೊಬ್ಬರವನ್ನು ಇದುವರೆಗೂ ನೀವು ವಿತರಣೆ ಮಾಡಿಲ್ಲ. ಮತ್ತೆ ನೀವು ಯಾವ ಗೊಬ್ಬರವನ್ನು ಕೊಡುತ್ತಿದ್ದೀರಿ. ಕಾಂಪ್ಲೆಕ್ಸ್ ಗೊಬ್ಬರವನ್ನು ಕೊಡುತ್ತಿದ್ದೀರಿ. ಈಗ ಸಮಯ ಮುಗಿದಿದೆ, ಅವನಿಗೆ ಬೇಕಾಗಿರುವುದು ಯೂರಿಯಾ; ಈ ಸಮಯದಲ್ಲಿ ಅವನಿಗೆ ಕಾಂಪ್ಲೆಕ್ಸ್ ಗೊಬ್ಬರ ಏಕೆ ಬೇಕು? ನಿಮ್ಮ ಕೃಷಿ ಇಲಾಖೆ ಅಧಿಕಾರಿಗಳಿಗೆ ಯಾವ ಸಮಯದಲ್ಲಿ ಯಾವ ಗೊಬ್ಬರವನ್ನು ರೈತ ಹಾಕುತ್ತಾನೆ, ಯಾವ ಸಮಯದಲ್ಲಿ ವಿತರಣೆ ಮಾಡಬೇಕು ಎನ್ನುವುದು ತಿಳಿದಿಲ್ಲವೇ? ಬಹುಶಃ ನನಗೆ ಅನಿಸುತ್ತದೆ. ಶಿವಮೊಗ್ಗದಲ್ಲಿ ನಾವೆಲ್ಲಾ ಜಿಲ್ಲಾಧಿಕಾರಿಗಳ ಬೆನ್ನು ಹತ್ತಿ ಅವರಿಗೆ ಅಂಕಿ ಅಂಶಗಳನ್ನು ಕೊಟ್ಟ ಮೇಲೆ ಆ ಜಿಲ್ಲೆಯಲ್ಲಿ 50 ಪರ್ಸೆಂಟ್ ಬಿತ್ತನೆ ಆಗಿರಬೇಕು. ಎಂದರೆ ನಿಮ್ಮ ಉದ್ದೇಶ ಏನು ಇತ್ತು, ಆ ರೈತನಿಗೆ ಎಡಗೈ ಬಲಗೈ ಹೆಬ್ಬೆಟ್ಟು ಒತ್ತಿಸಿಕೊಂಡು ಈ 36ಕೋಟಿ 90 ಲಕ್ಷ ರೂಪಾಯಿಯನ್ನು ಮುಳುಗಿಸಬೇಕು ಎಂದು ಯೋಜನೆಯಾಗಿತ್ತಾ ಅಥವಾ ಪ್ಲಾನಿಂಗ್ ಆಗಿತ್ತೇ? ಇಲ್ಲದೆ ಇದ್ದರೆ ಆ ದುಡ್ಡು ಖರ್ಚು ಆಗದ ಹಾಗೆ ನೋಡಿಕೊಳ್ಳುವುದಕ್ಕೆ ನಿಮ್ಮ ಕೃಷಿ ಸಚಿವರು ಏನು ಮಾಡುತ್ತಿದ್ದರು? ನಿಮ್ಮ ಕೃಷಿ ಇಲಾಖೆ ಏನು ಮಾಡುತ್ತಿತ್ತು? ಇಲ್ಲಿ ವಿಧಾನಸೌಧದಲ್ಲಿ ಕುಳಿತುಕೊಳ್ಳುವುದಕ್ಕೆ ನಿಮ್ಮ ಐಎಎಸ್, ಐಪಿಎಸ್ ಅಧಿಕಾರಿಗಳು ಇದ್ದಾರಾ? ಅಥವಾ ಅವರು ಏನಾದರು ಹಳ್ಳಿಗಳಿಗೆ ಹೋಗಿದ್ದಾರೆಯೇ? ಅಧಿಕಾರಿಗಳ ಜವಾಬ್ದಾರಿ ಏನು? ನೀವು ಏಕೆ ಈ ಕಬ್ಬಾಟದಲ್ಲಿ ಕೈಕಟ್ಟಿಕೊಂಡು ಕುಳಿತಿದ್ದೀರಿ? ಒಂದು ಸರ್ಕಾರ ಬರುತ್ತದೆ, ಸರ್ಕಾರ ಹೋಗುತ್ತದೆ. ನಾವು ನೋಡಿಲ್ಲವೇನು; 45 ವರ್ಷದಲ್ಲಿ ಏನು ಶಾಶ್ವತವಾಗಿ ಗೂಟ ಹೊಡೆಸಿಕೊಂಡು ಯಾರಾದರೂ ಇದ್ದಾರೆಯೇ ಏನು? ಇವರು ಯಾರು ಬರುತ್ತಾರೋ ನಾನು ಎಲ್ಲಿಗೆ ಹೋಗುತ್ತೇನೋ ಎಂದು ನೀವು ಏಕೆ ಒದ್ದಾಡುತ್ತಿದ್ದೀರಿ? ಇದನ್ನು ಕಾರ್ಯರೂಪಕ್ಕೆ ತರುವಂತಹ ಪ್ರಯತ್ನ ಏಕೆ ಮಾಡಲಿಲ್ಲ? ಒಂದು ಕಡೆ ಕೇಂದ್ರಸರ್ಕಾರ ಕೊಟ್ಟರೆ ಅದನ್ನು ಸದುಪಯೋಗ ಮಾಡಿಕೊಳ್ಳಲಿಲ್ಲ. ಹೋದ ವರ್ಷ ಕೊಟ್ಟಂತಹ ದುಡ್ಡಲ್ಲಿ ಇದುವರೆವಿಗೂ ಒಂದು ರೂಪಾಯಿ ಸಹ ಖರ್ಚುಮಾಡಲಿಲ್ಲ. ಅಂದರೆ ನಿಮ್ಮ ರೈತನ ಋಣದಲ್ಲಿ ಬದುಕಿ ಬಾಳಿ ಕೇಂದ್ರಸರ್ಕಾರ ಕೊಟ್ಟ ದುಡ್ಡನ್ನೂ ಸಹ ರೈತನಿಗೆ ತಲುಪಿಸುವುದಕ್ಕೆ ಆಗದೇ ಇರುವಂತಹ ಒಂದು ಬೇಜವಾಬ್ದಾರಿ ಸರ್ಕಾರ, ರೈತ ವಿರೋಧಿ ಸರ್ಕಾರ ಇವತ್ತು ಅಸ್ತಿತ್ವದಲ್ಲಿ ಇರಬೇಕಾ? ನೀವು ಇನ್ನು ಎಷ್ಟು ದಿನ ಇರಬೇಕು ಸ್ವಾಮಿ? ಇನ್ನು ಈ ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿ ಬಗ್ಗೆ ಹೇಳಬೇಕೆಂದರೆ, ನಿಮಗೆ ಗೊತ್ತಿರುವ

ಹಾಗೆ ಸುಮಾರು 70 ತಾಲ್ಲೂಕಗಳಲ್ಲಿ ಮುಂಗಾರು ಬಿತ್ತನೆಯಾಗಿಲ್ಲ. ನಿಮ್ಮ ಕೃಷಿ ಇಲಾಖೆಯವರು ಕೊಡುವಂತಹ ಅಂಕಿ ಅಂಶಗಳ ಪ್ರಕಾರ ಹೇಳುತ್ತಿದ್ದೇನೆ. ಇವತ್ತು ನೀವು ಎಲ್ಲಾದರೂ ಏನಾದರೂ ಈ ಬಗ್ಗೆ ಸ್ಟೇಟ್‌ಮೆಂಟ್ ಮಾಡಿದ್ದೀರಾ? ರಾಜ್ಯದಲ್ಲಿ ಜನರ ಹಾಹಾಕಾರ ಎದ್ದಿದೆ. ಕೆಲಸ ಇಲ್ಲದೆ ಜನರು ಊರು ಬಿಟ್ಟು ಹೋಗುತ್ತಿದ್ದಾರೆ. ಕೃಷಿ ಇಲಾಖೆ ಪ್ರಕಾರ ಬಿತ್ತನೆ ಪ್ರಮಾಣ ಶೇಕಡ 35-40 ಪರ್ಸೆಂಟ್ ಕಡಿಮೆಯಾಗಿದೆ. ಕೃಷಿ ಇಲಾಖೆಯವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಜೂನ್‌ನಲ್ಲಿ ಮಲೆನಾಡು ಸೇರಿದಂತೆ 58 ತಾಲ್ಲೂಕುಗಳಲ್ಲಿ ಬರಗಾಲದ ಪರಿಸ್ಥಿತಿ ಇದೆ ಎಂದು ಪತ್ರಿಕೆಯಲ್ಲಿ ನೀವೇ ಹೇಳಿಕೆಯನ್ನು ಕೊಟ್ಟಿದ್ದೀರಿ. ಹೀಗಾದರೂ ಸಹ ಬರಗಾಲದ ಒಂದು ಕಾರ್ಯಕ್ರಮವನ್ನು ರೂಪಿಸಿದ್ದೀರಾ?ಶಾಶ್ವತವಾಗಿ ಅವರನ್ನು ಬರಗಾಲದಿಂದ ವಿಮುಕ್ತರನ್ನಾಗಿ ಮಾಡುವುದಕ್ಕೋಸ್ಕರ ಕಾರ್ಯಕ್ರಮ ರೂಪಿಸಿದ್ದೀರಾ? ಕೇಂದ್ರಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದೀರಾ?; ಕೇಂದ್ರಸರ್ಕಾರದ ಒಂದು ಹೇಳಿಕೆ ಬಂದಿದೆ. ಸದನದಲ್ಲಿ ಅವರು ಉತ್ತರ ಕೊಟ್ಟಿದ್ದಾರೆ; ಬರ ರಾಜ್ಯಕ್ಕೆ ಕೇಂದ್ರದ ಮುಂಗಡ ಕಂತು ಎಂದು. "ಬರಗಾಲಕ್ಕೆ ತುತ್ತಾದ ಕರ್ನಾಟಕ ಹಾಗೂ ಬಿಹಾರ ರಾಜ್ಯಗಳಿಗೆ ಕೇಂದ್ರ ಸರ್ಕಾರದ ನೈಸರ್ಗಿಕ ಪ್ರಕೋಪ ಪರಿಹಾರ ನಿಧಿಯ 3 ತಿಂಗಳ ಕಂತುಗಳನ್ನು ಮುಂಗಡವಾಗಿ ನೀಡಲಿದೆ" ಎಂದು ರಾಜ್ಯಸಭೆಯಲ್ಲಿ ಹೇಳಿದ್ದಾರೆ. ಎಷ್ಟು ಕೊಟ್ಟಿದ್ದಾರೆ? ಈ ಬಗ್ಗೆ ಫಾಲೋ ಅಫ್ ಮಾಡಿದ್ದೀರಾ?ನಮ್ಮ ರಾಜ್ಯದಲ್ಲಿ ಬರಗಾಲ, ಅತಿವೃಷ್ಟಿ, ನೆರೆಹಾವಳಿಯಿಂದ ಏನು ಪರಿಸ್ಥಿತಿ ಇದೆ ಎಂಬುದು. ನಿಮಗೆ ಗೊತ್ತಿದೆಯೇ? ದುಡ್ಡು ತಂದಿದ್ದೀರಾ? ಎಲ್ಲಿದೆ? ನೀವು ಬಿಡುಗಡೆ ಮಾಡಿದಂತಹ 7 ಕೋಟಿ 20 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೀರಾ? ಸ್ವಾಮಿ, ರಾಣಿ ಬೆನ್ನೂರಿನಲ್ಲಿ ಹೋಗಿ ಬನ್ನಿ; ಮಾನ್ಯ ಮುಖ್ಯಮಂತ್ರಿಗಳು ಈಗಲೇ ಫೋನ್ ಮಾಡಿ ತಿಳಿದುಕೊಳ್ಳಿ. ಇಲ್ಲಿ ರೆವಿನ್ಯೂ ಸಚಿವರು ಘೋಷಣೆ ಮಾಡಿದರು, ನೆರೆ ಹಾವಳಿಗೆ ಸಿಕ್ಕಿ ಹಾಳಾದ ಒಂದು ಪಂಪ್‌ಸೆಟ್ಟಿಗೆ 3 ಸಾವಿರ ರೂಪಾಯಿ ಕೊಡುತ್ತೇವೆ ಎಂದು. ಆದರೆ ಅಲ್ಲಿರುವಂತಹ ಜಿಲ್ಲಾಧಿಕಾರಿಗಳು ಹೇಳುತ್ತಾರೆ, ಒಂದು ಪಂಪ್‌ಸೆಟ್ಟಿಗೆ ಒಂದು ಸಾವಿರ ರೂಪಾಯಿ ಕೊಡುತ್ತೇನೆ ಎಂದು. 6-8-9 ತಿಂಗಳಾಯಿತು, ಹಣ ಕೊಟ್ಟಿಲ್ಲ ನೀವು. ಅಂದರೆ ನಿಮ್ಮಸರ್ಕಾರ ರೈತನ ಪಾಲಿಗೆ ಸತ್ತಿದೆ, ಬದುಕಿಲ್ಲ ನೀವು. ನೀವು ಜೀವಂತ ಹೆಣ ಆದಹಾಗೆ ರೈತನ ದೃಷ್ಟಿಯಲ್ಲಿ ಆಗಿದ್ದೀರಿ. ರೈತನನ್ನು ಕಡೆಗಾಣಿಸುತ್ತಿದ್ದೀರಿ. ಅದಕ್ಕಾಗಿ ಆ ಪಾಪಕ್ಕೆ ನೀವು ಪ್ರಾಯಶ್ಚಿತ್ತವನ್ನು ಅನುಭವಿಸಬೇಕಾಗುತ್ತದೆ. ಮುಖ್ಯಮಂತ್ರಿಗಳು ಘೋಷಣೆ ಮಾಡಿದರು, ಅದಕ್ಕೆ ನಾನು ಸಂತೋಷ ಪಟ್ಟೆ. ಬಹಳ ವರ್ಷಗಳ ನಂತರ ಹೊಸ ಘೋಷಣೆ. ಏನೆಂದರೆ, ಅಕ್ಟೋಬರ್ 2ನೇ ತಾರೀಖು ಯಾರು ಅನ್-ಆಥರೈಸ್ಡ್ ಕಲ್ಟಿವೇಷನ್ ಮಾಡುತ್ತಿದ್ದಾರೆ, ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ, ಅವರಿಗೆಲ್ಲಾ ಪಟ್ಟಾವನ್ನು ಕೊಡುತ್ತೇವೆ ಎಂದು. ದಯಮಾಡಿ ಸ್ವಾಮಿ, ಬಹುಶಃ ನಿಮಗೆ ಇಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತಾ ಇಲ್ಲ. ಎಳೆದಾಟ, ಕಚ್ಚಾಟ, ಇದರಲ್ಲಿ ಯಾರೂ ಸಹ ಸಮಾಧಾನವಾಗಿ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ ಅಂಕಿ ಅಂಶಗಳನ್ನು ತರಿಸಿಕೊಳ್ಳುವುದಕ್ಕೆ ಆಗುತ್ತದೆಯೋ, ಇಲ್ಲವೋ ಗೊತ್ತಿಲ್ಲ. ನಿಮ್ಮ ಪರಿಸ್ಥಿತಿಯನ್ನು ನಾನು ಅರ್ಥಮಾಡಿಕೊಳ್ಳುತ್ತಿದ್ದೇನೆ. ಆದರೆ ಒಂದು ಮಾತನ್ನು ಹೇಳುತ್ತೇನೆ. ನಿಮ್ಮ ಜಿಲ್ಲಾಧಿಕಾರಿಗಳು, ಒಬ್ಬ ಶಾಸಕರು ಇರುವಂಥ ಬಗರ್‌ಹುಕುಂ ಸಾಗುವಳಿ ಸಮಿತಿ ಇದೆಯಲ್ಲಾ, ಅದರ ಮೂಲಕ ಪರಿಸ್ಥಿತಿಯನ್ನು ತಿಳಿದುಕೊಂಡಿದ್ದೀರಾ? ಎಷ್ಟು ಲಕ್ಷ ಅಪ್ಲಿಕೇಷನ್ ಬಗರ್‌ಹುಕುಂ ಸಾಗುವಳಿ ಮಾಡುವ ಜಮೀನನ್ನು ಖಾಯಂ ಮಾಡಬೇಕೆಂದು ಅರ್ಜಿಗಳನ್ನು ಕೊಟ್ಟಿದ್ದಾರೆಂಬುದು ಗೊತ್ತಿದೆಯೇ ಸ್ವಾಮಿ? ಶಿವಮೊಗ್ಗ

ಜಿಲ್ಲೆಯ ಅಂಕಿಅಂಶಗಳನ್ನು ನಾನು ಕೊಡುತ್ತೇನೆ. ಜಿಲ್ಲಾಧಿಕಾರಿಗಳಿಂದ ಲಿಖಿತ ಮೂಲಕ ನಮ್ಮ ಮೀಟಿಂಗ್‌ನಲ್ಲಿ ತೆಗೆದುಕೊಂಡಿರತಕ್ಕಂಥ ವಿವರಗಳಂತೆ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಲಕ್ಷದ ನಲವತ್ತು ಸಾವಿರ ಅರ್ಜಿಗಳು ಬಂದಿವೆ. ಒಂದು ಸ್ಯಾಂಪಲ್ ಫಿಗರ್ಸ್ ನಿಮಗೆ ಕೊಡುತ್ತೇನೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ನಿನ್ನೆ ಮೊನ್ನೆಯವರೆಗೆ ಈ ಬಗರ್‌ಹುಕುಂ ಸಾಗುವಳಿಯದ್ದು ಫೈನಲೈಸ್ ಆಗಿರುವುದು ಕೇವಲ 3 ಸಾವಿರ ಅರ್ಜಿಗಳು. ಇದು ಏತಕ್ಕೆ ಗೊತ್ತೇ ಸ್ವಾಮಿ? ನಿಮ್ಮ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಸರ್ವೇಯರ್‌ಗಳನ್ನು ಕಳುಹಿಸಿಯೇ ಇಲ್ಲ. ಸರ್ವೇಯರ್‌ಗಳಿಲ್ಲದೆಯೇ ಇನ್ನು ಒಂದು ತಿಂಗಳೊಳಗಾಗಿ ಅಂದರೆ ಅಕ್ಟೋಬರ್ ತಿಂಗಳೊಳಗೆ ಬಗರ್‌ಹುಕುಂ ಸಾಗುವಳಿದಾರರಿಗೆ ಎಲ್ಲರಿಗೂ ಪಟ್ಟಾ ಕೊಡುತ್ತೇವೆಂದು ಮುಖಪುಟದಲ್ಲಿ ಪತ್ರಿಕೆಗಳಲ್ಲಿ ಹಾಕಿದರು. ಇದನ್ನು ನೋಡಿ ರೈತ ಪಟ್ಟಾ ಕೊಡುತ್ತಾರೆಂದು ನಂಬಿಬಿಟ್ಟ. ನಾನು ಹೇಳುತ್ತೇನೆ, ಸರ್ವೇಯರ್ಸ್ ಕೊಡದಿದ್ದರೆ ಇನ್ನು ಹತ್ತುವರ್ಷಗಳಾದರೂ ಸಹಿತ ಪಟ್ಟಾವನ್ನು ಕೊಡುವುದಕ್ಕಾಗುವುದಿಲ್ಲ. ಇದು ನಂಬರ್ ಒನ್. ನಂಬರ್ 2 ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಬಗರ್‌ಹುಕುಂ ಸಾಗುವಳಿ ಅರಣ್ಯ ಇಲಾಖೆಗೆ ಸೇರಿದ ಜಮೀನಿನಲ್ಲಿ ಮಾಡಿದ್ದಾರೆ. ಜನತಾಪಕ್ಷ ಇಲ್ಲಿ ಅಧಿಕಾರದಲ್ಲಿ ಇದ್ದಂಥ ಕಾಲದಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ. ಏನು ತೀರ್ಮಾನ ತೆಗೆದುಕೊಂಡರು ಎಂಬುದಕ್ಕೆ ಕ್ಯಾಬಿನೆಟ್ ತೀರ್ಮಾನವನ್ನು ತೆಗೆದುಕೊಂಡು ನೋಡಿ. ಯಾರು ಹತ್ತಾರು ವರ್ಷಗಳಿಂದ ಅನ್‌ಆಥರೈಸ್ಡ್ ಕಲ್ಟಿವೇಷನ್ ಮಾಡುತ್ತಿದ್ದಾರೆ, ಅದು ಯಾವುದೇ ಜಮೀನು ಇರಬಹುದು, ಅದು ಅವನ ವಶದಲ್ಲಿರುವುದರಿಂದ ಅರಣ್ಯ ಇಲಾಖೆ, ಕಂದಾಯ ಇಲಾಖೆಯಲ್ಲಿರತಕ್ಕಂಥ ಜಮೀನು, ಸಿ ಅಂಡ್ ಡಿ ಲ್ಯಾಂಡ್ ಜಮೀನು ಆ ಜಮೀನನ್ನು ವರ್ಗಾವಣೆ ಮಾಡಿಕೊಟ್ಟು ಆ ಜಮೀನನ್ನು ಖಾಯಂ ಮಾಡಬೇಕೆಂದು ನಾವು ಹೇಳಿದ್ದೇವೆ. ಆ ರೀತಿ ಚರ್ಚೆಮಾಡಿ ನಾವು ಒಂದು ತೀರ್ಮಾನಕ್ಕೆ ಈ ಸದನದಲ್ಲಿ ಬಂದಿದ್ದೆವು. ಈ ಸದನದಲ್ಲಿ ದಿನಗಟ್ಟಲೆ ಚರ್ಚೆಯಾಗಿದೆ. ಒಕ್ಕಲೆಬ್ಬಿಸುವುದಕ್ಕೆ ಹೋದಾಗ ಈ ಸದನದಲ್ಲಿ ನಾವು ಧರಣಿ ಕುಳಿತುಕೊಳ್ಳಬೇಕಾಯಿತು. ಆವತ್ತಿನ ಅರಣ್ಯ ಖಾತೆಯ ಸಚಿವರಾಗಿದ್ದ ಮಾನ್ಯ ರಾಚಯ್ಯನವರು ಆ ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಜಮೀನು ಸಾಗು ಮಾಡುವವರನ್ನು ಒಕ್ಕಲೆಬ್ಬಿಸುವ ಶಾಸನವನ್ನು ತಂದಾಗ ಅಲ್ಲಿ ಕಣ್ಣೀರುಹಾಕಿಕೊಂಡು ಧರಣಿ ಕುಳಿತುಕೊಂಡದ್ದು, ಈ ದೇಶದ ಇತಿಹಾಸದಲ್ಲಿ, ವಿಧಾನ ಸಭೆಯಲ್ಲಿ ಆ ಬಿಲ್ಲನ್ನು ಬೇಷರತ್ತಾಗಿ ಹಿರಿಯರಾದಂಥ ಮಾನ್ಯ ರಾಚಯ್ಯನವರು ಆ ಬಿಲ್ಲನ್ನು ವಾಪಸ್ ಪಡೆದರು. ಸ್ವಾಮಿ, ಸಿ ಅಂಡ್ ಡಿ ಲ್ಯಾಂಡ್ ವಾಪಸ್ ತೆಗೆದುಕೊಳ್ಳಬೇಕೆಂಬುದು ನಿಮ್ಮ ತೀರ್ಮಾನವಾಯಿತು. ಆದರೆ ಇವತ್ತು ಇದ್ದಕ್ಕಿದ್ದ ಹಾಗೆ ಮತ್ತೆ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಬೇಕೆಂದು ಆದೇಶವನ್ನು ಕೊಟ್ಟಿದ್ದೀರಿ. ಇಲ್ಲಿ ಎರಡು ಸಂಗತಿಗಳಿರುತ್ತವೆ, ಒಂದು ನಿಮ್ಮ ಸರ್ಕಾರ 100ಕ್ಕೆ 90 ಜನ ಅರಣ್ಯ ಇಲಾಖೆಯ ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಮಾಡುತ್ತಿರುವಂಥ ಜಮೀನುಗಳನ್ನು ಖಾಯಂ ಮಾಡುತ್ತೀರೋ ಇಲ್ಲವೋ? ಆದರೆ ಅವರು 15-20 ವರ್ಷಗಳಿಂದ ಮಾಡುತ್ತಿದ್ದಾರೆ. ಅವರು ಒತ್ತುವರಿ ಮಾಡಿಕೊಂಡು ಹೋಗುತ್ತಿದ್ದಾರೆ. ಕಾಡು ಬೆಳೆಯುವುದಕ್ಕೆ ಅನಾನುಕೂಲವಾಗಿದೆ. ಅಂದರೆ ಪ್ರಾಬ್ಲಮ್ ಏನು, ಸಮಸ್ಯೆ ಏನು, ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಆಗುತ್ತಿಲ್ಲ. ದೊಡ್ಡ ದೊಡ್ಡ ಘೋಷಣೆಗಳು ಪತ್ರಿಕೆಗಳಲ್ಲಿ ಬರುತ್ತವೆ. ವೀರಾವೇಷದ ಮಾತುಗಳು ಬರುತ್ತವೆ. ಇದರಿಂದ ನೀವು ಏನೂ ಸಾಧನೆ ಮಾಡಲಿಕ್ಕಾಗುವುದಿಲ್ಲ. ಪೊಳ್ಳು ಘೋಷಣೆಗಳಿಂದ ಏನೂ ಸಾಧನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಜನರನ್ನು ಬಹಳ

ದಿವಸ ಈ ರೀತಿ ವಂಚನೆ ಮಾಡುವುದಕ್ಕೆ ನಿಮ್ಮಿಂದ ಸಾಧ್ಯವಾಗುವುದಿಲ್ಲ. ಆದಕ್ಕಾಗಿ ಇವತ್ತು ನಾನು ಹಿರಿಯರಾದಂಥ ಮಾನ್ಯ ರಂಗನಾಥ್‌ರವರನ್ನು ಕೇಳುತ್ತೇನೆ, ಎಂಥ ವಿಚಿತ್ರ ಶಾಸನ ಸ್ವಾಮಿ ಇದು; ಎಂಥ ಒಂದು ತೊಗಲಕ್ ದರ್ಬಾರ್ ನಡೆಸುತ್ತಿದ್ದೀರಿ ನೀವು? ತಮಗೆ ಗೊತ್ತಿರುವ ಹಾಗೆ ಅನ್ ಆಥರೈಸ್ಡ್ ಕಲ್ಟಿವೇಷನ್ ಮಾಡುವಂಥ ಸಂದರ್ಭದಲ್ಲಿ ಗೋಮಾಳಗಳನ್ನು ಖಾಯಂ ಮಾಡುವುದಕ್ಕೆ ಸಮಿತಿಯವರಿಗೆ ಅಧಿಕಾರವನ್ನು ಕೊಟ್ಟಿದ್ದೀರಿ, ಗೋಮಾಳ ಎಲ್ಲಿದೆ? ಊರ ಹತ್ತಿರದಲ್ಲಿದೆ, ದನಕರುಗಳಿಗೋಸ್ಕರವಾಗಿ, ಆಯಿತು. ಯಾರೋ ಬಹಳ ವರ್ಷಗಳಿಂದ ಮಾಡುತ್ತಿದ್ದಾರೆ; ಕೊಡಬೇಕೆಂದು ಮಾಡಿದ್ದೀರಿ, ಮಾಡಿ. ಆದರೆ ಅದೇ ಗೋಮಾಳದಲ್ಲಿ ಬಡವರಿಗೆ ಸೈಟ್ಸ್ ಕೊಡುವುದಕ್ಕೆ ನಮಗೆ ಅಧಿಕಾರವಿಲ್ಲ. ಯಾವುದು ಮುಖ್ಯ ಸ್ವಾಮಿ? ಎಂಥ ಸರ್ಕಾರ ಸ್ವಾಮಿ;

ನಮ್ಮ ರಾಜ್ಯದಲ್ಲಿ ಎಂಥ ಜನ ಅಧಿಕಾರವನ್ನು ನಡೆಸುತ್ತಿದ್ದಾರೆ? ಸಮಸ್ಯೆಗಳೇ ನಿಮಗೆ ಗೊತ್ತಿಲ್ಲ. ಗೋಮಾಳದಲ್ಲಿ 4-5 ಎಕರೆ ಜಮೀನನ್ನು ಮಂಜೂರು ಮಾಡಲಿಕ್ಕೆ ಅಧಿಕಾರ ಕೊಟ್ಟಿದ್ದರೂ, ಅದೇ ಗೋಮಾಳದಲ್ಲಿ ಸೈಟ್‌ಗಳನ್ನು ಮಾಡಿಕೊಡುವುದಕ್ಕೆ, ಬಡವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ, ಹರಿಜನ ಗಿರಿಜನರಿಗೆ ಕೊಡಲು ನಮಗೆ ಅಧಿಕಾರವಿಲ್ಲ. ತೆಗೆದುನೋಡಿ, ಹೌದೋ ಅಲ್ಲವೋ, ಹೇಳಿ ನೀವುನಾನು ತಲೆಬಾಗಲಿಕ್ಕೂ ಸಿದ್ಧನಿದ್ದೇನೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಕೊಡಲು ನಾನು ಸಿದ್ಧನಿದ್ದೇನೆ. ಈಗಲಾದರೂ ತಾವು ನಾಳೆ ಹೋಗುತ್ತೀರೋ, ನಾಳಿದ್ದು ಹೋಗುತ್ತೀರೋ, ಯಾವತ್ತು ರಾಜೀನಾಮೆ ಕೊಟ್ಟು ರಾಷ್ಟ್ರಪತಿ ಆಡಳಿತ ಬರುತ್ತದೋ ಗೊತ್ತಿಲ್ಲ. ಆದರೆ ಇವತ್ತು ಆಜ್ಞೆಯನ್ನು ಮಾಡಿಹೋಗಿ. ಹೋಗಬೇಕಾದರೆ ಒಂದು ಪುಣ್ಯದ ಕೆಲಸ ಮಾಡಿ. ರೈತರ ಋಣ ತೀರಿಸಿ ಹೋಗುವುದಕ್ಕೆ ಮುಂಚೆ ಒಂದು ಒಳ್ಳೆಯ ಕೆಲಸ ಮಾಡಿ ಹೋಗಿ ಸಿ ಅಂಡ್ ಡಿ ಲ್ಯಾಂಡ್ ಬಗ್ಗೆ ಸ್ವಾಮಿ, ಆಜ್ಞೆನಂಬರ್ ಆರ್ ಡಿ 106, ಎಲ್‌ಜಿಎಫ್, 88, ಬೆಂಗಳೂರು ದಿನಾಂಕ 3ನೇ ಜನವರಿ 1991ರಂದು ಏನು ಆದೇಶ ಮಾಡಿದ್ದೀರಿ? ಸಿ ಅಂಡ್ ಡಿ ಲ್ಯಾಂಡನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದ್ದು, ಅವರು ಉಪಯೋಗ ಮಾಡಿಕೊಳ್ಳದೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅದೆಲ್ಲಾ ಜಮೀನುಗಳನ್ನು ವಾಪಸ್ ರೆವಿನ್ಯೂ ಇಲಾಖೆ ಪಡೆಯಬೇಕು ಎನ್ನುವಂಥ ಒಂದು ಆಜ್ಞೆಯನ್ನು ಇವತ್ತು ಹೊರಡಿಸಿದ್ದೀರಿ. ಅದರ ಬಗ್ಗೆ ಚರ್ಚೆ ನಡೆದು ಅದರ ಆಧಾರದ ಮೇಲೆ ತೀರ್ಮಾನ ತೆಗೆದುಕೊಂಡಿರಿ. ಆದಾದಮೇಲೆ ಏನು ಮಾಡಿದಿರಿ? ಇದ್ದಕ್ಕಿದ್ದ ಹಾಗೆ ದಿನಾಂಕ 15-7-93ರಂದು ಸರ್ಕಾರದ ಕಾಯದರ್ಶಿ, ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ, ಸರ್ಕಾರಿ ಪತ್ರ ಸಂಖ್ಯೆ ಎ.ಹೆಚ್.ಇ.ಇ.ಎಫ್ 7, 15-7-1993, ಕಂದಾಯ ಇಲಾಖೆಯಿಂದ; 4 ಲಕ್ಷದ 50 ಸಾವಿರ ಹೆಕ್ಟೇರ್ ಸಿ ಅಂಡ್ ಡಿ ಲ್ಯಾಂಡ್ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವ ಬಗ್ಗೆ; ಇದ್ದಕ್ಕಿದ್ದ ಹಾಗೆ ಇಲ್ಲಿ ಚರ್ಚೆ ಮಾಡಿ ಸಿ ಅಂಡ್ ಡಿ ಲ್ಯಾಂಡನ್ನು ಅರಣ್ಯ ಇಲಾಖೆಯವರಿಗೆ ಕೊಡಕೂಡದು, ಅದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿ ನೀವೇ ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಇಡೀ ರಾಜ್ಯದಲ್ಲಿ ಬೀದರ್‌ನಲ್ಲಿ 22 ಸಾವಿರ ಹೆಕ್ಟೇರ್,ಗುಲ್ಬರ್ಗಾದಲ್ಲಿ 20 ಸಾವಿರ ಹೆಕ್ಟೇರ್, ರಾಯಚೂರಿನಲ್ಲಿ 20ಸಾವಿರ ಹೆಕ್ಟೇರ್, ಈ ರೀತಿ ನಾಲ್ಕು ಲಕ್ಷದ 50 ಸಾವಿರ ಎಕರೆ ಜಮೀನನ್ನು ಮತ್ತೆ ಅರಣ್ಯ ಇಲಾಖೆಗೆ ತೆಗೆದುಕೊಳ್ಳಲು ನೀವು ಏತಕ್ಕೆ ತೀರ್ಮಾನ ತೆಗೆದುಕೊಂಡಿರಿ? ನೀವು ಅರಣ್ಯ ಬೆಳೆಸುವುದಕ್ಕೆ ನಮ್ಮದೇನೂ ವಿರೋಧವಿಲ್ಲ. ಬಲ್ಕ್ ಆಗಿ ಅವರಿಗೆ ಎಷ್ಟು ಬೇಕೋ ಅಷ್ಟು ಕೊಟ್ಟು ಅರಣ್ಯ ಅಭಿವೃದ್ಧಿ

ಮಾಡುವುದನ್ನು ನೋಡಿಕೊಂಡು ಕನ್‌ಫರ್ಮ್ ಮಾಡಿಕೊಂಡು ಕೊಡಿ. ನಾಳೆ ಈ ರೀತಿ ರೆವಿನ್ಯೂ ಲ್ಯಾಂಡನ್ನು ಕೊಡುತ್ತಾ ಹೋದರೆ, ಏನಾದರೂ ಅಭಿವೃದ್ಧಿ ಮಾಡಬೇಕೆಂದರೆ, ಅರಣ್ಯ ಇಲಾಖೆಯವರು ಡೆಲ್ಲಿಯನ್ನು ತೋರಿಸುತ್ತಾರೆ. ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಅವರ ಮನಸ್ಸಿನಲ್ಲಿ ಅವರಿಗೂ ಈ ರಾಜ್ಯಕ್ಕೆ ಸಂಬಂಧ ಇದೆ ಎಂಬ ಕಲ್ಪನೆಯೇ ಇಲ್ಲ. ಅಲ್ಲಿ ಪಿ.ಡಬ್ಲ್ಯು.ಡಿ. ರಸ್ತೆಗೆ ಜಲ್ಲಿ ತರಲಿಕ್ಕೆ ಕಾಡಿಗೆ ಹೋದರೆ, ಲಾರಿಗಳನ್ನು ತಡೆಯುತ್ತಾರೆ.. ಆದರೆ ಗಂಧದ ಕಟ್ಟಿಗೆ ಬೇಕಾದರೆ ಹೋಗಬಹುದು, ಲೂಟಿಯಾಗಬಹುದು. ಯಾವ ರೀತಿ ಬೇಜವಾಬ್ದಾರಿ ಕೆಲಸ ಇವತ್ತು ನಡೆಯುತ್ತಿದೆ ಎಂಬುದನ್ನು ನೋಡಬೇಕು ಅದಕ್ಕಾಗಿ ಹೇಳುತ್ತಿರುವುದು. ನಿಜಕ್ಕೂ ನಿಮಗೆ ಕಳಕಳಿ ಇದ್ದರೆ ಈ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಿ. ಇಲ್ಲದಿದ್ದರೆ ಹತ್ತು ವರ್ಷವಾದರೂ ನಿಮ್ಮ ಸರ್ವೆಯರನ್ನು ಕಳುಹಿಸಿಕೊಡದಿದ್ದರೆ ಬಗರ್‌ಹುಕುಂ ಅನ್ನು ಖಾಯಂ ಮಾಡುವುದಕ್ಕಾಗುವುದಿಲ್ಲ. ಪಟ್ಟಾ ಕೊಡುವುದು ಕನಸಾಗಿಯೇ ಉಳಿಯುತ್ತದೆಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಶ್ರಯ ಯೋಜನೆ ಬಗ್ಗೆ ನಾನು ಮಾತನಾಡಿದ್ದೆ. ಅದು ತಮಗೂ ಗೊತ್ತಿದೆ. ಮಾಜಿ ಸ್ಪೀಕರ್ ಆದ ಶ್ರೀ ಬಿ.ಜಿ. ಬಣಕಾರ್ ಅವರು ತಮಗೆ ಒಂದು ಪತ್ರ ಬರೆದಿದ್ದಾರೆ. ಆ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಧಾರವಾಡ ಜಿಲ್ಲೆ ಹಿರೇಕೆರೂರು ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಲ್ಲಿ ಸುಮಾರು 9 ಲಕ್ಷಕ್ಕಿಂತ ಹೆಚ್ಚು ಹಣ ದುರುಪಯೋಗವಾಗಿದೆ ಎಂದು ತಿಳಿದು ಬಂದಿದೆ. ಅಲ್ಲಿರುವಂಥಬಿಡಿಓ. ಹಣ ತೆಗೆದುಕೊಂಡು ಊರೇ ಬಿಟ್ಟು ಹೊರಟುಹೋಗಿದ್ದಾನೆ. ನನಗೆ ಬಂದಿರುವ ಪತ್ರವನ್ನು ತಮಗೆ ಕಳುಹಿಸಿಕೊಡುತ್ತೇನೆ. ಹೌದೋ ಅಲ್ಲವೋ ನೋಡಿ. ಕನ್‌ಫರ್ಮ್ ಮಾಡಿಕೊಂಡು ಉತ್ತರ ಕೊಡಿ. ಬಿಡಿಓ ಪತ್ತೆ ಇಲ್ಲ. 9 ಲಕ್ಷ ರೂಪಾಯಿ ಹಣ ಕೊಟ್ಟು ಆಶ್ರಯ ಯೋಜನೆಯಲ್ಲಿ ಇದುವರೆಗೆ ಮನೆ ಕಟ್ಟಲಿಲ್ಲ. ಆಶ್ರಯ ಯೋಜನೆಯಲ್ಲಿ ಕೂಡ ಅಧಿಕಾರಿ ಹಣ ಲೂಟಿ ಮಾಡಿಕೊಂಡು ಹೋಗುತ್ತಾನೆ. ಅದು ಪತ್ತೆ ಆಗಿಲ್ಲ. ಡಿ.ಸಿ ಏನು ಮಾಡುತ್ತಿದ್ದಾರೆ ಎ.ಸಿ. ಏನು ಮಾಡುತ್ತಿದ್ದಾರೆ. ಹೇಳುವವರು ಕೇಳುವವರು ಯಾರಾದರೂ ಇದ್ದಾರೋ ಇಲ್ಲವೋ? ಬಡವರಿಗೆ ರಾಜ್ಯದಲ್ಲಿ ಸೈಟು ಕೊಡುತ್ತೇವೆಂದು ಹೇಳಿ ಒಳ್ಳೆಯ ತೀರ್ಮಾನ ತೆಗೆದುಕೊಂಡಿರಿ. ಸುತ್ತಮುತ್ತ ಸರ್ಕಾರದ ಜಾಗ ಇಲ್ಲದಿದ್ದರೆ ಖಾಸಗಿ ಜಾಗವನ್ನು ಅಕ್ವೈರ್ ಮಾಡಿಕೊಂಡು ಮಾರ್ಕೆಟ್ ರೇಟ್‌ಗಿಂತ 20-30 ಪರ್ಸೆಂಟ್ ಜಾಸ್ತಿ ಕೊಟ್ಟು ಕೊಂಡುಕೊಳ್ಳಬಹುದೆಂದು ಹೇಳಿದಿರಿ. ನಾನು ನಿಮಗೆ ಅಂಕಿಅಂಶ ಕೊಟ್ಟು ಹೇಳುತ್ತೇನೆ. ನೀವು ಮುಖ್ಯಮಂತ್ರಿಗಳಾದ ಮೇಲೆ 9 ತಿಂಗಳಲ್ಲಿ ಎಷ್ಟು ಜನರಿಗೆ ಈ ಸೈಟ್‌ಗಳನ್ನು ಕೊಟ್ಟಿದ್ದೀರಿ? ಶಿಕಾರಿಪುರ ತಾಲ್ಲೂಕಿನಲ್ಲಿ 9 ಹಳ್ಳಿಗಳಲ್ಲಿ 2-3 ಎಕರೆ ಜಮೀನು ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರ್ ಆಗಿರುವ ಪ್ರಕಾರ ತೀರ್ಮಾನ ಮಾಡಿ ಡಿ.ಸಿ.ಗೆ ಕಳುಹಿಸಿ ಕೊಟ್ಟಿದ್ದೇವೆ. ಕಳುಹಿಸಿಕೊಟ್ಟು 3 ತಿಂಗಳಾಗಿದೆ, ಅದು ಅಲ್ಲೇ ಪೆಂಡಿಂಗ್ ಇದೆ. ಮಂಜೂರಾಗಿ ಬಂದಿಲ್ಲ. ಜಮೀನು ಕೊಟ್ಟಿದ್ದಾರೆ, ಪೊಸಿಷನ್ ತೆಗೆದುಕೊಂಡಿದ್ದೇವೆ. ಪತ್ರ ಬರೆಸಿಕೊಂಡಿದ್ದೇವೆ. ಸೈಟ್ ಮಾಡುವುದಕ್ಕೆ ಸಿದ್ಧಮಾಡಿಕೊಂಡಿದ್ದೇವೆ. ಆದರೆ ದುಡ್ಡಿಲ್ಲ, ನೀವು ಬಿಡುಗಡೆ ಮಾಡುತ್ತಿಲ್ಲ. ಇಲ್ಲಿ ಫೈಲ್ ಇಟ್ಟುಕೊಂಡು ಕುಳಿತಿದ್ದೀರಿ. ಶಾಸಕರ ಮೇಲೆ ನಂಬಿಕೆ ಇಲ್ಲವೇ? ಡಿ.ಸಿ. ಮೇಲೆ ನಂಬಿಕೆ ಇಲ್ಲವೇ? ಎಲ್ಲಾ ವಿಧಾನಸೌಧಕ್ಕೆ ಏತಕ್ಕೆ ಬರಬೇಕು? ಎಲ್ಲಿ ಅಧಿಕಾರ ವಿಕೇಂದ್ರೀಕರಣವಾಗಿದೆ? ನೀವು ಎಚ್ಚರವಾಗಿದ್ದೀರೋ, ಮಲಗಿದ್ದೀರೋ, ಗಾಢ ನಿದ್ರೆಯಲ್ಲಿದ್ದೀರೋ? ನಿಮ್ಮ ಕಂದಾಯ ಇಲಾಖೆ

ಬದುಕಿದೆಯೇ ಸತ್ತಿದೆಯೇ? ಇದು ನಮಗೆ ಯಕ್ಷಪ್ರಶ್ನೆಯಾಗಿ ಕುಳಿತಿದೆ. ಇದೇ ರೀತಿ ಸಾವಿರಾರು ಸಮಸ್ಯೆಗಳು ಇವೆ. ಮಲೆನಾಡು ಅಭಿವೃದ್ಧಿ ಬಗ್ಗೆ ನಮ್ಮ ತುಟಿಗೆ ತುಪ್ಪ ಹಚ್ಚಿದಿರಿ, ಖುಷಿ ಆಯಿತು. 1992-93ನೇ ಸಾಲಿನಲ್ಲಿ ಘೋಷಣೆ ಮಾಡಿದರು. ಶಿವಮೊಗ್ಗ ಜಿಲ್ಲೆಯವರು ಬಂದಿದ್ದಾರೆ ನಮ್ಮ ಮಲೆನಾಡು ಉದ್ಧಾರವಾಗುತ್ತದೆ ಅಂದುಕೊಂಡೆವು. ಅವರು ಹೇಳಿಕೊಂಡು ಹೊರಟು ಹೋದರು. ದುಡ್ಡು ಬಿಡುಗಡೆ ಆಗಿರಲಿಲ್ಲ. ನೀವು ಬಂದಮೇಲೆ ದೊಡ್ಡ ವೀರ ಅಭಿಮನ್ಯುವಿನಂತೆ ಘೋಷಣೆ ಮಾಡಿದಿರಿ. ಕಾರ್ಯ ಪ್ರಾರಂಭವಾಗುತ್ತದೆಂದು, ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಇಲ್ಲಿ ಎಲ್ಲಾ ಅಧಿಕಾರಿಗಳ ಸಭೆ ಕರೆದಿರಿ. ನೀವು ಹೇಳಿದಿರಿ, ತಕ್ಷಣ ವರ್ಕ್ಸ್ ಸ್ಯಾಂಕ್ಷನ್ ಮಾಡುತ್ತಿದ್ದೇವೆ ಎಂದು. ಡಿ.ಸಿ. ಕರೆದು ಕ್ರಮ ಕೈಗೊಳ್ಳುತ್ತೇವೆಂದು ಹೇಳಿದಿರಿ. ಹತ್ತು ಕೋಟಿ ಕೊಟ್ಟು ಆಗಲೇ ಹತ್ತು ತಿಂಗಳಾಯಿತು. ಒಂದು ರೂಪಾಯ ಕೂಡ ಖರ್ಚಾಗಿಲ್ಲ. ನಾನು ನಿನ್ನೆ ದಿವಸ ಛೇರ್ಮನ್ ಅವರನ್ನು ಭೇಟಿಯಾಗಿದ್ದೆ. ಒಬ್ಬ ಪ್ರಾಮಾಣಿಕ ವ್ಯಕ್ತಿಯನ್ನು ಛೇರ್ಮನ್ ಮಾಡಿದ್ದೀರಿ. ಅದೊಂದು ಒಳ್ಳೆಯ ಕೆಲಸ ಮಾಡಿ ಪುಣ್ಯ ಕಟ್ಟಿಕೊಂಡಿದ್ದೀರಿ. ಛೇರ್ಮನ್ ಭೇಟಿಯಾದರೆ ನಿಮ್ಮ ಷರತ್ತು ಏನು ಸ್ವಾಮಿ? ಒಂದು ಲಕ್ಷಕ್ಕಿಂತ ಮೇಲಿದ್ದರೆ ಟೆಂಡರ್ ಕರೆಯಿರಿ. ಇವತ್ತು ನಿಮ್ಮ ಲೋಕೋಪಯೋಗಿ ಇಲಾಖೆಯಲ್ಲಿ 4-5 ಲಕ್ಷ ರೂಪಾಯಿಗಳ ಕೆಲಸ ಇದ್ದರೆ ಇವತ್ತು ಅವರು ಸ್ಪ್ಲಿಟ್ ಮಾಡಿಕೊಂಡು ಕೆಲಸ ಮಾಡುವ ಅಧಿಕಾರ ಕೊಟ್ಟಿದ್ದೀರಿ. ಸರ್ಕಾರಿ ಆಜ್ಞೆ ಇದೆ, ಈ ನಿಮಿಷಕ್ಕೆ ಇದರಂತೆ ನಡೆಯುತ್ತಿದೆ. ಹಾಗಾದರೆ ಇಲ್ಲಿ ಈ ಷರತ್ತು ಏತಕ್ಕೆ? ನೀವು 40 ಕೋಟಿ ಇದುವರೆಗೆ ಖರ್ಚು ಮಾಡಬೇಕಾಗಿತ್ತು. ಈ ವರ್ಷ 40-50 ಕೋಟಿ ರೂಪಾಯಿ ಬಿಡುಗಡೆ ಮಾಡಬೇಕಾಗಿತ್ತು. ಇವತ್ತು ಅವರ ಕೈಕಟ್ಟಿದ್ದೀರಿ. ಕೊಟ್ಟ ಹತ್ತು ಕೋಟಿ ಹಾಗೇ ಇದೆ, ನಾನೇನು ಮಾಡಲಿ ಎಂದು ನಿಮ್ಮನ್ನು ಕೇಳಿದರೆ ಹೇಳುತ್ತೀರಿ. ಈ ರೀತಿ ಜನರ ಕಣ್ಣಿಗೆ ಮಣ್ಣೆರಚುವ ನಿಮ್ಮ ಯೋಜನೆಗಳಿಂದ ಕಾರ್ಯಕ್ರಮಗಳಿಂದ ನೀವು ಏನೂ ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ತುಂಬಾ ದೃಢ ನಿರ್ಧಾರ ಮಾಡಿದ್ದೀರಿ;ಕ್ಯಾಪಿಟೇಷನ್ ಇನ್‌ಸ್ಟಿಟ್ಯೂಷನ್‌ನ ಹಾವಳಿಯನ್ನು ತಪ್ಪಿಸುವುದಕ್ಕೆ ಎಂದು ಅಂದುಕೊಂಡಿದ್ದೆವು. ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ಇವತ್ತು ನಾನು ನಿಮ್ಮನ್ನು ಕೇಳುತ್ತೇನೆ. ಇವತ್ತು ನಿಮಗೆ ನಮ್ಮ ರಾಜ್ಯದ ಮಕ್ಕಳ ಬಗ್ಗೆ ಕಳಕಳಿ ಇದ್ದರೆ ಹೊರ ರಾಜ್ಯದವರ ಅರ್ಜಿಗಳನ್ನು ಏತಕ್ಕೆ ಕರೆದಿರಿ? 31 ಸಾವಿರ ಅರ್ಜಿಗಳು ಹೊರರಾಜ್ಯಗಳಿಂದ ಬಂದಿವೆ, 29 ಸಾವಿರ ಅರ್ಜಿಗಳು ನಮ್ಮ ರಾಜ್ಯದಿಂದ ಬಂದಿವೆ. ಇಡೀ ರಾಜ್ಯದಲ್ಲಿ ಎಕ್ಸಾಮಿನೇಷನ್ ಮಾಡಿದ್ದೀರಿ. ಈ ನಿಮಿಷದವರೆಗೆ ಫೈನಲೈಸ್ ಮಾಡಿಲ್ಲ. ಗ್ರಾಮೀಣ ಮಕ್ಕಳಿಗೆ ಅನುಕೂಲವಾಗಬೇಕೆಂದು ಅವತ್ತಿನಿಂದ ಇವತ್ತಿನವರೆಗೆ ಒತ್ತಾಯ ಮಾಡುತ್ತಿದ್ದೇವೆ. 50 ಪರ್ಸೆಂಟ್ ಕರ್ನಾಟಕದವರಿಗೆ ಮೆರಿಟ್ ಸೀಟ್ ಕೊಡುತ್ತೇವೆಂದು ಹೇಳಿದ್ದಿರಿ. 25 ಪರ್ಸೆಂಟ್ ಪೇಮೆಂಟ್ ಸೀಟು ಎಂದು ಹೇಳಿದ್ದಿರಿ, 30 ಪರ್ಸೆಂಟ್ ಔಟ್‌ಸೈಡ್ ದಿ ಸ್ಟೇಟ್‌ಗೆ ಎಂದು ಹೇಳಿದ್ದೀರಿ. ಒಬ್ಬ ಇಂಜಿನಿಯರ್ ಸ್ಟೂಡೆಂಟ್, ರೈತನ ಮಗ ಆದ್ದರೆ 20 ಪರ್ಸೆಂಟ್ ಪೇಮೆಂಟ್ ಸೀಟು ಎಂದು ಹೇಳುತ್ತೀರಿ, 20 ಸಾವಿರ ವರ್ಷಕ್ಕೆ ಅಂದರೆ 4 ವರ್ಷಕ್ಕೆ 80 ಸಾವಿರ ಮತ್ತು ಇತರೆ ಖರ್ಚು ಸೇರಿ ಒಂದು ಲಕ್ಷ ರೂಪಾಯಿ ಒಂದೇ ಸಾರಿ ಕಟ್ಟಬೇಕು. ಇಲ್ಲದಿದ್ದರೆ ಬ್ಯಾಂಕ್ ಗ್ಯಾರಂಟಿ ಕೊಡಬೇಕು. ಇದು ಸಾಧ್ಯವೇ? ನಮ್ಮ ರೈತನ ಮಗ ವರ್ಷಕ್ಕೆ ಒಂದು ಸಾರಿ 20 ಸಾವಿರ ಜೋಡಿಸಲು ಎಲ್ಲಿ ಸಾಧ್ಯ? ನಮ್ಮ ರೂಲ್ಸ್ ಪ್ರಕಾರ ಮೆರಿಟ್ ತೆಗೆದುಕೊಂಡಿರುವವರು ಯಾರು? 50ಪರ್ಸೆಂಟ್ ತೆಗೆದುಕೊಂಡಿರುವವರು. ಶ್ರೀಮಂತರ ಮಕ್ಕಳು,

ವಿದ್ಯಾವಂತರ ಮಕ್ಕಳು, ಡಾಕ್ಟರ್ ಹಾಗೂ ಎಂಜಿನಿಯರ್ಸ್ ಮಕ್ಕಳು. ಅವರಿಗೆ ಸಿಗುತ್ತದೆ. ಬಡವನ ಮಗ 20 ಸಾವಿರದಂತೆ ಒಟ್ಟಿಗೆ 1ಲಕ್ಷ ರೂಪಾಯಿಕಟ್ಟಬೇಕು; ಅವನ ಹಣದಲ್ಲಿ ಈ ದೊಡ್ಡವರ ಮಕ್ಕಳನ್ನು ಓದಿಸೋದು ಹೇಗಿದೆ ನಮ್ಮ ನೀತಿ? ಇವತ್ತು ಬಡವರಿಗೆ ಬ್ಯಾಂಕ್ ಗ್ಯಾರಂಟಿ ಕೊಡುವುದು ಸಾಧ್ಯವೇ? ಕೊನೆಗೆ ಆ ಸೀಟ್ ಅವನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದರಿಂದ ಹೊರಗಿನ ರಾಜ್ಯದವರಿಗೆ ಉಪಯೋಗವಾಗುತ್ತದೆ. ಈ ರೀತಿಯ ಒಂದು ಗೊಂದಲ ವಾತಾವರಣ ಇದೆ. ಅದನ್ನು ಸರಿ ಮಾಡುವ ಪ್ರಾಮಾಣಿಕ ಪ್ರಯತ್ನ ಮಾಡದೇ ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆಂದು ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ. ನಾವೆಲ್ಲಾ ಚಪ್ಪಾಳೆ ತಟ್ಟಿದೆವು. ನೀವು ಮುಖ್ಯಮಂತ್ರಿಗಳಾದಾಗ ನೀವು ಹೇಳಿದ ಹೊಸ ಕಾರ್ಯಕ್ರಮಗಳನ್ನು ಕೇಳಿ ನಿಮ್ಮ ಹೌಸಿಂಗ್ ಪಾಲಿಸಿ ಏನಾಯಿತು? ಇವತ್ತು ನಿಮ್ಮ ಆರ್ಡಿನೆನ್ಸ್ ಕೋರ್ಟ್‌ನಲ್ಲಿ ಸ್ಟೇ ಆಗಿದೆ. ಇವತ್ತು ಬಿಡಿಎ ಸತ್ತಿದೆ. ಹಣವನ್ನು ಕಟ್ಟಿಸಿಕೊಂಡು ಹತ್ತಾರು ಸಾವಿರ ಜನರಿಗೆ ಸೈಟ್ ಎಲ್ಲಿದೆ ಎಂದು ತೋರಿಸಿಲ್ಲ. ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಕೆಲವು ಪ್ರಾಮಾಣಿಕ ಸೊಸೈಟಿಗಳು ಇದ್ದವು. ಕಡಿಮೆ ಬೆಲೆಗೆ ಸೈಟ್ ಕೊಡುತ್ತಿದ್ದರು. 30 ಮತ್ತು 40 ಅಡಿ ಅಳತೆಯ ಸೈಟ್‌ನ್ನು 40ರಿಂದ 50 ಸಾವಿರ ರೂಪಾಯಿಗೆ ಕೊಡುತ್ತಿದ್ದರು. ಆದರೆ ಇವತ್ತು ಬಿಡಿಎ ರೇಟ್ ಪ್ರಕಾರ 1 ಲಕ್ಷ ರೂಪಾಯಿ ಆಗುತ್ತಿದೆ. ಅದೂ ಕೂಡಾ ಕೊಟ್ಟಿಲ್ಲ. ಎಂದರೆ ನೀವು ಯಾವುದೋ ವೀರಾವೇಶದಲ್ಲಿ ಸಮಗ್ರವಾಗಿ ಏನೋ ಕ್ರಾಂತಿ ಮಾಡುತ್ತೇವೆ, ಏನೋ ಬದಲಾವಣೆ ತರುತ್ತೇವೆಂದು ನಿಮ್ಮ ಕೈಯನ್ನೇ ಸುಟ್ಟುಕೊಳ್ಳುವಪ್ರಯತ್ನ ಮಾಡಿದ್ದೀರಿ ಇವತ್ತು ಹೊರರಾಜ್ಯದಿಂದ ಬಂದಿರುವವರಿಗೆ ಅನುಕೂಲ ಆಗುವಂತೆ ಆಗಿದೆ. ಇವತ್ತು ಕನ್ನಡ ನಾಡಿನ ಜನ ಬೆಂಗಳೂರಿನಲ್ಲಿ 30-40 ವರ್ಷಗಳಿಂದ ವಾಸ 7-8 ಸಾರಿ ಅರ್ಜಿ ಹಾಕಿದರೂ ಅವರಿಗೆ ಸೈಟ್ ಸಿಕ್ಕಿದೆಯೇ? ಬಿಡಿಎ ವತಿಯಿಂದ ಕಳೆದ 9 ತಿಂಗಳಲ್ಲಿ ಎಷ್ಟು ಜಮೀನನ್ನು ಅಕ್ವೈರ್ ಮಾಡಿದ್ದೀರಿ? ಎಷ್ಟು ಸೈಟ್ ಫಾರ್ಮ್ ಮಾಡಿದ್ದೀರಿ? ಎಷ್ಟು ಜನರಿಗೆ ಸೈಟ್ ಹಂಚಿದ್ದೀರಿ? ಏನೂ ಕೇಳುವುದು ಬೇಡ. ನಿಮ್ಮ ಸರ್ಕಾರ ಬದುಕಿದ್ದೂ ಸತ್ತ ಶವದ ರೀತಿಯಲ್ಲಿ ಇದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಕ್ಸೈಸ್ ಬಗ್ಗೆ ನಾನು ಏನೂ ಮಾತನಾಡುವುದಕ್ಕೆ ಇಚ್ಛೆಪಡುವುದಿಲ್ಲ. ನಿಮ್ಮ ಎಕ್ಸೈಸ್ ಪಾಲಿಸಿ ಏನು? ದೊಡ್ಡ ದೊಡ್ಡ ಘೋಷಣೆಗಳನ್ನು ಮಾಡಿದಿರಿ. ಅವನ್ನು ಕಾರ್ಯರೂಪಕ್ಕೆ ತರುವ ಸ್ಥಿತಿಯಲ್ಲಿ ನೀವಿಲ್ಲ. 702 ಕೋಟಿ ರೂಪಾಯಿ ಆದಾಯ ಬರಬೇಕೆಂದು ಏನು ಹೇಳಿದ್ದೀರಿ; ಅದರ ಬಗ್ಗೆ ತಾವೇ ಒಪ್ಪಿಕೊಳ್ಳುತ್ತೀರಿ. ಕೊನೆಗೆ ಕನಿಷ್ಠ 175 ಕೋಟಿ ರೂಪಾಯಿಗಳು ನಿಮ್ಮ ಪಾಲಿಸಿಯಿಂದಲೇ ಕಡಿಮೆಯಾಗುತ್ತದೆ. ಹರಾಜು ಹಾಕಿದಾಗ ಬಿಡ್ ಕರೆದಾಗ ಏನು ಶರತ್ತು ಇತ್ತು ಅದನ್ನು ಬದಲಾವಣೆ ಮಾಡಿದಿರಿ. ಒಂದು ಲೀಟರ್ ಅರ್‍ಯಾಕನ್ನು 25 ರೂಪಾಯಿ 44 ಪೈಸೆಗೆ ಮಾರುತ್ತಿದ್ದರು. ಆ ಒಂದು ರೇಟ್‌ನಲ್ಲಿ ಟೆಂಡರ್ ಕರೆದಿರಿ. ಹರಾಜಿಗೆ ಎಲ್ಲರೂ ಬಂದರು. ಈಗ ಏನು ಮಾಡಿದ್ದೀರಿ? ಏಕಾಏಕಿ 16 ರೂಪಾಯಿಗೆ ಇಳಿಸಿದಿರಿ. ಒಂದು ಲೀಟರಿಗೆ ಡಿಫರೆನ್ಸ್ 9 ರೂಪಾಯಿ 44 ಪೈಸೆ ಆಗುತ್ತದೆ. ನಿಮ್ಮ ಸರ್ಕಾರದ ಒಂದು ಹೇಳಿಕೆ ಪ್ರಕಾರ 1 ವರ್ಷಕ್ಕೆ 8 ಕೋಟಿ ಲೀಟರ್ ಮಾರಾಟ ಆಗುತ್ತದೆ. ಅದನ್ನು 9.44 ರೂಪಾಯಿಯಂತೆ ಲೆಕ್ಕ ಹಾಕಿದರೆ ಸುಮಾರು 75 ಕೋಟಿ 52 ಲಕ್ಷ ರೂಪಾಯಿ ಈ ಒಂದು ಬಾಬಿನಲ್ಲಿ ಸರ್ಕಾರದ ಬೊಕ್ಕಸಕ್ಕೆ ಬರುವುದು ಹೋಗುತ್ತದೆ. ಅವರು ಟ್ಯಾಕ್ಸ್ ಎಷ್ಟು ತುಂಬುತ್ತಿದ್ದರು? 25.44 ರೂಪಾಯಿಗೆ ಕೊಡುತ್ತಿದ್ದವರು ಈಗ 16 ರೂಪಾಯಿಗೆ ಕೊಡುವಂತಾಯಿತು. ಒಂದು ಲೀಟರಿಗೆ ಈ ವ್ಯತ್ಯಾಸ ಟ್ಯಾಕ್ಸ್ ರೂಪದಲ್ಲಿ 2 ರೂಪಾಯಿ 1 ಪೈಸೆಯಂತೆ

ಆದರೆ 8 ಕೋಟಿ ಲೀಟರ್‌ಗೆ ಸುಮಾರು 16 ಕೋಟಿ ರೂಪಾಯಿ ಕಡಿಮೆ ಆಗುತ್ತದೆ. ಈರೀತಿ ನೀವು ಅರ್‍ಯಾಕ್ ಹರಾಜು ಮಾಡುವಾಗ ಹೇಳಿದ್ದಕ್ಕೂ, ಅದನ್ನು ಕಾರ್ಯರೂಪಕ್ಕೆ ತರುವ ಸಂದರ್ಭದಲ್ಲಿ ಹೇಳಿದ ಮಾತಿಗೂ ವ್ಯತ್ಯಾಸ ಆಯಿತು. ಈಗ ಏನೋ ಒಂದು ತಿದ್ದುಪಡಿ ತರುತ್ತೇವೆಂದು ಹೇಳುತ್ತಿದ್ದೀರಿ. ಅದು ಆಗುವುದಿಲ್ಲ. ಈಗ ಜನರೇ ಮಾತನಾಡುತ್ತಿದ್ದಾರೆ. ಯಾವ ಅರ್‍ಯಾಕ್ ಲಾಬಿಗೆ, ಗ್ರೈನೈಟ್ ಲಾಬಿಗೆ ಮತ್ತು ಬೇರೆಬೇರೆ ಲಾಬಿಗಳಿಗೆ ಭಿನ್ನಮತೀಯರು ಸಿಕ್ಕಿದ್ದಾರೆಂದು ಹೇಳುತ್ತಿದ್ದೀರೋ, ಆ ಕಪಿಮುಷ್ಟಿಗೆ ನೀವೇ ಸಿಕ್ಕಿದ್ದೀರಿ ಎಂದು ನಿಮ್ಮವರೇ ನಿಮ್ಮನ್ನು ದೂರಿದ್ದಾರೆ. ಪ್ರಧಾನಿಯವರಿಗೆ ಲಿಖಿತ ಮೂಲಕ ಆರೋಪ ಮಾಡಿದ್ದಾರೆ. ಇದನ್ನು ನಾನು ಹೇಳುತ್ತಾ ಇಲ್ಲ. ವಿದ್ಯುತ್ ದರದಲ್ಲಿ ಏನು ಮಾಡಿದ್ದೀರಿ? ಜನರು ತೊಂದರೆಗೆ ಒಳಗಾಗಿದ್ದಾರೆ. ನಿಮ್ಮ ಇಲಾಖೆ ಸರಿಯಾಗಿ ನಡೆಸಲು ಆಗದೇ, ಯಾವುದೇ ಇಂಪ್ರೂವ್‌ಮೆಂಟ್ಸ್ ಮಾಡದೇ ಏಕಾಏಕಿ ಸದನ ಸೇರುವುದು ಗೊತ್ತಿದ್ದರೂ ಸಹಾ ವಿದ್ಯುತ್ ದರ ಜಾಸ್ತಿ ಮಾಡಿದ್ದೀರಿ. ಮೂರು ವರ್ಷದಲ್ಲಿ 3 ಬಾರಿ ಜಾಸ್ತಿ ಮಾಡಿದ್ದೀರಿ. ಕಡಿಮೆ ಮಾಡುತ್ತೇವೆಂದು ಉಪಮುಖ್ಯಮಂತ್ರಿಗಳು ಹೇಳಿದರು. ನೀವು ಹೇಳಿದಿರಿ, ಮಂತ್ರಿಮಂಡಲದಲ್ಲಿ ತೀರ್ಮಾನ ತೆಗೆದುಕೊಂಡಿಲ್ಲ ಎಂದು. ಒಂದು ರೀತಿಯ ಗೊಂದಲದ ವಾತಾವರಣ. ಒಂದು ಪೈಸೆ ಕೂಡಾ ಜಾಸ್ತಿ ಮಾಡುವ ನೈತಿಕ ಹಕ್ಕು ಇಲ್ಲ. ಮೊದಲ ದರ ಏನಿತ್ತೋ ಆ ದರದಲ್ಲಿ ಇಳಿಸಬೇಕೆಂದು ಹೇಳುತ್ತೇನೆ. ನೀವು ಅಧಿಕಾರದಲ್ಲಿ ಇರುತ್ತೀರೋ ಹೋಗುತ್ತಿರೋ ಗೊತ್ತಿಲ್ಲ.

(ಶ್ರೀ ಜಿ.ಎಸ್. ಶಿವನಂಜಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆದರೆ ಇವತ್ತಿನ ವಾತಾವರಣ ನೋಡಿದರೆ, ಇಂತಹ ಒಂದು ಸ್ಥಿತಿ ಇರುವಾಗ ತಾವು ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ಕೃಷ್ಣ ಮತ್ತು ಕಾವೇರಿ ಜಲಾನಯನ ಪ್ರದೇಶದ ಸ್ಥಿತಿ ಅಧೋಗತಿ ಆಗಿದೆ. ನಿಮಗೆ ಇಲ್ಲಿ ಪುರುಸೊತ್ತು ಇಲ್ಲ. ನಿಮ್ಮ ನೀರಾವರಿ ಸಚಿವರೂ ಬಿಡುವು ಮಾಡಿಕೊಂಡು ಹೋಗುವುದಕ್ಕೆ ಅವರಿಗೆ ಪುರುಸೊತ್ತು ಇಲ್ಲ. 2000ನೇ ಇಸವಿಯ ಹೊತ್ತಿಗೆ ಮುಗಿಸಲು ವರ್ಷಕ್ಕೆ ಇಷ್ಟು ಕೊಟ್ಟರೆ ಸಾಧ್ಯ ಆಗುತ್ತದೆಂದು ಬಜೆಟ್ ಭಾಷಣದಲ್ಲಿ ಹೇಳಿದರು. ಲೆಕ್ಕ ಬಹಳ ಸುಲಭ. ಆದರೆ ಅದನ್ನು ಕಾರ್ಯರೂಪಕ್ಕೆ ತರುವಂತಹ ಪ್ರಾಮಾಣಿಕ ಪ್ರಯತ್ನವನ್ನು ನೀವು ಮಾಡಿದ್ದೀರೇನು? ತಾವೇನು ಉತ್ತರ ಕೊಟ್ಟಿದ್ದೀರಿ? 1992-93ನೇ ಸಾಲಿನಲ್ಲಿ 155ಕೋಟಿ ರೂಪಾಯಿಗಳನ್ನು ಕೃಷ್ಣಾ ಬೇಸಿನ್‌ಗೆ ತೆಗೆದು ಇಟ್ಟಿದ್ದೀರಿ. ಜನವರಿ 1993ಕ್ಕೆ 51 ಕೋಟಿ 98ಲಕ್ಷ ರೂಪಾಯಿ ಖರ್ಚಾಗಿದೆ. ಬಜೆಟ್ ಅಧಿವೇಶನದ ಸಂದರ್ಭದಲ್ಲಿ 110 ಕೋಟಿ ರೂಪಾಯಿ ಎಂದು ಹೇಳಿದ್ದೀರಿ. ಅದರಲ್ಲಿ ಎಸ್ಟಾಬ್ಲಿಷ್‌ಮೆಂಟ್‌ಗೆ ಶೇಕಡ 50ರಷ್ಟು ಖರ್ಚು ಮಾಡಿದ್ದೀರಿ. ಹೀಗಾದರೆ ಯಾವ ಕಾಲಕ್ಕೆ ಆ ಯೋಜನೆ ಮುಗಿಯಬೇಕು? ನಾನೊಂದು ಉದಾಹರಣೆಯನ್ನು ಕೊಡುತ್ತೇನೆ, ನಾನು ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕಿಗೆ ಹೋಗಿದ್ದೆ. ನಿಮ್ಮ ಅಧಿಕಾರಿಗಳು ಹೇಗೆ ನಿರ್ಲಕ್ಷ್ಯದಿಂದ ಇದ್ದಾರೆ ಎನ್ನುವುದಕ್ಕಾಗಿ ಒಂದು ಉದಾಹರಣೆಯನ್ನು ಕೊಡುತ್ತೇನೆ. ಕೃಷ್ಣಾ ಬೇಸಿನ್‌ನಲ್ಲಿ 1973ನೇ ಇಸವಿಯಲ್ಲಿ ಹಿಪ್ಪರಗಿ ಬ್ಯಾರೇಜನ್ನು ಕಟ್ಟುವುದಕ್ಕೆ ಒಂದು ತೀರ್ಮಾನ ತೆಗೆದುಕೊಳ್ಳಲಾಯಿತು. 1973ರಲ್ಲಿ ಕೆಲಸ ಪ್ರಾರಂಭವಾಯಿತು. ಅದರ ಅಂದಾಜುವೆಚ್ಚ 24ಕೋಟಿ ರೂಪಾಯಿಗಳು ಇದುವರೆಗೆ 18 ಕೋಟಿ ರೂಪಾಯಿ ಮಾತ್ರ ಖರ್ಚಾಗಿದೆ. ಈ ವರ್ಷದ ಬಜೆಟ್‌ನಲ್ಲಿ 5 ಕೋಟಿ ರೂಪಾಯಿ ತೆಗೆದಿಟ್ಟಿದ್ದಾರೆ. ಅಲ್ಲಿ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರುಗಳೆಲ್ಲಾ ಬಂದಿದ್ದರು. ನಾನು ಅವರ ಹತ್ತಿರ ಮಾತನಾಡಿದ್ದೇನೆ. 5ಕೋಟಿ ರೂಪಾಯಿಗಳಲ್ಲಿ 65ಲಕ್ಷ ರೂಪಾಯಿ ಖರ್ಚು

ಮಾಡಿದ್ದಾರೆ. 1993-94ಕ್ಕೆ ಅದರ ಎಸ್ಟಿಮೇಟ್ ಕಾಸ್ಟ್ 255ಕೋಟಿ ರೂಪಾಯಿಗಳು. 1973ರಲ್ಲಿ ಅದನ್ನು ಪ್ರಾರಂಭ ಮಾಡಿದಾಗ 24ಕೋಟಿ ರೂಪಾಯಿ ಅಂದಾಜು. ಆ ಬ್ಯಾರೇಜ್ ಸಲುವಾಗಿ ಇದುವರೆಗೆ ಕೇವಲ 18ಕೋಟಿರೂಪಾಯಿ ಮಾತ್ರ ಖರ್ಚುಮಾಡಿದ್ದಾರೆ. ಪ್ರತಿ ವರ್ಷ 5ಕೋಟಿ ರೂಪಾಯಿ ಬಿಡುಗಡೆ ಮಾಡುತ್ತಾ ಹೋದರೆ ಇನ್ನು 50 ವರ್ಷಗಳಾದರೂ ಅದು ಮುಗಿಯುತ್ತದೇನು? ನಿಮಗೆ ಏನಾದರೂ ಈ ನಾಡಿನ ರೈತನನ್ನು ಉಳಿಸಬೇಕೆನ್ನುವ ಕಳಕಳಿ ಇದೆಯೇನು? ಡಂಕೆಲ್ ಪ್ರಪೋಸಲ್ ಬಗ್ಗೆ ಇಡೀ ರಾಜ್ಯದಲ್ಲಿ ಹೋರಾಟ ನಡೆಯಿತು. ರೈತ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾನೆ, ಇದೊಂದು ಮಾರಕವೆಂದೂ, ಇದನ್ನು ಕೈಬಿಡಬೇಕೆಂದು ಹೇಳಿ ಒತ್ತಾಯ ತಂದಿದ್ದೇವೆ. ಅದು ಸಹಿಯಾಗುವುದಕ್ಕೆ ಮುಂಚೆ ಜಾರಿಯಾಗಿದೆ. ಇಲ್ಲದಿದ್ದರೆ ಗೊಬ್ಬರದ ಬೆಲೆ ಏಕೆ ಜಾಸ್ತಿಯಾಗುತ್ತಿತ್ತು? ಎಲ್ಲಾ ರೀತಿಯ ಗೊಂದಲದ ವಾತಾವರಣವನ್ನು ಇವತ್ತು ಸೃಷ್ಟಿ ಮಾಡಿದ್ದಾರೆ. ಅದರ ಬಗ್ಗೆ ಯಾವ ಕಳಕಳಿಯಿಲ್ಲ. ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಇದ್ದರೂ ಈ ರಾಜ್ಯದ ಜನರ ಅಭಿಪ್ರಾಯವನ್ನು ಅವರಿಗೆ ತಿಳಿಸುವುದಕ್ಕೆ ನೀವು ಸಿದ್ಧರಿಲ್ಲ. ತಾವು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದ ಜನಾಂಗದ ಉದ್ಧಾರಕರೆಂದು ಹೇಳಿದ್ದೀರಿ. ನೀವು ಅವರ ಮಕ್ಕಳಿಗೆ ಫ್ರೀ ಆಗಿ ಪುಸ್ತಕಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಇದು ನಿಮ್ಮ ಪಾಲಿಸಿ. ನಾನೊಂದು ಪ್ರಶ್ನೆಯನ್ನು ಎಜುಕೇಷನ್ ಮಿನಿಸ್ಟರ್‌ಗೆ ಕೇಳಿದ್ದೇನೆ. ಎಜುಕೇಷನ್ ಮಿನಿಸ್ಟರ್ ಒಬ್ಬರು ಹೆಣ್ಣುಮಗಳಿದ್ದಾರೆ;ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕಳಕಳಿಯಿದೆ. ನೀವು ಯಾವ ಕಾಲದಲ್ಲಿ ಮಂತ್ರಿಗಳಾಗಬೇಕಾಗಿತ್ತೋ ಆ ಕಾಲದಲ್ಲಿ ಆಗದೆ ಇಲ್ಲಿ, ಖಜಾನೆ ಖಾಲಿಯಾಗಿರುವ ಸಂದರ್ಭದಲ್ಲಿ ಯಾರೋ ಮಾಡಿದ ಸುಳ್ಳು ಘೋಷಣೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಆಗದಿರುವ ಘೋಷಣೆಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ನಾನು ಏತಕ್ಕೆ ನಿಮ್ಮನ್ನು ಒತ್ತಾಯ ಮಾಡಲಿ? ನಿಮ್ಮ ಅಧಿಕಾರಿಗಳು ಹಣ ಬಿಡುಗಡೆ ಮಾಡಿದ್ದೇವೆಂದು ಹೇಳಿಸಿದರು. ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂದು ನಾನು ಒತ್ತಾಯ ಮಾಡಿದೆ. ನೀವು ಏನು ಹೇಳಿದ್ದೀರಿ? ತಾವು ಉತ್ತರ ಕೊಟ್ಟಿದ್ದೀರಿ. ಹರಿಜನ ಗಿರಿಜನರ ಮಕ್ಕಳಿಗೆ ನಾನು ಏನು ಹೇಳಲಿ? ನೀವು ಒಳ್ಳೆಯ ಕೆಲಸ ಮಾಡುತ್ತಾ ಇದ್ದೀರಿ. ಈ ನಿಮಿಷದವರೆಗೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರ ಮಕ್ಕಳಿಗೆ ಮತ್ತು ಹಸಿರುಕಾರ್ಡ್ ಹೊಂದಿರುವವರ ಮಕ್ಕಳಿಗೆ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು ಪ್ರಾರಂಭವಾಗಿ 4 ತಿಂಗಳು ಕಳೆದರೂ ಸಹ ಒಬ್ಬರಿಗೂ ಒಂದು ಪುಸ್ತಕ ವಿತರಣೆಯಾಗಿಲ್ಲ. ಆದರೂ ಆಗಿದೆಯೆಂದು ನೀವು ಏಕೆ ಹೇಳುತ್ತೀರಿ? ಕಾರ್ಯರೂಪಕ್ಕೆ ತರುವುದಕ್ಕೆ ನಿಮ್ಮಿಂದ ಆಗಿಲ್ಲ. ಪುಸ್ತಕ ಕೊಡುವುದಕ್ಕೆ ನಿಮ್ಮಿಂದಆಗುವುದಿಲ್ಲವೆಂದರೆ ಅವರು ಚಿಂತೆ ಮಾಡುತ್ತಿರಲಿಲ್ಲ. ಹಣ ಬಿಡುಗಡೆ ಮಾಡಿದ್ದೇವೆಂದರೆ, ಎಷ್ಟು ಬಿಡುಗಡೆ ಮಾಡಿದ್ದೀರಿ? ಅದನ್ನು ಹೇಳುವುದಕ್ಕೆ ನಿಮಗೆ ಆಗುವುದಿಲ್ಲ. ಜುಲೈ ತಿಂಗಳಿನಲ್ಲಿ ಕೊಡಬೇಕಾಗಿತ್ತು; ನಾಲ್ಕು ತಿಂಗಳುಗಳಿಂದ ಆ ಮಕ್ಕಳ ವಿದ್ಯಾಭ್ಯಾಸದ ಗತಿಯೇನು? ಏನು ಮಾಡಬೇಕು ಅವರು?

ಶ್ರೀಮತಿ ನಾಗಮ್ಮ ಕೇಶವಮೂರ್ತಿ:(ಪ್ರಾಥಮಿಕ ಮಾಧ್ಯಮಿಕ ಪ್ರೌಢ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಶ್ನೆಯನ್ನು ಎತ್ತಿದಾಗ ರಾಜ್ಯದ ಪೂರ್ಣ ಮಾಹಿತಿ ನನ್ನ ಹತ್ತಿರ ಇಲ್ಲದಿದ್ದ ಕಾರಣ ನಾನು ಉತ್ತರ ಹೇಳಿಲ್ಲ. ಪೂರ್ಣ ಮಾಹಿತಿ ಪಡೆಯಲು ಈ ಪ್ರಶ್ನೆಯನ್ನು

ತಡೆಹಿಡಿಯಬೇಕೆಂದು ಕೇಳಿದ್ದೇನೆ. ಕೆಲವು ಜಿಲ್ಲೆಗಳದ್ದು ಮಾಹಿತಿ ಬಂದಿದೆ, ಕೆಲವು ಜಿಲ್ಲೆಗಳದ್ದು ಬಂದಿಲ್ಲ. ಕೆಲವು ಜಿಲ್ಲೆಗಳಲ್ಲಿ ಕೊಟ್ಟಿರಬಹುದು. ಕೆಲವಾರು ಜಿಲ್ಲೆಗಳಲ್ಲಿ ಹಂಚಿಕೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳವುದಕ್ಕೆ ಹೊರಟಿದ್ದೆ ಅಂದರೆ, ಶಾಲೆಗಳು ಪ್ರಾರಂಭವಾಗಿ ನಾಲ್ಕು ತಿಂಗಳುಗಳಾಗಿವೆ. ನೀವು ಈಗಲಾದರೂ ಅಂಕಿಅಂಶವನ್ನು ತರಿಸಿಕೊಂಡು ನೋಡಿ ಇಡೀ ರಾಜ್ಯದಲ್ಲಿ ಶೇಕಡ 5ರಷ್ಟು ಪುಸ್ತಕಗಳು ಸಹ ಡಿಸ್ಟ್ರಿಬ್ಯೂಟ್ ಆಗಿಲ್ಲ. ನೀವು ಇದರ ಬಗ್ಗೆ ನಾಳೆ ಹೇಳಿ. ಅಂಕಿಅಂಶಗಳನ್ನು ನಾನು ತಂದಿರುವ ಪ್ರಕಾರ ಇವತ್ತು ಕರ್ನಾಟಕ ರಾಜ್ಯದಲ್ಲಿ ನೀವೇ ಘೋಷಣೆ ಮಾಡಿದ ಕಾರ್ಯಕ್ರಮ ಕಾರ್ಯರೂಪಕ್ಕೆ ಬಂದಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಪ್ರಮುಖವಾದ ಅನೇಕ ಸಮಸ್ಯೆಗಳು ಇವೆ. ಗೊಂದಲ ವಾತಾವರಣದಲ್ಲಿ ಇದ್ದೀರಿ. ಭಟ್ಕಳದಲ್ಲಿ ಗೊಂದಲದ ವಾತಾವರಣ ಇದೆ. ಹತ್ತಾರು ಜನರ ಸಾವು ಆಗಿದೆ. ಅನೇಕ ಜನರ ಆಸ್ತಿಪಾಸ್ತಿ ನಷ್ಟವಾಗಿದೆ. ಜನರು ಪತ್ತೆಯಿಲ್ಲ. ಯಾರು ಅಪರಾಧಿಗಳು ಇದ್ದಾರೆ, ಅವರನ್ನು ಹಿಡಿದು ಶಿಕ್ಷಿಸುವಂತಹ ಪ್ರಾಮಾಣಿಕ ಪ್ರಯತ್ನ ಮಾಡುವಂತಹ ಸ್ಥಿತಿಯಲ್ಲಿ ನೀವು ಇಲ್ಲದಿರುವ ಒಂದು ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದೀರಿ. ನಾನು ರಾಜ್ಯದ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುವುದೇನೆಂದರೆ, ತಕ್ಷಣ ಆ ಕಡೆ ಗಮನ ಕೊಡಿ. ಅಲ್ಲಿ ಬೆಂಕಿ ಹತ್ತಿಕೊಂಡು ಉರಿಯುತ್ತಿರುವಾಗ ಹೇಳುವವರು ಕೇಳುವವರು ಯಾರೂ ಇಲ್ಲ. ಅಲ್ಲಿನ ನಾಗರೀಕರಿಗೆ ರಕ್ಷಣೆ ಇಲ್ಲದ ಪರಿಸ್ಥಿತಿ ಇದೆ. ಒಂದು ಸಭೆ ಕರೆದು ಚರ್ಚೆಮಾಡಿಯೆಂದು ಹೇಳುತ್ತೇನೆ. ಈ ಬಗ್ಗೆ ನಾನು ಹೆಚ್ಚಿನ ವಿವರಗಳಿಗೆ ಹೋಗುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ, ನಾನು ತಮ್ಮಲ್ಲಿ ವಿನಂತಿ ಮಾಡುವುದಿಷ್ಟೆ; ಯಾರೇ ಇರಲಿ, ಭಟ್ಕಳದಲ್ಲಿ ಈ ರೀತಿಯ ಗೊಂದಲದ ವಾತಾವರಣವನ್ನು ಸೃಷ್ಟಿ ಮಾಡುವಂತಾದ್ದು, ಕೊಲೆ ಸುಲಿಗೆ ಸೃಷ್ಟಿ ಮಾಡುವಂತಾದ್ದು ಹಾಗೂ ಅನೇಕ ಜನರ ಹತ್ಯೆ ಆಗುತ್ತಿರತಕ್ಕ ಈ ಸಂದರ್ಭದಲ್ಲಿ, ಈ ಕಪಿಮುಷ್ಠಿಯನ್ನು, ಯಾರ ಒಂದು ಬೆಂಬಲದಿಂದ ಈ ಕೆಲಸಗಳು ನಡೆಯುತ್ತಿವೆ, ಯಾರು ಮಾಡುತ್ತಿದ್ದಾರೆ, ಅಂತಹವರ ವಿರುದ್ಧ ದಿಟ್ಟ ನಿಲುವನ್ನು ತೋರಿಸಬೇಕಾಗುತ್ತದೆ. ಇಲ್ಲದಿದ್ದರೆ, ಬಹುಶಃ ಈ ರಾಜ್ಯದಲ್ಲಿ ಹಾಹಾಕಾರ, ಗೊಂದಲದ ವಾತಾವರಣ ಉಂಟಾಗುವುದಕ್ಕೆ ನೀವೇ ಜವಾಬ್ದಾರರಾಗುತ್ತೀರಿ ಎಂಬ ಮಾತನ್ನು ಈ ಸಂದರ್ಭದಲ್ಲಿಹೇಳುತ್ತೇನೆ. ಇವತ್ತು ಬೆಂಗಳೂರಿನಲ್ಲಿ ಒಂದು ವರ್ಷದಲ್ಲಿ 9 ಲಾಕಪ್ ಸಾವುಗಳಾಗಿವೆ. ಬೆಂಗಳೂರಿನಲ್ಲಿ ನಮ್ಮ ಸಾವಿರಾರು ಜನ ಕಾರ್ಯಕರ್ತರು ಪೋಲೀಸ್ ಕಮೀಷನರ್ ಕಚೇರಿ ಮುಂದೆ ಧರಣಿ ಕುಳಿತು, ಮನವಿಯನ್ನು ಕೊಟ್ಟರು. ನಾನು ಕೇಳುತ್ತೇನೆ, ನೀವು ಮುಖ್ಯಮಂತ್ರಿಯಾಗಿ, ರಾಜ್ಯದ ಜನರ ಹಿತವನ್ನು ಕಾಪಾಡುವುದರಲ್ಲಿ ವಿಫಲರಾಗಿದ್ದೀರಿ, ಒಳಾಡಳಿತ ಖಾತೆಯನ್ನೂ ನಿಮ್ಮ ಹತ್ತಿರ ಇಟ್ಟುಕೊಂಡು, ಅದನ್ನೂ ಸಹ ಸರಿಯಾಗಿ ನಡೆಸಿಕೊಂಡು ಹೋಗುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಇವತ್ತು ಈ ರೀತಿ, ಎಲ್ಲಾ ರಂಗಗಳಲ್ಲಿ ತಮ್ಮ ವೈಫಲ್ಯತೆ ನಿಮ್ಮನ್ನು ಕಾಡುತ್ತಿದೆ. ರೈತರ, ಬಡವರ, ಕೂಲಿಕಾರ್ಮಿಕರ, ನಿರುದ್ಯೋಗಿ ಯುವಕರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿ, ತಮ್ಮ ರಾಜಕೀಯ ಗೊಂದಲಾಟದಲ್ಲಿ ತಲ್ಲೀನರಾಗಿದ್ದೀರಿ. ನಿಮಗೆ ಒಂದು ಕ್ಷಣವೂ ಅಧಿಕಾರದಲ್ಲಿ ಮುಂದುವರಿಯುವ ನೈತಿಕ ಹಕ್ಕಿಲ್ಲ. ದಯಮಾಡಿ, ವಿಧಾನ ಸಭೆಯನ್ನು ವಿಸರ್ಜನೆ ಮಾಡಿ, ರಾಷ್ಟ್ರಪತಿ ಆಳ್ವಿಕೆಗೆ ಅನುಕೂಲ ಮಾಡಿಕೊಡಿ. ಈ ನಾಡಿನ ನಾಲ್ಕೂವರೆ ಕೋಟಿ ಜನ, ಬೆಂಗಳೂರಿಗೆ ನುಗ್ಗಬೇಕಾಗುತ್ತದೆ. ವಿಧಾನಸೌಧಕ್ಕೆಮುತ್ತಿಗೆ ಹಾಕಬೇಕಾಗುತ್ತದೆ. ಜನರೇ ನಿಮ್ಮನ್ನು ಅಧಿಕಾರ ಬಿಟ್ಟು

ತೊಲಗಿಸುವಂಥ ಪರಿಸ್ಥಿತಿಗೆ ಎಡೆಮಾಡಿಕೊಂಡು, ನೀವು ಸರ್ವನಾಶವಾಗಿ ಬಿಡುತ್ತೀರಿ. ಈಗಲಾದರೂ, ಈ ಎಲ್ಲಾ ಸಂಗತಿಗಳನ್ನು ತಿಳಿದ ಮೇಲಾದರೂ ಕೂಡ, ಕಾಂಗ್ರೆಸ್ ಉಳಿವಿನ ದೃಷ್ಟಿಯಿಂದ, ನಿಮ್ಮ ಉಳಿವಿನ ದೃಷ್ಟಿಯಿಂದ ವಿಧಾನಸಭೆಯನ್ನು ವಿಸರ್ಜನೆ ಮಾಡುವುದಕ್ಕೆ ಹಾಗೂ ಈ ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ಕೊಡುವಂಥ ಸದ್ಬುದ್ಧಿಯನ್ನು ಭಗವಂತನು ನಿಮಗೆ ಕೊಡಲಿ ಎಂದು ಪ್ರಾರ್ಥನೆ ಮಾಡಿ, ಇಷ್ಟುಹೊತ್ತು ಮಾತನಾಡಲು ಸಮಯ ಕೊಟ್ಟಿದ್ದಕ್ಕಾಗಿ, ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಶಿವಮೂರ್ತಿ(ಭರಮಸಾಗರ):- ಮಾನ್ಯ ಅಧ್ಯಕ್ಷರೇ, ಬಿ.ಜೆ.ಪಿ. ಯಡಿಯೂರಪ್ಪನವರು ದೇವರು ನಮಗೆ ಸದ್ಬುದ್ಧಿ ಕೊಡಲೆಂದು ಹೇಳುತ್ತಾರೆ. ಮಹಾತ್ಮಗಾಂಧಿಯವರು ಹೇಳಿದರು, "ಈಶ್ವರ ಅಲ್ಲಾ ತೇರೇ ನಾಮ್, ಸಬಕೋ ಸನ್ಮತಿ ದೇಭಗವಾನ್ "ಎಂದು ನಾವು ಅದನ್ನು ಬದಲಾವಣೆ ಮಾಡಿ, ತಮ್ಮ ಮೂಲಕ ಯಡಿಯೂರಪ್ಪನವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ "ಈಶ್ವರ ಅಲ್ಲಾ ತೇರೇನಾಮ್, ಬಿ.ಜೆ.ಪಿ. ಕೋ ಸನ್ಮತಿ ದೇಭಗವಾನ್" ಎಂದು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಯಾವುದೋ ಒಂದು ಆಸ್ಟ್ರಿಚ್ ಎಂಬ ಪಕ್ಷಿ ಇದೆಯಂತೆ. ಅದು, ಅಪಾಯ ಬಂದಾಗ, ತನ್ನ ಕೊಕ್ಕನ್ನು ಮತ್ತು ಮುಖವನ್ನು ಮರಳಲ್ಲಿ ಮುದುಡಿಕೊಂಡು, ಮುಚ್ಚಿಕೊಳ್ಳುತ್ತದಂತೆ. ಇವತ್ತು ನೀವು ಕೂಗುತ್ತಿದ್ದೀರಿ, ನಿಮ್ಮ ಸರ್ಕಾರ ಸರಿಯಿಲ್ಲವೆಂದು ಹೇಳುತ್ತೀರಿ, ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ ಎಂದು ಹೇಳುತ್ತೀರಿ; ಪ್ರಧಾನಿಯವರಿಗೆ ಮನವಿ ಕೊಡುವುದಕ್ಕೆ ಇಚ್ಛೆಪಡುತ್ತೀರಿ. ಅವಿಶ್ವಾಸ ನಿರ್ಣಯ ಬಂದಾಗ, ಆ ಹಕ್ಕಿಯಂತೆ ತಮ್ಮ ಮುಖ ಮುಚ್ಚಿಕೊಂಡು, ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳುವಂಥ ಪ್ರಯತ್ನ ಮಾಡುತ್ತಿದ್ದೀರಿ. ಈ ರೀತಿ ಮಾಡುವುದರಿಂದ ಜನರು ನಿಮ್ಮನ್ನು ನಂಬುತ್ತಾರೆಯೇ? ಯಾವುದನ್ನು ನೀವು ಹೇಳುತ್ತೀರಿ, ಅದಕ್ಕೆ ನಾವು ಬೆಂಬಲ ಕೊಡುತ್ತಿರುವ ಸಂದರ್ಭದಲ್ಲಿ ನೀವು ಈ ರೀತಿ ಮಾತನಾಡಿದರೆ ಹೇಗೆ? ನಿಮಗೆ ಭಗವಂತನು ಸದ್ಬುದ್ಧಿ ಕೊಡಲಿ. ಇವತ್ತು ನಿಮ್ಮ ಪರಿಸ್ಥಿತಿ ಆ ಹಕ್ಕಿಯಂತಾಗಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಕುಂದಾಪುರ):- ತಾವು ಕಾಂಗ್ರೆಸ್ ಪಕ್ಷದ ಬಗ್ಗೆ ಬಹಳಷ್ಟು ಟೀಕೆ ಮಾಡಿದ್ದೀರಿ. ಆದರೆ, ಎಷ್ಟೋ ಕಡೆಗಳಲ್ಲಿ ಕಾಂಗ್ರೆಸ್ಸಿನವರನ್ನೇ ನಿಮ್ಮ ಪಕ್ಷಕ್ಕೆ ತೆಗೆದುಕೊಳ್ಳುತ್ತಿದ್ದೀರಿ. ಇದರ ಅರ್ಥ ಏನು? ಇದಕ್ಕೆ ಉತ್ತರ ಕೊಡಿ. ವೆಂಕಟಗಿರಿಗೌಡರು ಜನತಾ ದಳದಲ್ಲಿದ್ದರು, ಅವರನ್ನು ಕರೆದುಕೊಂಡಿರಿ, ಕಾಂಗ್ರೆಸ್‌ನಲ್ಲಿದ್ದವರನ್ನೂ ಕರೆದುಕೊಂಡಿರಿ. ಬಿ.ಜೆ.ಪಿ.ಗೆ ಕರ್ನಾಟಕದಲ್ಲಿ ಒರಿಜಿನಾಲಿಟಿ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಮ್ಮ ಶಿವಮೂರ್ತಿಯವರಿಗೆ ಶುಕ್ರದೆಸೆ ಪ್ರಾರಂಭವಾದ ಹಾಗೆ ಕಾಣುತ್ತದೆ. ದೆಹಲಿಯಿಂದ ವೀಕ್ಷಕರು ಬರಬಹುದು; ಮಂತ್ರಿಮಂಡಲ ಬದಲಾವಣೆಯಾಗ ಬಹುದು, ಯಾರೋ ಇನ್ನೊಬ್ಬರು ಮುಖ್ಯಮಂತ್ರಿಗಳಾಗಿ, ನಮಗೂ ಅವಕಾಶಗಳು ಬರುತ್ತವೆ ಎಂಬ ಆನಂದದಲ್ಲಿ ಮೈಮರೆತು ಈ ರೀತಿ ಮಾತನಾಡುತ್ತಿದ್ದಾರೆ. ವೀಕ್ಷಕರು ಬರುವುದಿಲ್ಲ, ನಾಲ್ಕನೇ ಮುಖ್ಯಮಂತ್ರಿ ಆಗುವುದಕ್ಕೆ ಬಿಡುವುದಿಲ್ಲ; ನಿಮ್ಮ ಸರ್ವನಾಶ ಆಗುವುದು ನಿಶ್ಚಿತ. ನಾವು ಈ ನಾಡಿನ ಜನರ ಹತ್ತಿರ ಹೋಗುತ್ತೇವೆ. ನಿಮ್ಮ ಉಳಿವಿನ ದೃಷ್ಟಿಯಿಂದ, ನಾಲ್ಕನೇ ಮುಖ್ಯಮಂತ್ರಿ ಮಾಡುವುದಕ್ಕೆ ಹೊರಟಿರುವುದು ಅಕ್ಷಮ್ಯ ಅಪರಾಧ ಈ ಪ್ರಜಾತಂತ್ರ ವ್ಯವಸ್ಥೆಯನ್ನೇ ಕಗ್ಗೊಲೆ

ಮಾಡುವಂತಹ ಕೆಲಸ ಮಾಡುತ್ತಿದ್ದೀರಿ. ಈ ಕೆಲಸಕ್ಕೆ ಕೈಹಾಕಬೇಡಿ ಎಂದು ಹೇಳಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ಎನ್. ನಾಯಕ್(ಭಟ್ಕಳ್):- ಕಾಂಗ್ರೆಸ್ಸಿನವರನ್ನೇ ನಿಮ್ಮ ಪಕ್ಷಕ್ಕೆ ಸೇರಿಸಿ ಕೊಂಡಿದ್ದೀರೆಂದು ಹೇಳುತ್ತಿದ್ದರು. ನೀವು ಹೇಳುತ್ತೀರಿ, ಅವರು ಸರ್ವನಾಶವಾಗುತ್ತಾರೆ ಎಂದು. ನೀವೇನು ವಿಶ್ವಾಮಿತ್ರರೇ ಅಥವಾ ಬ್ರಹ್ಮರೇ. ಮತ್ತೆ ಈ ರೀತಿ ಏನಾದರೂ ನುಡಿದ ಕೂಡಲೇ ಮಾವಿನಕಾಯಿ ಉದುರಿಬಿಡುತ್ತದೆಯೇ? ನಿಮ್ಮ ರೀತಿನೀತಿ, ನಿಮ್ಮ ಭಾಷೆ ನೋಡಿದರೆ, ನೀವು ಏನು ಆಸೆಪಡುತ್ತಿದ್ದೀರಿ ಎಂಬುದು ಗೊತ್ತಾಗುತ್ತದೆ. ಜನ ಒಗ್ಗಟ್ಟಾಗಿದ್ದಾರೆ, ಜನರನ್ನು ನೀವೂ ನೋಡಿದ್ದೀರಿ, ನಾವೂ ನೋಡಿದ್ದೇವೆ. ನೀವೇ ಹೇಳಿದ್ದೀರಿ, ಮನೆಮನೆಗೂ ಹೋಗುತ್ತೇವೆ ಎಂದು. ನಮಗೆ ಮನೆಮನೆಗೆ ಹೋಗುವುದು ಗೊತ್ತಾಗುವುದಿಲ್ಲವೇ? ನಿಮಗೊಬ್ಬರಿಗೇ ಗೊತ್ತಾಗುವುದು? ನೀವು ಮಾತ್ರ ಜನರನ್ನು ನೋಡಿದ್ದೀರಿ, ನಾವು ನೋಡಿಲ್ಲವೇ? ಏನು ಮಾತನಾಡುತ್ತೀರಿ, ನೀವು ಆಡಿದ ಮಾತಿಗೆ ಗೌರವ ಬರಲಿ; ಆ ರೀತಿ ಮಾತನಾಡಿ.

4.25 ಪಿ.ಎಂ.

ಪ್ರೊ ಎಂ.ಡಿ. ನಂಜುಂಡಸ್ವಾಮಿ(ಧಾರವಾಡ ಗ್ರಾಮಾಂತರ):- ಸನ್ಮಾನ್ಯ ಸಭಾಧ್ಯಕ್ಷರೇ, ಈ ಅವಿಶ್ವಾಸ ನಿರ್ಣಯಕ್ಕೆ ಸಂಬಂಧಪಟ್ಟಹಾಗೆ ಬಹಳ ವಿವರಗಳನ್ನು ಕುರಿತು ಈಗಾಗಲೇ ಕೆಲವರು ಮಾತನಾಡಿದ್ದಾರೆ. ಈ ಸರ್ಕಾರದ ಭ್ರಷ್ಟಾಚಾರ ದುರಾಡಳಿತ, ಅಶಿಸ್ತು ಇದರ ಬಗ್ಗೆ ಮತ್ತೆ ನಾನೇನೂ ಮಾತನಾಡುವುದಿಲ್ಲ. ನನ್ನ ಕೈಯಲ್ಲಿ ಭಾರತದ ಸಂವಿಧಾನ ಇದೆ. ಈ ಸಂವಿಧಾನದ ಪ್ರಕಾರ ನಮ್ಮ ರಾಜ್ಯದಲ್ಲಿ ಸಂವಿಧಾನಾತ್ಮಕವಾದಂತಹ ಸಂವಿಧಾನಬದ್ಧ ಸರ್ಕಾರ ಹೋಗಿ ಬಹಳ ದಿವಸಗಳು ಆಗಿದೆ. ಸನ್ಮಾನ್ಯ ಸದಸ್ಯರಾದ ಚಂದ್ರೇಗೌಡರು ಇವತ್ತು ಬೆಳಿಗ್ಗೆ ಪದೇಪದೇ ಜಂಟೀ ಜವಾಬ್ದಾರಿ, ಜಂಟೀ ಜವಾಬ್ದಾರಿ ಎಂದು ಮಾತನಾಡುತ್ತಿದ್ದರು. ಆ ಜಂಟೀ ಜವಾಬ್ದಾರಿ ವ್ಯವಸ್ಥೆ ಕೂಡ ಹೋಗಿ ಬಹಳ ದಿವಸ ಆಯಿತು. ಸನ್ಮಾನ್ಯ ವೀರಪ್ಪಮೊಯ್ಲಿಯವರು ಮುಖ್ಯಮಂತ್ರಿ ಆಗುವುದಕ್ಕಿಂತ ಮುಂಚೇನೇ ಅದು ಹೋಯಿತು. ಯಾವತ್ತು ಇಲ್ಲಿ ಕಂಪ್ಯೂಟರ್ ಹಗರಣದ ಚರ್ಚೆನಡೆಯಿತು, ಯಾವತ್ತು ಕಂಪ್ಯೂಟರ್ ವ್ಯವಹಾರ ಸಚಿವ ಸಂಪುಟದ ಅಜೆಂಡಾದ ಹೊರಗಡೆ ತೀರ್ಮಾನ ಆಯಿತು ಎನ್ನುವುದು ಈ ಸದನಕ್ಕೆ ಗೊತ್ತಾಯಿತು, ಅವತ್ತೇ ಜಂಟೀ ಜವಾಬ್ದಾರಿಯ ಅಂಶ ಏನಿದೆ, ಏನು ಇರಬೇಕು, ಅದು ಇಲ್ಲ ಎನ್ನುವುದು ಕರ್ನಾಟಕಕ್ಕೆ ಗೊತ್ತಾಗಿದೆ. ಅವತ್ತೇ ನಮ್ಮ ರಾಜ್ಯದ ಸರ್ಕಾರವನ್ನು ರಾಜ್ಯಪಾಲರು ವಜಾ ಮಾಡಬೇಕಾಗಿತ್ತು. ಸಂವಿಧಾನದ ಪ್ರಕಾರ ರಾಜ್ಯಪಾಲರು ಪ್ರಮಾಣವಚನವನ್ನು ಸ್ವೀಕಾರ ಮಾಡುತ್ತಾರೆ. ಆರ್ಟಿಕಲ್ 159ರ ಪ್ರಕಾರ ಆ ಪ್ರಮಾಣ ವಚನದಲ್ಲಿ ಅವರು ಹೇಳುವುದು, ನಮಗೆ ಆಶ್ವಾಸನೆ ಕೊಡುವುದು "To the best of my ability, preserve, protect and defend the Constitution and the law and that I will devote myself to the service and well-being of the people of Karnataka." ಎಂದು; ಯಾವತ್ತು ಈ ಸದನಕ್ಕೆ ಜಂಟೀ ಜವಾಬ್ದಾರಿ ಅಂಶ ಇಲ್ಲ ಈ ಸರ್ಕಾರದಲ್ಲಿ ಎನ್ನತಕ್ಕಂಥದ್ದು ಗೊತ್ತಾಯಿತು ಅವತ್ತೇ ರಾಜ್ಯಪಾಲರು ಸಂವಿಧಾನದ ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗಿತ್ತು ಈ ರಾಜ್ಯದಲ್ಲಿ. ಇದನ್ನು ಏತಕೋಸ್ಕರ ನಾನು ನೆನಪು ಮಾಡುತ್ತಿದ್ದೇನೆಂದರೆ ನಿನ್ನೆ ನಮ್ಮ ವಿರೋಧಪಕ್ಷದ ನಾಯಕರಾದ ದೇಶಪಾಂಡೆಯವರು ಮಾತನಾಡುತ್ತಾ ಅಬಕಾರಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಏನೇನು ಅಬಕಾರಿ ದೊರೆಗಳಿಗೆ ಲಾಭ

ಮಾಡಿಕೊಟ್ಟಿತ್ತು ಈ ಸರ್ಕಾರ ಅಂತ ಹೇಳಿದರು; ಆ ಎಲ್ಲಾ ತೀರ್ಮಾನಗಳೂ ಕೂಡ ಸಚಿವ ಸಂಪುಟದ ಅಜೆಂಡಾದ ಹೊರಗಡೆ ಆದಂಥಾದ್ದು, ಅದರ ಜೊತೆಗೆ ಸಚಿವ ಸಂಪುಟದ ಕೆಲವು ಸದಸ್ಯರು ಘೋಷಣೆ ಮಾಡಿ ನಾನು ಹಾಜರಾಗುವುದಿಲ್ಲ ಎಂದು ಏನು ಪ್ರಕಟಣೆ ಮಾಡಿದ್ದರು ಅಂತಹ ದಿವಸಗಳಲ್ಲಿಯೇ ಆದಂತಹ ತೀರ್ಮಾನಗಳು ಇವು. ಆದ್ದರಿಂದ ಜಂಟೀ ಜವಾಬ್ದಾರಿ ಎಲ್ಲಿ ಉಳಿಯಿತು ಎಂದು ನಾನು ಪ್ರಶ್ನೆಮಾಡುತ್ತೇನೆ. ಬಹಳ ಮುಖ್ಯವಾದ ಒಂದು ಅಂಶ ಸಂವಿಧಾನದ ಪ್ರಕಾರ ಒಂದು ರಾಜ್ಯ ಸರ್ಕಾರದಲ್ಲಿ ಇರಬೇಕಾಗುತ್ತದೆ ಆರ್ಟಿಕಲ್ 164 (2)ನೇ ಕಲಂ ಪ್ರಕಾರ " The Council of Ministers shall be collectively responsible to the Legislative Assembly of the State." ಆದರೆ ಕಂಪ್ಯೂಟರ್ ವ್ಯವಹಾರದಿಂದ ಹಿಡಿದು ಅಬಕಾರಿ ವ್ಯವಹಾರದವರೆಗೂ ನಮ್ಮ ಸಂಪುಟದ ಸಚಿವರು ಮಾತನಾಡಿಕೊಂಡು ಈ ಕೆಲಸ ಮಾಡುತ್ತಿದ್ದಾರೋ ಏನೋ ಎನ್ನುವ ಗುಮಾನಿ ಕೂಡ ನಮ್ಮ ರಾಜ್ಯದ ಜನಗಳಿಗೆ ಇದೆ. ಕೆಲವರೇ ಭ್ರಷ್ಟರು ನಾವು ಇನ್ನೂ ಹಾಗೆ ಉಳಿದಿದ್ದೇವೆ ನಾವು ಪಾಲುದಾರರು ಅಲ್ಲ ಎನ್ನುವಂತಹ ಭಾವನೆ ನಮಗೆ ಬರಬೇಕಲ್ಲಾ ಕಂಪ್ಯೂಟರ್ ವ್ಯವಹಾರದಲ್ಲಿ ಅದೇ ಭಾವನೆ ಕೊಡುವುದಕ್ಕೆ ಪ್ರಯತ್ನಪಟ್ಟಿದ್ದು ಈಗ ಇರುವಂತಹ ಸರ್ಕಾರ. ಕಂಪ್ಯೂಟರ್ ವ್ಯವಹಾರ ಸಂಪುಟದ ತೀರ್ಮಾನ ಅಲ್ಲ; ನಾನು ಭಾಗಿಯಲ್ಲ ಅಂತ ಈಗ ಇಲ್ಲಿ ಕುಳಿತಿರುವಂತಹ ಮುಖ್ಯಮಂತ್ರಿಗಳು ಹೇಳಿದರು. ಇಲ್ಲಿ ಯಾರು ಸಚಿವ ಸಂಪುಟಕ್ಕೆ ಹಾಜರಾಗಲಿಲ್ಲ ಅವತ್ತು ಏನು ತೀರ್ಮಾನ ಆಯಿತು ಅಬಕಾರಿ ಇಲಾಖೆ ಬಗ್ಗೆ.

ಶ್ರೀ ನಜೀರ್ ಅಹ್ಮದ್(ಬಿನ್ನಿಪೇಟೆ):- ಕಂಪ್ಯೂಟರ್ ಹಗರಣದ ಬಗ್ಗೆ ರ್‍ಯಾಟಿಫಿಕೇಷನ್ ಸೆಕೆಂಡ್ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಆಗಿದೆ; ಅದರಲ್ಲಿ ಈಗಿನ ಮುಖ್ಯಮಂತ್ರಿಗಳು ಅವರ ಜೊತೆಯಲ್ಲಿದ್ದ ನಾಲ್ಕು ಜನ ಮಂತ್ರಿಗಳೂ ಪ್ರಸೆಂಟ್ ಆಗಿದ್ದರು.

ಪ್ರೊ ಎಂ.ಡಿ. ನಂಜುಂಡಸ್ವಾಮಿ:- ಆಗಬಹುದು ಅವರು ಮಂತ್ರಿಗಳಾಗಿದ್ದವರು. ಅವರು ಕರೆಕ್ಷನ್ ಮಾಡಿದ್ದಾರೆ ಅವರ ಕರೆಕ್ಷನ್ನನ್ನು ನಾನು ಒಪ್ಪುತ್ತೇನೆ ಈ ಅಬಕಾರಿಯದ್ದು ಸಹ ರ್‍ಯಾಟಿಫಿಕೇಷನ್ ಆಯಿತೋ ಏನೋ ತಿಳಿಸಿಬಿಟ್ಟರೆ ಆಯಿತು. ಸಚಿವ ಸಂಪುಟದ ಸಭೆಯಲ್ಲಿ ಯಾರು ಹಾಜರಿರಲಿಲ್ಲ ಆ ಸಚಿವರು ಯಾರೂ ಇಲ್ಲ ಅವರು ಇದ್ದಿದ್ದರೆ ಅವರು ಹೇಳಿಬಿಡುತ್ತಿದ್ದರು ರ್‍ಯಾಟಿಫೈ ಆಯಿತೋ ಇಲ್ಲವೋ ಎಂದು. ಈಗಲೂ ಕೂಡ ಅದೇ ಒಂದು ತಂತ್ರ ನಡೆಯುತ್ತಾ ಇದೆ ಎಂದು ನನಗೆ ಅನಿಸುತ್ತದೆ. ಯಾವಯಾವ ಮಂತ್ರಿಗಳು ಸಚಿವ ಸಂಪುಟದ ಸಭೆಯಲ್ಲಿ ಹಾಜರಿರಲಿಲ್ಲ, ನಾವು ಇದರಲ್ಲಿ ಭಾಗಿಗಳು ಅಲ್ಲ, ಹೊಣೆಗಾರರಲ್ಲ ಎನ್ನತಕ್ಕಂಥ ಒಂದು ಅವಕಾಶ ಇಟ್ಟುಕೊಳ್ಳತಕ್ಕಂಥ ಒಂದು ಕುತಂತ್ರವಿದೆಂದು ನನಗನಿಸುತ್ತದೆ. ಅದೇನೇ ಇರಲಿ, ಸಂಪುಟ ವ್ಯವಸ್ಥೆಯಲ್ಲಿ ಏನು ಜಂಟೀ ಜವಾಬ್ದಾರಿ ಅಂಶ ಇರಬೇಕು ಅದು ಇಲ್ಲದೆ ಹೋದ ಕೂಡಲೇ ರಾಜ್ಯಪಾಲರು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗಿತ್ತು ಈ ಸರ್ಕಾರವನ್ನು ವಜಾ ಮಾಡಬೇಕು ಅಂತ ಹೇಳಿ; ರಾಜ್ಯಪಾಲರು ಕರ್ತವ್ಯಲೋಪ ಮಾಡಿದ್ದಾರೆ ಅವರು ಮಾಡಬಾರದಿತ್ತು. ನಾನು ಮೊದಲೇ ಹೇಳಿದೆ, ಭ್ರಷ್ಟಾಚಾರದ ವಿವರಗಳನ್ನು ಈಗಾಗಲೇ ಹೇಳಿದ್ದಾರೆ ದೇಶಪಾಂಡೆಯವರು ಮತ್ತೆ ಇತರರು. ಆ ವಿವರಗಳ ಬಗ್ಗೆ ನಾನು ಮತ್ತೆ ಮಾತನಾಡುವುದಿಲ್ಲ ಆದರೆ ಭ್ರಷ್ಟಾಚಾರದ ಬಗ್ಗೆ ಹೊಂದಾಣಿಕೆ ಮಾಡಿಕೊಳ್ಳತಕ್ಕಂಥಾದ್ದರ ಬಗ್ಗೆ ನಾನು ಮಾತನಾಡಲೇ ಬೇಕು. ಕಳೆದ ವಿಧಾನಸಭೆ ನಡೆಯುವಾಗ

ಸುಪ್ರೀಂಕೋರ್ಟಿನ ಒಂದು ಆದೇಶ ಬಂತು. ತೀರ್ಪು ಬಂತು. ಅಷ್ಟು ಹೊತ್ತಿಗಾಗಲೇ ಈ ಸರ್ಕಾರ ಒಬ್ಬ ಮಾಜಿ ಮುಖ್ಯಮಂತ್ರಿ ಮೇಲೆ ತನಿಖೆಗೆ ಆಜ್ಞೆ ಮಾಡಿತ್ತು. ಆಗ ನಿಜಕ್ಕೂ ಸಂತೋಷಪಟ್ಟವನು ನಾನು; ಯಾವುದೇ ಒಬ್ಬ ಮಾಜಿ ಮುಖ್ಯಮಂತ್ರಿ ಭ್ರಷ್ಟಾಚಾರ ಆರೋಪದ ಮೇಲೆ ಆತನನ್ನು ತೆಗೆದ ಮೇಲೆ ತನಿಖೆ ಆಗಬೇಕು ಇದನ್ನು ಈ ಸರ್ಕಾರ ಮಾಡಿತು ಬಂಗಾರಪ್ಪನವರ ಮೇಲೆ; ನಾನು ಬಹಳ ಸಂತೋಷ ಪಟ್ಟೆ. ಆದರೆ ಮಾರ್ಚಿ 30ನೇ ತಾರೀಖು ಇನ್ನೊಬ್ಬ ಮಾಜಿ ಮುಖ್ಯಮಂತ್ರಿಗೆ ಸಂಬಂಧಪಟ್ಟ ಹಾಗೆ ಒಂದು ತೀರ್ಪು ಬಂತು. ರೇವಜೀತು ಹಗರಣದ ಬಗ್ಗೆ; ಆದರಲ್ಲಿ ಸುಪ್ರೀಂ ಕೋರ್ಟ್ ನೇರವಾಗಿ ಹೇಳಿದೆ,

" That it is an undisputed fact that the relative of Mr. Hegde along with 18 others were the share holder of the Builders firm that bought the land"

ಈ ಹತ್ತಿರದ ರಕ್ತಸಂಬಂಧ ಭ್ರಷ್ಟಾಚಾರಕ್ಕೆ ಕಾರಣ ಆಗಿದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದೆ. ಆದರೆ ನಾನು ಪ್ರಶ್ನೆ ಮಾಡುತ್ತಾ ಇರುವುದು ಈ ಸರ್ಕಾರಕ್ಕೆ ಏಕೆ ಆ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ? ಇವತ್ತು ಒತ್ತಾಯ ಮಾಡುತ್ತೇನೆ, ನಾನು ಪ್ರಜಾಪ್ರಭುತ್ವದ ಮೌಲ್ಯಗಳ ರಕ್ಷಣೆಗಾಗಿ ಮಾತ್ರ. ಇದನ್ನು ಮಾಡಬೇಕಾದ ಜವಾಬ್ದಾರಿ ನಿಮ್ಮ ಸರ್ಕಾರದ್ದು. ಈಗಲೂ ಏನೂ ತಡವಾಗಿಲ್ಲ ಈಗಲೂ ಮಾಡಬೇಕು ತಾವು. ಸಂವಿಧಾನದ ಮತ್ತೊಂದು ಮುಖ್ಯ ಅಂಶ, ನಮ್ಮ ಹಾಲಿ ಮುಖ್ಯಮಂತ್ರಿಗಳು ಪದೇಪದೇ ಕೊಟ್ಟಿದ್ದಾರೆ ಈ ಸದನದಲ್ಲಿ. At any cost this Government will Protect the rule of law in the State ಎಂದು ಬಹಳ ಸಾರಿ ಹೇಳಿದ್ದಾರೆ. ಕಳೆದ ಸದನದಲ್ಲಿ ನಾನು ಒಬ್ಬ ಹಾಲಿ ಮಂತ್ರಿ ಮತ್ತೊಬ್ಬ ಮಾಜಿ ಮಂತ್ರಿ ಬಗ್ಗೆ ಮಾತನಾಡುತ್ತಾ ರೂಲ್ ಆಫ್ ಲಾ ಎಲ್ಲಿ ಹೋಯಿತು ಎಂದು ಕೇಳಿದಾಗ ಹೇಳಿದರು ಮುಖ್ಯಮಂತ್ರಿಗಳು "At any cost this Government will protect the rule of law "ಎಂದು. ಕಳೆದ ಅಧಿವೇಶನವಾಗಿ ಎಷ್ಟು ದಿವಸಗಳು ಆಯಿತು? ಇನ್ನೂ ಹಾಲಿ ಮಂತ್ರಿಗೆ ರೂಲ್ ಆಫ್ ಲಾ ಅನ್ವಯವಾಗಿಲ್ಲ. ಮಾಜಿ ಮಂತ್ರಿಗೂ ರೂಲ್ ಆಫ್ ಲಾ ಅನ್ವಯವಾಗಿಲ್ಲ. ಹುಬ್ಬಳ್ಳಿಯ ಒಂದು ಬಹಳ ಅಮೂಲ್ಯವಾದಂಥ ನಿವೇಶನದ ಬಗ್ಗೆ ಸುಪ್ರೀಮ್ ಕೋರ್ಟ್‌ನ ತೀರ್ಪು ಕೂಡ ಅವರ ವಿರುದ್ಧ ಇದ್ದರೂ ಕೂಡ ಅಕ್ರಮವಾಗಿ ಈ ಹಾಲಿ ಮಂತ್ರಿ ಅಲ್ಲಿ ಯಾರು ನಿಜವಾಗಿ ಆದರ ಮಾಲೀಕರೋ ಅವರಿಗೆ ನಿವೇಶನವನ್ನು ಬಿಟ್ಟುಕೊಡದೇ ಕುಳಿತಿದ್ದಾರೆ. ಹಾಗೆಯೇ ಮಾಜಿ ಮಂತ್ರಿಗಳೂ ಕೂಡ. ಏನು ಅಂದಾಜು ಸಮಿತಿಯು ತನಿಖೆ ಮಾಡಬೇಕೆಂದು ಶಿಫಾರಸ್ಸು ಮಾಡಿತ್ತೋ, ಆ ಅಂದಾಜು ಸಮಿತಿಯ ಶಿಫಾರಸ್ಸುಗಳ ಮೇಲೆ ನ್ಯಾಯಾಲಯವು ಕೂಡ ತಡೆಯಾಜ್ಞೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಈ ಸರಕಾರಕ್ಕೆ ಗೊತ್ತಿಲ್ಲವೇನೋ? ಪ್ರಸಕ್ತ ಯಾವಯಾವ ವಿಷಯಗಳು ನ್ಯಾಯಾಲಯದಲ್ಲಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:-(ಹೊಳೆನರಸೀಪುರ):- ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪವಿದೆ. ಏನೆಂದರೆ, ಪ್ರೊ : ನಂಜುಂಡಸ್ವಾಮಿಯವರು ರೂಲ್ ಆಫ್ ಲಾ ಮೇಲೆ ವ್ಯಾಖ್ಯಾನ ಮಾಡುತ್ತಾ ಇದ್ದಾರೆ. ರೂಲ್ ಆಫ್ ಲಾ ಎಲ್ಲರಿಗೂ ಒಂದೇ ಇರುತ್ತದೆ. ನಂಜುಂಡ ಸ್ವಾಮಿಯವರಿಗೂ, ಪುಟ್ಟಸ್ವಾಮಿಗೌಡನಿಗೂ ಹಾಗೂ ಎಲ್ಲರಿಗೂ ಒಂದೇ ಆಗಿರುತ್ತದೆ. ನಾನು ಕೂಡ ಹಲವಾರು ಆಪಾದನೆಗಳನ್ನು ಅವರ ಮೇಲೆ ಮಾಡಿದಾಗ ತನಿಖೆಗೆ ನಾನು ಒಪ್ಪಿದ್ದೇನೆ ಎಂದು

ಹೇಳಿದ್ದರು. ಆದರೆ ಅವರ ಮೇಲೆ ತನಿಖೆಗೆ ಆಜ್ಞೆಯಾಗಲೇ ಇಲ್ಲ. ಮಾಜಿ ಮಂತ್ರಿಗಳ ಮೇಲೆ ತನಿಖೆ ಮಾಡಿಸಲಿಕ್ಕೆ ಪ್ರಯತ್ನ ಮಾಡಿದರು. ಅಂದಾಜು ಸಮಿತಿ ತನ್ನ ವರದಿಯನ್ನು ಕೊಟ್ಟಿದೆ. ಅದಕ್ಕೆ ತಡೆಯಾಜ್ಞೆಯನ್ನು ಕೊಡುವ ಅಧಿಕಾರ ಕೋರ್ಟ್‌ಗೂ ಕೂಡ ಇಲ್ಲ ಎಂದು ಅವರು ಹೇಳಿದರು. ಹಾಗೆಂದು ಹೇಳತಕ್ಕಂಥ ಈ ಆಗಸ್ಟ್ ಹೌಸ್‌ನಲ್ಲಿ ಯಾರಮೇಲಾದರೂ ಯಾವುದೇ ಒಂದು ಆಪಾದನೆ ಮಾಡತಕ್ಕಂಥ ಸಂದರ್ಭದಲ್ಲಿ ಸತ್ಯಕ್ಕೆ ದೂರವಾದಂಥ ಆಪಾದನೆಯನ್ನು ಮಾಡತಕ್ಕಂಥ ಒಂದು ದುಷ್ಕೃತ್ಯ ಈ ಸದನದ ಸದಸ್ಯರಿಗ್ಯಾರಿಗೂ ಗೌರವವನ್ನು ತರುವುದಿಲ್ಲ. ಅಂದಾಜು ಸಮಿತಿಯು ನನ್ನ ವಿರುದ್ಧವಾಗಿ ಇದುವರೆಗೂ ಯಾವುದೇ ವಿಧವಾದ ಶಿಫಾರಸ್ಸನ್ನು ಸದನಕ್ಕೆ ಮಂಡಿಸಿಲ್ಲ. ಇದಕ್ಕೆ ಅಧಿಕೃತವಾದಂಥ ಎಂಡಾರ್ಸ್‌ಮೆಂಟ್ ಒಂದನ್ನು ನಮ್ಮ ಸ್ಪೀಕರ್‌ರವರ ಆಫೀಸ್‌ನಿಂದಲೇ ಕೊಟ್ಟಿದ್ದಾರೆ. ಆದ್ದರಿಂದ ಇಂಥ ಒಂದು ಊಹಾಪೋಹಪೂರಿತವಾದಂಥ ಆಪವಾದವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿ ತನ್ನ ಒಂದು ಪ್ರಚಾರವನ್ನು ಗಿಟ್ಟಿಸಿಕೊಳ್ಳಲು ಹೋಗತಕ್ಕಂಥ ವಿಚಾರವು ಹೇಯ ಮತ್ತು ಖಂಡನೀಯವಾದುದು ಎಂದು ಹಿಂದೆಯೂ ಕೂಡ ಶಾಸನಸಭೆಯಲ್ಲಿ ಹೇಳಿದ್ದೇನೆ. ಇಂದೂ ಕೂಡ ಅದನ್ನೇ ಪುನರುಚ್ಚರಿಸುತ್ತೇನೆ. ರೂಲ್ ಆಫ್ ಲಾ ಒಬ್ಬರಿಗೇ ಅಪ್ಲೈ ಆಗಬೇಕೆಂದರೆ ಹೇಗೆ? ಅವರಿಗೂ ಏಕೆ ಅಪ್ಲೈ ಆಗಬಾರದು? ಹಲವಾರು ಗುರುತರವಾದ ಆಪಾದನೆಗಳನ್ನು ನಾನು ಈ ಸದನದಲ್ಲಿಯೇ ಒಪ್ಪಿಸಿದ್ದೇನೆ. ಅದನ್ನು ಸ್ವಾಗತ ಮಾಡಬೇಕಾಗಿತ್ತು. ಅದನ್ನು ಬಿಟ್ಟು ಇನ್ನೊಬ್ಬರನ್ನು ಕಾಮೆಂಟ್ ಮಾಡತಕ್ಕಂಥ ಈ ಸದಸ್ಯರು ತಮ್ಮ ಮೇಲಿರತಕ್ಕಂಥ ಆಪಾದನೆಗಳ ಬಗ್ಗೆ ತನಿಖೆಗೆ ಆಜ್ಞೆ ಮಾಡಿ ಎಂದು ಒತ್ತಾಯ ತರುತ್ತಾರೆ ಎಂಬ ಒಂದು ವಿಶ್ವಾಸವನ್ನು ನಾನು ಇಟ್ಟುಕೊಂಡಿದ್ದೇನೆ. ಅದನ್ನು ಬಿಟ್ಟು ಬೇರೆಯವರ ಮೇಲೆ ಆಪಾದನೆ ಮಾಡತಕ್ಕಂಥಾದ್ದು ಸರಿಯಾದುಲ್ಲ. ಅವರು ಅವಿಶ್ವಾಸ ಮಂಡನೆ ಮಾಡಿರತಕ್ಕಂಥಾದ್ದು ಈ ಸರಕಾರದ ವಿರುದ್ಧ ಅಥವಾ ಮೊಯಿಲಿಯವರ ಮಂತ್ರಿಮಂಡಳದ ವಿರುದ್ಧವಾಗಿದ್ದರೆ ಗುರುತರವಾದ ಆಪಾದನೆಗಳನ್ನು ಪುರಾವೆಗಳ ಸಮೇತವಾಗಿ ಮಾಡುವುದರ ಬದಲಾಗಿ ಏನೋ ತನ್ನ ಪ್ರಚಾರಕ್ಕಾಗಿ ಮಾಡುವ ವೈಖರಿಯ ಭಾಷಣವು ಸರಿಯಾದುದು ಅಲ್ಲ, ಇದಕ್ಕೆ ತಾವುಗಳು ನಿರ್ದೇಶನ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ(ಬೇತಮಂಗಲ):-ಮಾನ್ಯ ಅಧ್ಯಕ್ಷರೇ, ಈಗ ಪ್ರೊ. ನಂಜುಂಡ ಸ್ವಾಮಿಯವರು ಮಾತನಾಡಿದರು. ರೇವಜಿತು ಪ್ರಕರಣದಲ್ಲಿ ಹೇಗಡೇಜೀಯವರು ಶಾಮೀಲಾಗಿದ್ದರು ಎಂದು ಹೇಳಿದರು. ಅವರು ಪತ್ರಿಕೆಯಲ್ಲಿ ಏನು ಬಂದಿದೆ ಅದನ್ನು ನೋಡಿ ಮಾತಾನಾಡುತ್ತಿದ್ದಾರೇಯೇ ಹೊರತು ಜಡ್ಜ್‌ಮೆಂಟ್ ಕಾಪಿಯನ್ನು ನೋಡಿ ಮಾತನಾಡುತ್ತಿಲ್ಲ. ಪುಟ್ಟಸ್ವಾಮಿಗೌಡರು ಹೇಳಿದ್ದಕ್ಕೆ ನಾನು ಸ್ಪಂದಿಸುತ್ತೇನೆ, ಏಕೆಂದರೆ, ಪ್ರೊ. ನಂಜುಂಡಸ್ವಾಮಿಯವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಆದರೆ ಕ್ಷುಲ್ಲಕವಾದಂಥ ವಿಷಯಗಳ ಮೂಲಕ ಸದನದ ಗಮನ ಸೆಳೆದು ಅವರ ರೈತ ಸಂಘದ ಅಥವಾ ಅವರ ಬೆಳವಣಿಗೆಯನ್ನು ಮಾಡತಕ್ಕಂಥಾದ್ದು ಏನಿದೆ, ಇದನ್ನು ಖಂಡಿಸತಕ್ಕಂಥ ವಿಚಾರವಾಗಿದೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಬೆಳವಣಿಗೆ ಅಂದರೆ ಅದು ಯಾವುದೇ ಬೆಳವಣಿಗೆ ಇರಬಹುದು. ರಾಜಕೀಯ ಅಥವಾ ರಾಜಕೀಯೇತರ ಬೆಳವಣಿಗೆಗೆಯೂ ಇರಬಹುದು. ಅದು ನೈಸರ್ಗಿಕವಾಗಿ ಆಗುತ್ತಿದೆ. ಆ ನೈಸರ್ಗಿಕವಾಗಿ ಅದುವುಗಳು ಏನಾಗುತ್ತದೆ ಎಂಬುದನ್ನು ನಾವು ನೋಡಿದ್ದೇವೆ. ಆದರ ಬಗ್ಗೆ ನಾವೇನೂ ಹೆಚ್ಚಿಗೆ ಮಾತನಾಡಬೇಕಾಗಿಲ್ಲ. ಭ್ರಷ್ಟಾಚಾರ ಮಾಡಿದವರನ್ನು

ನಾನು ಟೀಕೆ ಮಾಡಿ ದೊಡ್ಡವನಾಗಬೇಕಾಗಿಲ್ಲ. ಭ್ರಷ್ಟಾಚಾರ ಬೆಳೆಯಬಾರದು ಎಂಬುದೇ ನನ್ನ ಆಸೆಯಾಗಿದೆ. ಇದು ಕೊನೆಯಾಗಬೇಕೆನ್ನುವುದೇ ನನ್ನ ಆಸೆಯಾಗಿದೆ. ನಾನು ಯಾವ ವ್ಯಕ್ತಿಯ ಮುಖ ನೋಡಿ ಮಾತನಾಡುತ್ತಾ ಇಲ್ಲ. ಯಾರ ಮೇಲೆಯೂ ವೈಯಕ್ತಿಕವಾಗಿ ದ್ವೇಷವೂ ಇಲ್ಲ. ಆದರೆ ನಾನು ಬದುಕುತ್ತಿರುವಂಥ ವಾತಾವರಣವು ಕಲುಷಿತವಾಗಿ ಇರಬಾರದು. ನಾನು ಸಂತೋಷವಾಗಿ ಬದುಕ ಬೇಕಾದರೆ. ಅಷ್ಟೇ ನನ್ನ ಆಸೆ ಮತ್ತೇನಲ್ಲ. ನಿಮ್ಮ ವ್ಯಕ್ತಿತ್ವವನ್ನು ಶುಚಿಯಾಗಿ ಮಾರ್ಪಾಟು ಮಾಡಿಕೊಂಡರೆ ಕರ್ನಾಟಕದ ವಾತಾವರಣ ಇನ್ನೂ ಸಂತೋಷದಾಯಕವಾಗಿರುತ್ತದೆ. ಇನ್ನೂ ನಾವೆಲ್ಲರೂ ಸಂತೋಷವಾಗಿ ಬದುಕಬಹುದು ಎಂಬ ಉದ್ದೇಶದಿಂದ....

ಶ್ರೀ ಜಿ. ಪುಟ್ಟಸ್ವಾಮಿಗೌಡ: ಸಾರ್, ಇವರು ಹೇಳೋದೆಲ್ಲಾ ವೇದ; ಹಾಕೋದೆಲ್ಲಾ ಗಾಣ. ಇವರು ಭ್ರಷ್ಟಾಚಾರದ ಬಗ್ಗೆ ಮಾತನಾಡುವವರು ಇವರ ಪಕ್ಷದಲ್ಲಿ ಇವರ ವಿರುದ್ಧ ಏನೇನು ಭ್ರಷ್ಟಾಚಾರದ ಆಪಾದನೆಗಳಿವೆ ಅದರ, ತನಿಖೆಗೆ ಒಳಪಡುತ್ತಾರಾ ಕೇಳಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ನಾನು ಯಾರ ಹೆಸರೂ ಹೇಳಲಿಲ್ಲ. ಸುಮ್ಮನೆ ಮಾಜಿ ಸಚಿವರು ಅಂದೆ ಅಷ್ಟೆ. ಇಲ್ಲಿ ಬಹಳ ಮಾಜಿ ಸಚಿವರಿದ್ದಾರೆ, ಬಹಳ ಮಾಜಿ ಸಚಿವರ ಮೇಲೆ ಆರೋಪ ಇದೆ. ನಾನು ಹೇಳುತ್ತಿದ್ದೆ, ಹೈಕೋರ್ಟ್ ಏನು ಹೇಳಿದೆ ಅನ್ನುವುದನ್ನು ಓದಿ ಬಿಡ್ತೀನಿ. ನನಗೆ ಗೊತ್ತು ಯಾವ ವಿಷಯ ಸಬ್‌ಜ್ಯುಡೀಸ್ ಇದೆ, ಆ ವಿಷಯದ ಬಗ್ಗೆ ಸಿಓಡಿ ತನಿಖೇನೂ ಆಗೋಕೆ ಆಗುವುದಿಲ್ಲ. ಬೇರೆ ಯಾವ ತನಿಖೇನೂ ಆಗುವುದಕ್ಕೆ ಆಗುವುದಿಲ್ಲ. ಇದು ಪ್ರಾಥಮಿಕವಾದ ವಿಷಯಗಳು. ಇದನ್ನೇನೂ ಚರ್ಚೆ ಮಾಡಬೇಕಾಗಿಲ್ಲ. But, it does not mean that the High Court can stay or the Supreme Court can stay or any judiciary can stay the enquiry on matters which are not subjudice. ಅದನ್ನೇ ಹೈಕೋರ್ಟ್ ಹೇಳಿರೋದು: 'The Chief Minister has ignored the principle of subjudice in the matter on hand. The Hon. Chief Minister under whom the COD functions as a department and is subordinate to him has, by this enquiry, interfered in the administration of justice.'

ಅದರ ಮೇಲೆ ಮಾಡಿ ಅಂತ ಯಾರೂ ಹೇಳಲಿಲ್ಲ. ಈ ಸದನದ ಸಮಿತಿ ಯಾವ್ಯಾವ ವಿಷಯದ ಮೇಲೆ ತನಿಖೆ ಮಾಡಬೇಕೆಂದು ಶಿಫಾರಸ್ ಮಾಡಿ ವರದಿಯನ್ನು ಈ ಸದನದಲ್ಲಿ ಮಂಡಿಸಿದೆ, ಅದರ ಮೇಲೆ ಏನು ತನಿಖೆ ನಡೆಯುತ್ತಾ ಇದೆ ಅದನ್ನು ಯಾವ ನ್ಯಾಯಾಲಯವೂ ತಡೆಯಲಿಕ್ಕೆ ಸಾಧ್ಯವಿಲ್ಲ. ಅದು ಮುಂದುವರೆಯಲೇಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ: ಅಧ್ಯಕ್ಷರೇ, ಸದನದ ಸಮಿತಿ ಯಾವುದೇ ವರದಿ ಕೊಟ್ಟಿಲ್ಲ ಅಂತ ಅಧಿಕೃತ ಎಂಡಾರ್ಸ್‌ಮೆಂಟನ್ನು ನಾವು ಕೋರ್ಟಿಗೆ ಕೂಡ ಸಲ್ಲಿಸಿದ್ದೇವೆ. ಆದರೂ ಕೂಡ ವರದಿ ಕೊಟ್ಟಿದೆ ಎಂದು ಹೇಳುವ ಈ ಸದಸ್ಯರಿಗೆ ಏನು ಹೇಳಬೇಕು ಹೇಳಿ?

ಪ್ರೊ ಎಂ.ಡಿ. ನಂಜುಂಡಸ್ವಾಮಿ: ವರದಿ ಕೊಟ್ಟಿರುವ ವಿಷಯದ ಬಗ್ಗೆ ಮಾತ್ರ ನಾನು ಮಾತನಾಡುತ್ತಿದ್ದೇನೆ. ವರದಿಯಲ್ಲಿ ಏನೇನು ವಿಷಯ ಪಟ್ಟಿಯಾಗಿದೆ ಈ ಸದನದ ಸಮಿತಿ ಏನು ಶಿಫಾರಸ್ ಮಾಡಿದೆ ಅದರ ಮೇಲೆ ತನಿಖೆಯಾಗಬೇಕು ಎಂದು ಮಾತ್ರ ನಾನು ಹೇಳುತ್ತಿದ್ದೇನೆ. ಸಮಿತಿ ಶಿಫಾರಸ್ಸು ಮಾಡದೇ ಇರುವ ವಿಚಾರದ ಮೇಲೆ ತನಿಖೆ ಮಾಡಿ ಎಂದು ಹೇಳುವಷ್ಟು ಅವಿವೇಕಿ ನಾನಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ: ಸ್ವಾಮಿ ಇದರ ಬಗ್ಗೆ ಹಕ್ಕುಚ್ಯುತಿ ಕೂಡ ಕೊಟ್ಟಿದ್ದೇವೆ. ಈ ಸದನಕ್ಕೆ ಸುಳ್ಳು ಹೇಳಿದ್ದಾರೆ ಎಂದು ಹೇಳಿದ್ದೇವೆ, ತಪ್ಪು ಮಾಹಿತಿಗಳನ್ನು ಕೊಡುತ್ತಾ ಇದ್ದಾರೆ ಎಂದು ಹೇಳಿದ್ದೇವೆ. ಮೇಲಿಂದ ಮೇಲೆ ಸತ್ಯ ಸಾಬೀತು ಮಾಡುವುದಕ್ಕಾಗಿ ನಾನು ಮಾಡುತ್ತಾ ಇದ್ದೇನೆ ಎಂದು ಏಕೆ ಹೇಳಬೇಕು? ಒಂದು ಕಡೆ ಇದು ಫುಲ್‌ಸ್ಕ್ಯಾಪ್ ಆಗಬೇಕು. ನಮ್ಮ ರಕ್ಷಣೆಗೆ ತಾವು ಬರಬೇಕು. ನಮ್ಮ ವಿರುದ್ಧ ಇಲ್ಲದ್ದನ್ನೆಲ್ಲಾ ಆಪಾದನೆ ಮಾಡುತ್ತಾರೆ ಎಂದು ಹೇಳುತ್ತಿರುವಾಗ ನೀವು ಅಧ್ಯಕ್ಷರಾಗಿ ಸುಮ್ಮನೆ ಕುಳಿತರೆ ಹೇಗೆ? ನನ್ನ ಆಸ್ತಿ ಬಗ್ಗೆ ತನಿಖೆ ಮಾಡುವಂತಹ ಹಕ್ಕಿಲ್ಲ; ಸಮಿತಿ ವರದಿಯನ್ನು ಕೊಟ್ಟಿಲ್ಲ. ಆದರೂ ಸಮಿತಿ ವರದಿ ಕೊಟ್ಟರೆ ಎಂದು ಚರ್ಚೆಗೆ ಅವಕಾಶ ಕೊಡುವುದಾದರೆ ನಮ್ಮ ರಕ್ಷಣೆಗೆ ಯಾರು ಸ್ವಾಮಿ ಬರಬೇಕು? ಈ ಸದನದ ಸಾರ್ವಭೌಮತ್ವದ ಅಧ್ಯಕ್ಷ ಪೀಠ ನಿಮ್ಮದು; ನೀವು ನಮ್ಮ ರಕ್ಷಣೆ ಮಾಡಬೇಕಾದವರು; ಅವರು ಇಂದು ಪ್ರಚಾರ ಗಿಟ್ಟಿಸಿಕೊಳ್ಳೋಕೆ ದೇಶದ ಜನತೆಗೆಲ್ಲಾ ಸುಳ್ಳು ಹೇಳತಕ್ಕಂಥ ಪ್ರವೃತ್ತಿಗೆ ತಾವು ಅವಕಾಶ ಕೊಡಕೂಡದು ಎಂದು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಪ್ರೊ ಎಂ.ಡಿ. ನಂಜುಂಡಸ್ವಾಮಿ: ಅಧ್ಯಕ್ಷರೇ, ಅಂದಾಜು ಸಮಿತಿಗೆ ಯಾರದೇ ಆಸ್ತಿ ತನಿಖೆ ಮಾಡುವುದಕ್ಕೆ ಹಕ್ಕಿದೆ ಎಂದು ನಾನು ಹೇಳಲಿಲ್ಲ. ಆದರೆ ಯಾರೇ ಒಬ್ಬರು ಅಧಿಕಾರದಲ್ಲಿದ್ದು ಅಧಿಕಾರ ದುರುಪಯೋಗ ಮಾಡಿಕೊಂಡು ಅಕ್ರಮ ಆಸ್ತಿ ಮಾಡಿದ್ದರೆ ಆ ಅಧಿಕಾರದ ದುರುಪಯೋಗವನ್ನು ಈ ಸದನದ ಗಮನಕ್ಕೆ ತರುವಂತಹುದು ನಮ್ಮ ಕರ್ತವ್ಯ. ಈ ಸದನದ ಅಂದಾಜು ಸಮಿತಿ ಇದೆ. ಯಾವನೇ ಒಬ್ಬ ಸಚಿವ ಸಚಿವಸ್ಥಾನದಲ್ಲಿದ್ದುಕೊಂಡು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿದರೆ ಅವರಿಗೂ ರೂಲ್ ಆಫ್ ಲಾ ಅನ್ವಯಿಸಬೇಕು ಎಂದು ಒತ್ತಾಯ ಮಾಡುವುದಕ್ಕೆ ನಾನು ಎದ್ದಿರುವುದು. ಯಾವುದೇ ಒಬ್ಬ ಸಚಿವ ಅಧಿಕಾರದಲ್ಲಿದ್ದುಕೊಂಡು ಕೆರೆ ಅಂಗಳವನ್ನು ಒತ್ತುವರಿ ಮಾಡಿದರೆ ತನಿಖೆ ಮಾಡಬೇಕೋ ಬೇಡವೋ? ಯಾವುದೇ ಒಬ್ಬ ಸಚಿವ ಸರ್ಕಾರಿ ನೀರಾವರಿಯ ವ್ಯವಸ್ಥೆಯ ದಿಕ್ಕನ್ನು ಬದಲಾಯಿಸಿ ನೀರು ದುರುಪಯೋಗ ಮಾಡುವಂತಹ ಕೆಲಸ ಮಾಡಿದರೆ ತನಿಖೆ ಮಾಡಬೇಕೋ ಬೇಡವೋ? ನದಿ ಪಾತ್ರ ಅಂತ ನನಗೆ ಚುಚ್ಚುತ್ತಾ ಇದ್ದಾರೆ ಬೈರೇಗೌಡರು; ಅವರಿಗೂ ಗೊತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ: ಅಧ್ಯಕ್ಷರೇ, ಸಚಿವನಾಗಿ ನಾನು ಕೆರೆ ಒತ್ತಿಸಿದ್ದೇನೆ, ಹೊಳೆ ತಿರುಗಿಸಿದ್ದೇನೆ ಅನ್ನುವ ಮಾತು ಎಷ್ಟರಮಟ್ಟಿಗೆ ಸತ್ಯವಿದೆ ಲೆಕ್ಕಹಾಕಿ;

ಪ್ರೊ ಎಂ.ಡಿ. ನಂಜುಂಡಸ್ವಾಮಿ: ನಾನು ಯಾರ ಹೆಸರನ್ನೂ ಹೇಳುತ್ತಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ: ಏಕೆ ಹೇಳಲಿಕ್ಕೆ ಹೋಗಬೇಕು ಇವರು ಇದನ್ನು ? ನನ್ನ ವೈಯಕ್ತಿಕವಾಗಿ ಹೇಳಲಿಕ್ಕೆ ಹಕ್ಕೇನಿದೆ ಇವರಿಗೆ? ಹಾಗಿದ್ದರೆ ಲೋಕಾಯುಕ್ತಕ್ಕೆ ಹಾರಿ ತನಿಖೆ ಮಾಡಿಸಲಿ ನನ್ನ ವಿರುದ್ಧ. ಲಾ ಆಫ್ ದಿ ಲ್ಯಾಂಡ್ ಇದೆ; ಅಲ್ಲಿ ಹೋಗಿ ಇವರು ಸಾಬೀತು ಮಾಡಿದರೆ ಇವರ ಪ್ರಾಮಾಣಿಕತೆ ಪ್ರದರ್ಶನ ಆಗುತ್ತದೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಪುಟ್ಟಸ್ವಾಮಿಗೌಡರೇ, ನೀವ್ಯಾಕೆ ಇಷ್ಟು ಹಚ್ಚಿಕೊಳ್ಳುತ್ತಿದ್ದೀರಿ? ನಿಮ್ಮ ಹೆಸರು ಹಿಡಿದು ಅವರು ಮಾತಾಡಿದ್ದರೆ, ನಾನೇ ಹೇಳುತ್ತಿದ್ದೆ ಅವರಿಗೆ. ಯಾವುದೇ ಒಬ್ಬ ಸಚಿವ ಎಂದು ಹೇಳ್ತಿದ್ದಾರೆ. ಅಧ್ಯಕ್ಷರೇ, ಅವರು ಯಾರ ಹೆಸರನ್ನು ಹಿಡಿದೂ ಹೇಳುತ್ತಿಲ್ಲ; ವರದಿಯಲ್ಲಿರುವುದರ ಬಗ್ಗೆ ಹಾಗೂ ರೂಲ್ ಆಫ್ ಲಾ ಅನ್ನುವುದರ ಬಗ್ಗೆ ಹೇಳ್ತಿದ್ದಾರೆ.

ಪುಟ್ಟಸ್ವಾಮಿಗೌಡರು ತಲೆಗಟ್ಟಿಯಾಗಿದೆ ಎಂದು ಕಲ್ಲಿಗೇಕೆ ಹೊಡೆದುಕೊಳ್ಳೋಕೆ ಹೋಗ್ತಿದ್ದಾರೋ ನನಗಂತೂ ಆಶ್ಚರ್ಯವಾಗುತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ: ನಿಮ್ಮದೆಲ್ಲಾ ಪಿತೂರಿಯ ಒಂದು ಕೂಟ. ನೀವೆಲ್ಲಾ ಸೇರಿ ಮಾಡುತ್ತಿದ್ದೀರಿ. ಇನ್ನು ಯಾರ್‍ಯಾರು ಇದ್ದಾರೆಂದು ಹೆಸರು ಹೇಳುತ್ತೇನೆ ನಾನು. ಅಂದಾಜು ಸಮಿತಿಗೆ ಪುಟ್ಟಸ್ವಾಮಿಗೌಡರ ಆಸ್ತಿಯನ್ನು ತನಿಖೆ ಮಾಡಿ ಎಂದು ಹೇಳುವ ಹಕ್ಕು ಇದೆಯೇ ಎಂಬುದನ್ನು ನೀವು ಆಲೋಚನೆ ಮಾಡಿ ಹೇಳಿ.

ಶ್ರೀ ಸಿ. ಬೈರೇಗೌಡ:- ನನ್ನ ಮನವಿ ಏನೆಂದರೆ, ಮಾನ್ಯ ಪುಟ್ಟಸ್ವಾಮಿಗೌಡರು ಚೆನ್ನಾಗಿರಬೇಕು, ಅವರ ತಲೆ ಕೂಡ ಚೆನ್ನಾಗಿರಬೇಕು, ಅವರು ವೃಥಾ ಕಲ್ಲಿಗೆ ಹೋಗಿ ಹೊಡೆದುಕೊಳ್ಳೋದು ಬೇಡ ಅನ್ನುವುದಷ್ಟೇ ನನ್ನ ಮನವಿ ಅವರಲ್ಲಿ.

ಪ್ರೊ ಎಂ. ಡಿ. ನಂಜುಂಡಸ್ವಾಮಿ: ಅಧ್ಯಕ್ಷರೇ, ನಾನು ಕೇವಲ ರೂಲ್ ಆಫ್ ಲಾ ಬಗ್ಗೆ ಮಾತನಾಡುತ್ತಿದ್ದೇನೆ. ಇದಕ್ಕೆ ಇಷ್ಟೊಂದು ಮಧ್ಯೆ ಅಡ್ಡಮಾಡಿದರೆ ಇದರಲ್ಲೇನೂ ಅರ್ಥ ಕಾಣುತ್ತಿಲ್ಲ. ರೂಲ್ ಆಫ್ ಲಾ ಕರ್ನಾಟಕದಲ್ಲಿ ಇರಬೇಕೋ ಬೇಡವೋ ಹೇಳಿ. ನನ್ನ ಸ್ವಾರ್ಥಕ್ಕೋಸ್ಕರ ನಾನು ಮಾತನಾಡುತ್ತಿದ್ದೇನೆ. ಏಕೆಂದರೆ ನಾನು ಬದುಕಿರುವ ವಾತಾವರಣ ಆರೋಗ್ಯಕರವಾಗಿರಬೇಕೆಂಬುದಷ್ಟೇ ನನ್ನ ಆಸೆ. ಅಷ್ಟೇ ನನ್ನ ರಾಜಕಾರಣ ಕೂಡ. ಇನ್ನೇನೂ ಸ್ವಾರ್ಥವಿಲ್ಲ. ಮತ್ತು ಯಾತಕ್ಕೂ ನಾನು ಕೆಲಸ ಮಾಡುತ್ತಿಲ್ಲ. ಇವರೆಲ್ಲಾ ಎಷ್ಟು ದಿವಸ ಇರುತ್ತಾರೆ? ಹೆಗಡೆಯವರಾಗಲಿ, ಪುಟ್ಟಸ್ವಾಮಿಗೌಡರಾಗಲಿ ಎಷ್ಟು ದಿವಸ ಇರುತ್ತಾರೆ? Temporary creatures,they come and go. ಆದರೆ ನಮ್ಮ ಸಮಾಜದ ವಾತಾವರಣ ದೇಶದ ವಾತಾವರಣ ಇದು ನಮಗಿಂತ ಶಾಶ್ವತ. ಇದು ಆರೋಗ್ಯಕರವಾಗಿರಬೇಕು ಅಂತ ಅಷ್ಟ; ಅವರನ್ನು ಕಂಡರೆ ನನಗೇನೂ ದ್ವೇಷವಿಲ್ಲ. ಅವರು ಇತ್ತೀಚಿಗಷ್ಟೆ ನನಗೆ ಪರಿಚಯವಾಗಿದ್ದು.

ಶ್ರೀ ಗೋಪಾಲ ಮುಕುಂದ ಕಾನಡೆ:ಅಧ್ಯಕ್ಷರೇ, ಅವರು ರೂಲ್ ಆಫ್ ಲಾ ಅದೂ ಇದೂ ಎಂದು ಬಹಳ ಹೇಳ್ತಾರೆ. ಕೆಇಬಿ ಅಧಿಕಾರಿಗಳನ್ನು ಒಳಗಿಟ್ಟು ಹೊರಗಡೆ ಬಾಗಿಲಿಗೆ ಬೀಗ ಹಾಕಿಬರ್ತಾರಲ್ಲಾ, ಆ ರೂಲು ರೈತಸಂಘದ್ದು? ಅಧಿಕಾರಿಗಳಿಗೆ ಬಹಿಷ್ಕಾರ ಹಾಕಿ ಬೋರ್ಡ್ ಹಾಕುವುದು ರೂಲ್ ಆಫ್ ಲಾ. ನಿಮ್ಮ ಬಟ್ಟಲಲ್ಲೇ ದೊಡ್ಡ ಎಮ್ಮೇ ಮಲಗಿದೆ, ಇನ್ನೊಬ್ಬರ ಮಡಲಿನಲ್ಲಿ ನೊಣ ಇದೆ ಅಂತ ಹೇಳ್ತೀರಲ್ಲಾ.

ಪ್ರೊ ಎಂ.ಡಿ. ನಂಜುಂಡಸ್ವಾಮಿ: ಕಾನಡೆಯವರಿಗೆ ರೂಲ್ ಆಫ್ ಲಾ ಬಗ್ಗೆ ಈಗ ಒಂದು ಪಾಠಾನೇ ಶುರುಮಾಡಬೇಕು ನಾನು. ತಾವು ಹೇಳಿದ್ದು ನಿಜ; ಕೆಇಬಿ ಅಧಿಕಾರಿಗಳಿಗೆ ಅವರನ್ನು ಕೋಣೆಯಲ್ಲಿ ಕೂಡಿಹಾಕಿ ಬೀಗ ಹಾಕುತ್ತೇವೆ ಹೌದು. ಬೋರ್ಡ್ ಹಾಕಿದ್ದೇವೆ; ಭ್ರಷ್ಟ ಅಧಿಕಾರಿಗಳಿಗೆ ಪ್ರವೇಶ ಊರೊಳಗಿಲ್ಲ ಎಂದು ಹೌದು, ಅಂತಹ ಅಧಿಕಾರಗಳನ್ನು ಬಾರುಕೋಲಲ್ಲಿ ಹೊಡೆದು ಮರಕ್ಕೆ ಕಟ್ಟಿಹಾಕಿದ್ದೇವೆ. ಇದೇ ನಮ್ಮ ರೂಲ್ ಆಫ್ ಲಾ. ಒಂದು ಕನೆಕ್ಷನ್ ಕೊಡುವುದಕ್ಕೆ 4 ಸಾವಿರ ರೂ. ಲಂಚ ಕೊಡಬೇಕೆಂದು ಕೆಇಬಿಯ ಆಸಿಸ್ಟೆಂಟ್ ಇಂಜಿನಿಯರ್ ಹೇಳುತ್ತಾ ಇದ್ದರೆ ನಾವೇನು ಮಾಡಬೇಕು?

ಒಬ್ಬ ಮಾನ್ಯ ಸದಸ್ಯರು:- ಲೋಕಾಯುಕ್ತ ಇದೆಯೆಲ್ಲಾ.

ಪ್ರೊ :ಎಂ.ಡಿ. ನಂಜುಂಡಸ್ವಾಮಿ:- ಲೋಕಾಯುಕ್ತ ನನ್ನ ಬಾರುಕೋಲಲ್ಲಿ ಇದೆ. ಬಾರು ಕೋಲೇ symbol of rule of law now in India. When all other machineries have failed, the people have no other alternative except to take the constitution itself into our own hands when elected representatives are defying it.

ವಿದ್ಯುಚ್ಛಕ್ತಿ ಸಚಿವರು ಬಂದಿದ್ದಾರೆ. ಕಾನೂನು ಪಂಡಿತರು ನನಗೆ ಹೇಳಬೇಕು, ಏನಾದರೂ ಆಲ್ಟರ್‌ನೇಟಿವ್ ಉಂಟಾ ನಮಗೆ. ಸಚಿವರಾಗಿರುವವರೇ ನನಗೆ ಬೆಂಗಳೂರು ನಗರದಲ್ಲಿ ಯಾವುದೇ ನಿವೇಶನ ಇಲ್ಲ ಎಂದು ಹೇಳಿ ಬಿಡಿಎ ಗೆ ಸುಳ್ಳು ಪ್ರಮಾಣಪತ್ರಿಕೆ ಕೊಟ್ಟು ಒಂದು ಸೈಟನ್ನು ಪಡೆದರೆ ತನಿಖೆಯಾಗಬೇಕೊ ಬೇಡವೋ? ಇದು ರೂಲ್ ಆಫ್ ಲಾ ಅಲ್ಲವೇ? ಆಗಿಲ್ಲ ಎಂದು ಹೇಳಿದರೆ ಹೇಗೆ?ನಾನು ಇದರ ಬಗ್ಗೆ ಮುಂದುವರಿಯುತ್ತೇನೆ, ಮುಂದುವರಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಶಾಸಕಾಂಗ ಪಕ್ಷದ ಸದಸ್ಯರಿಗೆ ಹಾಗೂ ನಿಮಗೆ ಕೊಟ್ಟಿಲ್ಲವೇ? ನೀವು ಹೇಗೆ ತೆಗೆದುಕೊಂಡಿದ್ದೀರಿ ಬಿಡಿಎ ಮೂಲಕ ಶಾಸಕರ ಗೃಹನಿರ್ಮಾಣ ಮಂಡಲಿಯಿಂದ? ನಿಮ್ಮ ಹಾಗೆ ಎಲ್ಲಾ ಸದಸ್ಯರುಗಳೂ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಏತಕ್ಕೆ ಟೀಕೆ ಮಾಡುತ್ತೀರಿ? ಹಾಗಿದ್ದರೆ ನಿಮ್ಮದೂ ತನಿಖೆಗೆ ಒಳಪಡಿಸಿ. ನಿಮ್ಮದು ಏತಕ್ಕೆ ಮಾಡುವುದಿಲ್ಲ?

ಪ್ರೊ. : ಎಂ.ಡಿ. ನಂಜುಂಡಸ್ವಾಮಿ:- ನಾನು ಯಾರ ಹೆಸರೂ ಹೇಳಲಿಲ್ಲ. ನಾನು ಬರೀ ರೂಲ್ ಆಫ್ ಲಾ ಬಗ್ಗೆ ಮಾತನಾಡುತ್ತಿದ್ದೇನೆ. ನಾನು ಯಾರ ಹೆಸರನ್ನೂ ಹೇಳಲಿಲ್ಲ. ನಾನು ಹೆಚ್ಚಿಗೆ ಕಾಲ ತೆಗೆದುಕೊಳ್ಳುವುದಿಲ್ಲ ಸಭಾಧ್ಯಕ್ಷರೇ. ನಾನು ಹೇಳುವುದಕ್ಕೆ ಎದ್ದಿದ್ದು ಎರಡು ಎರಡೇ ವಿಷಯಗಳ ಬಗ್ಗೆ ಒಂದು ಸಂವಿಧಾನದಲ್ಲಿರಬೇಕಾದಂಥ ಆರ್ಟಿಕಲ್ 164 ಕ್ಲಾಸ್ 2 ಅದರ ಪ್ರಕಾರ ಜಂಟಿ ಜವಾಬ್ದಾರಿ ವ್ಯವಸ್ಥೆ ಏನು ಇರಬೇಕೋ ಅದು ಇಲ್ಲ ನಮ್ಮ ರಾಜ್ಯದಲ್ಲಿ ಬಹಳ ಕಾಲದಿಂದ. ಆ ಕಾರಣ Constitutional machinery has itself failed in the State ಆ ಕಾರಣ ಈ ಸರ್ಕಾರ ವಿಸರ್ಜನೆ ಆಗಬೇಕು. ಇದು ಸಂವಿಧಾನ ಹೇಳುವಂಥ ಮಾತು, ನಾನು ಹೇಳುತ್ತಿರುವುದಲ್ಲ. ಮತ್ತೊಂದುವಿಷಯ ನಾನು ಹೇಳುವುದಕ್ಕೆ ಇಚ್ಛೆಪಟ್ಟಿದ್ದು there is no rule of law in the State. ಆ ಕಾರಣಕ್ಕೂ ಈ ಸರ್ಕಾರ ಒಂದು ನಿಮಿಷ ಉಳಿಯಬಾರದು. ಅಷ್ಟೇ ಸಭಾಧ್ಯಕ್ಷರೇ. ನಮಸ್ಕಾರ.

(ಮಾನ್ಯ ಅಧ್ಯಕ್ಷರು ಶ್ರೀ ವಿ.ಎಸ್. ಕೌಜಲಗಿ)ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ರಾಮಕೃಷ್ಣಹೆಗಡೆ(ಬಸವನಗುಡಿ):- ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರು ಮತ್ತು ಇನ್ನಿತರ ಸದಸ್ಯರು ಈ ಸಭೆಯ ಮುಂದೆ ತಂದ ಸರ್ಕಾರದ ಮೇಲಿನ ಅವಿಶ್ವಾಸ ಗೊತ್ತುವಳಿ ಚರ್ಚೆಯಲ್ಲಿ ನಾನು ಮಾತನಾಡಬೇಕೊ ಬೇಡವೋ ಎನ್ನುವ ವಿಚಾರ ನಿನ್ನೆಯಿಂದ ನನ್ನ ತಲೆಯಲ್ಲಿ ಬಂತು. ಇದರಲ್ಲಿ ಭಾಗವಹಿಸಿದರೆ ಯಾವ ಪ್ರಯೋಜನವೂ ನನಗಂತೂ ಕಾಣುತ್ತಿಲ್ಲ. ಅಷ್ಟೇಕೆ, ಈ ಅವಿಶ್ವಾಸ ಗೊತ್ತುವಳಿ ತಂದಿರತಕ್ಕಂಥದ್ದು ಕೂಡ ಒಂದು ವ್ಯರ್ಥ ಕಸರತ್ತು ಎಂದು ನಾನು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದರೆ ಒಂದೇ ಒಂದು ದೂರದ ಆಸೆ ವಿರೋಧಿಪಕ್ಷಕ್ಕೆ ಇತ್ತು ಎಂದು ಕಾಣುತ್ತದೆ. ಇಂಥ ಅವಿಶ್ವಾಸ ಗೊತ್ತುವಳಿಯನ್ನು ಆಳುವ ಪಕ್ಷದ ಭಿನ್ನಮತೀಯರು ತಾವಾಗಿಯೇ ತರತಕ್ಕಂಥದ್ದು ಸಾಧ್ಯವಿಲ್ಲದೇ ಇದ್ದುದರಿಂದ ಸರ್ಕಾರದ ವಿರುದ್ಧ ವಿರೋಧಿಪಕ್ಷದವರು ತಂದಾಗ ಅದಕ್ಕೆ ಅವರು

ಬೆಂಬಲ ಕೊಡಬಹುದು ಎನ್ನತಕ್ಕಂಥದ್ದೇ ಆ ದೂರದ ಆಸೆ ಎಂದು ನನಗನಿಸುತ್ತದೆ. ಆ ವಿಚಾರವನ್ನು ನಿನ್ನೆ ಮಾನ್ಯ ದೇಶಪಾಂಡೆಯವರು ಕೂಡ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದರು.

4.55 ಪಿ.ಎಂ.

(ಗೊಂದಲ)

ಶ್ರೀ ರಾಮಕೃಷ್ಣಹೆಗಡೆ:- ನಿಮ್ಮ ಪಕ್ಷದಲ್ಲೇ ನೀವು ತರುವುದಿಲ್ಲ, ಇಲ್ಲಿ ಹೇಗೆ ತರುತ್ತೀರಿ? ಪಕ್ಷದಲ್ಲಿ ತರುವುದಕ್ಕೇ ನಿಮಗೆ ಧೈರ್ಯ ಇಲ್ಲ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ: ತಾವು ವಿಶ್ವಾಸ ಗೊತ್ತುವಳಿ ತಂದಿದ್ದೀರಿ!

ಶ್ರೀ ರಾಮಕೃಷ್ಣಹೆಗಡೆ: ನಿನ್ನೆಯಿಂದ ನಡೆದಂತಹ ಚರ್ಚೆಯಲ್ಲಿ ಅನೇಕ ವಿಷಯಗಳು ಪ್ರಸ್ತಾಪಿತವಾದವು. ನಾನು ಕೊನೆಗೆ ನಿರ್ಧಾರ ಮಾಡಿದೆ. ಈ ಪ್ರಸ್ತಾಪದ ಮೇಲೆ ನಾಲ್ಕು ಮಾತನ್ನು ಆಡಬೇಕು ಎಂದು ಹೇಳುವುದಕ್ಕೆ ಒಂದೇ ಒಂದು ಕಾರಣ. ಅದು ಏನೆಂದರೆ ನನ್ನ ಮೇಲೆ ಒಂದು ಆರೋಪ ಅಥವಾ ಆಪಾದನೆ ಮಾಜಿ ಮುಖ್ಯಮಂತ್ರಿಗಳಾದಂತಹ ಮಾನ್ಯ ಬಂಗಾರಪ್ಪನವರು ಹಿಂದಿನ ಅಧಿವೇಶನದಲ್ಲಿ ತಮ್ಮ ಭಾಷಣದಲ್ಲಿ ಮಾಡಿದ್ದರು. ಅದಕ್ಕೆ ಉತ್ತರ ಕೊಡಬೇಕು ಎಂದು ನನಗೆ ಅನಿಸಿತು, ಅಷ್ಟೇ ಅಲ್ಲ, ಭಿನ್ನಮತೀಯರು ಮುಖ್ಯಮಂತ್ರಿಗಳ ಮತ್ತು ಬಹುತೇಕ ಮಂತ್ರಿಗಳ ವಿರುದ್ಧ ಅವರ ಹೈಕಮ್ಯಾಂಡಿಗೆ ಸಲ್ಲಿಸಿದಂತಹ ಮನವಿಯಲ್ಲಿ ಕೂಡ ಈ ಮುಖ್ಯಮಂತ್ರಿಯನ್ನು ತೆಗೆಯಲಿಕ್ಕೆ ಒಂದು ಅತ್ಯಂತ ಬಲವಾದಂತಹ ಕಾರಣವೆಂದು ಅದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದು ನನ್ನ ದೃಷ್ಟಿಗೂ ಬಿದ್ದಿದೆ. ಆ ಆಪಾದನೆ ಏನು ಎಂದರೆ ಹಿಂದಿನ ಮುಖ್ಯಮಂತ್ರಿಗಳು ರಾಮಕೃಷ್ಣ ಹೆಗಡೆಯವರ ಮತ್ತು ಅವರ ಪಕ್ಷದ ಇನ್ನಿತರ ಸಹೋದ್ಯೋಗಿಗಳ ಸಲಹೆ ಮೇರೆಗೆ ಸರ್ಕಾರವನ್ನು ನಡೆಸುತ್ತಿದ್ದಾರೆ. ಅದಕ್ಕೆ ಒಂದೆರಡು ಉದಾಹರಣೆಗಳನ್ನೂ ಕೂಡ ಅವರು ಕೊಟ್ಟಿದ್ದು ಉಂಟು. ಯಾರಾದರೂ ಈ ರೀತಿ ಭಾವಿಸಿದ್ದರೆ ಅದು ಕೇವಲ ಭ್ರಾಂತಿ ಎಂದು ನಾನು ಹೇಳುತ್ತೇನೆ. ನನ್ನ ಮತ್ತು ನನ್ನ ಸಹೋದ್ಯೋಗಿಗಳ ಸಲಹೆ ಮೇರೆಗೆ ಈ ಸರ್ಕಾರ ನಡೆಯುತ್ತಿದ್ದರೆ ಅದರ ಚಿತ್ರ ಬೇರೆ ಇರುತ್ತಿತ್ತು. ಇವತ್ತಿನ ಚಿತ್ರ ಇರುತ್ತಿರಲಿಲ್ಲ. ಆಳುವ ಪಕ್ಷದಲ್ಲಿ ಅತೃಪ್ತರ ಸಂಖ್ಯೆ ಯಾವಾಗಲೂ ಇದ್ದೇ ಇರುತ್ತದೆ. ಅದು ಇವತ್ತು ನಿನ್ನೆಯದಲ್ಲ. ಎಂದಿನಿಂದ ಪ್ರಜಾಪ್ರಭುತ್ವದ ಪದ್ಧತಿ ಮತ್ತು ಪಾರ್ಟಿ ಸಿಸ್ಟಂ ಆಫ್ ಗವರ್ನಮೆಂಟ್ ಶುರು ಆಯಿತು, ಅಂದಿನಿಂದಲೂ ಕೂಡ ಈ ಒಂದು ರೋಗ ಆಡಳಿತ ಆಳುವ ಪಕ್ಷದಲ್ಲಿ ನಡೆದುಕೊಂಡೇ ಬಂದಿದೆ. ಅಷ್ಟೇ ಅಲ್ಲ, ಅಸಂತುಷ್ಟರು ವಿರೋಧಿ ಪಕ್ಷದಲ್ಲೂ ಇರುತ್ತಾರೆ. ಆದ್ದರಿಂದ ಅದೊಂದು ಅನೈಸರ್ಗಿಕವಾದ ಬೆಳವಣಿಗೆ ಎಂದು ನಾನು ಕರೆಯಲಾರೆ. ಆದರೆ ಅದಕ್ಕೂ ಒಂದು ಇತಿಮಿತಿ ಇರಬೇಕು, ಮೇರೆ ಇರಬೇಕು. ಒಂದು ಸೀಮೆ ಇರಬೇಕು. ಯಾವಾಗ ಈ ರೋಗ ಅತ್ಯಂತ ಉಲ್ಬಣಾವಸ್ಥೆಗೆ ತಲಪುತ್ತದೋ ಆಗ ಅದರ ಪರಿಣಾಮ, ಅದರಿಂದ ಆಗತಕ್ಕ ಅನಾಹುತ ಕೇವಲ ಆ ಪಕ್ಷಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಅದು ಇಡೀ ರಾಜ್ಯಕ್ಕೆ ರಾಜ್ಯದ ಜನತೆಗೆ ಅತ್ಯಂತ ತೀವ್ರವಾಗಿ ಪರಿಣಾಮವನ್ನು ಮಾಡುತ್ತದೆ. ಆ ದೃಷ್ಟಿಯಿಂದಲೇ ನಾನು ಇವತ್ತು ಎರಡು ಮಾತನ್ನು ಹೇಳಬೇಕು ಎಂದು ಇದ್ದೇನೆ. ನಮ್ಮ ರಾಜ್ಯದಲ್ಲಿ ಕಳೆದ ಮೂರು ವರ್ಷದಲ್ಲಿ ನಾಲ್ಕು ಸರ್ಕಾರಗಳು ಬಂದವು. ರಾಜಕೀಯ ಏರುಪೇರುಗಳಿಗೆ ಇತಿಹಾಸದಲ್ಲಿ ತಕ್ಕಮಟ್ಟಿನ ಸ್ಥಾನವನ್ನು ಪಡೆದಂತಹ ಹಳೇಮೈಸೂರು ಮತ್ತು ಹೊಸ ಕರ್ನಾಟಕದಲ್ಲಿ ಇಷ್ಟು ತೀವ್ರ ಗತಿಯಲ್ಲಿ ಸರ್ಕಾರದ ಬದಲಾವಣೆ ಆಗತಕ್ಕಂಥದ್ದು ಇದೇ ಮೊದಲನೆ ಸಲ ಎಂದು ನಾನು ನೆನಪು ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ.

ದಿವಂಗತ ಚೆಂಗಲರಾಯರೆಡ್ಡಿಯವರ ಕಾಲದಲ್ಲೂ ಕೂಡ ಭಿನ್ನಮತೀಯರಿದ್ದರು. ಅವರ ನಂತರ ಮುಖ್ಯಮಂತ್ರಿಗಳಾದ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿಯೂ ಭಿನ್ನಮತೀಯರಿದ್ದರು, ಅವರು ಅಧಿಕಾರ ಕಳೆದುಕೊಂಡದ್ದು ಭಿನ್ನಮತೀಯರ ಚಟುವಟಿಕೆಯಿಂದಲೇ. ಇದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಇವರ ನಂತರ ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾದರು. ಮುಖ್ಯಮಂತ್ರಿಗಳಾಗಿದ್ದ ಕಡಿದಾಳ್ ಮಂಜಪ್ಪನವರ ಬಗ್ಗೆ ನಾನು ಏತಕ್ಕೆ ಹೇಳಲಿಲ್ಲವೆಂದರೆ, ಅವರ ಆಡಳಿತದ ಕಾಲ ಅತ್ಯಂತ ತಾತ್ಕಾಲಿಕವಾಗಿದ್ದರಿಂದ ಭಿನ್ನಮತೀಯ ಪ್ರದರ್ಶನಕ್ಕೆ ಅವಕಾಶವಿರಲಿಲ್ಲ. ಅದಕ್ಕಾಗಿ ಅವರ ಹೆಸರನ್ನು ಹೇಳಿರಲಿಲ್ಲ ಅವರ ನೆನಪಿಲ್ಲ ಎಂದು ಅಲ್ಲ. ಅವರ ಹೆಸರನ್ನು ಪ್ರಸ್ತಾಪಿಸದಿದ್ದುದು ಅವರಿಗೆ ಅಗೌರವ ತರಬೇಕೆಂದಲ್ಲ. 1967ನೇ ಇಸವಿಯಲ್ಲಿ ಸನ್ಮಾನ್ಯ ನಿಜಲಿಂಗಪ್ಪನವರು ಎರಡನೇ ಬಾರಿ ಮುಖ್ಯಮಂತ್ರಿಗಳಾದ ನಂತರ ಕೇವಲ ಒಂದೇ ವರ್ಷದಲ್ಲಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡತಕ್ಕಂಥ ಪ್ರಸಂಗ ಬಂತು. ಹೀಗೆ ಭಿನ್ನಮತೀಯ ಚಟುವಟಿಕೆ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಇವರ ನಂತರ ಮಾನ್ಯ ಬಿ.ಡಿ.ಜತ್ತಿಯವರು ಮುಖ್ಯಮಂತ್ರಿಗಳಾದರು. ಆಗ ನಾನೂ ಸಹ ಅದೇ ಪಕ್ಷದಲ್ಲಿದ್ದೆ. ಆಗ ವಿರೋಧ ಪಕ್ಷ ಅಷ್ಟೊಂದು ಬಲಯುತವಾಗಿರಲಿಲ್ಲ. ಇವೊತ್ತಿನ ಈ ಸಂದರ್ಭದಲ್ಲೂ ಕೂಡ ವಿರೋಧಪಕ್ಷ ಅಷ್ಟೊಂದು ಬಲವಾಗಿಲ್ಲ. ನಾನೇ ಮಾನ್ಯ ಜತ್ತಿಯವರ ವಿರುದ್ಧ 29 ಅಂಶಗಳ ಒಂದು ಆಪಾದನೆ ಪಟ್ಟಿ ತಯಾರಿಸಿದೆ ಮತ್ತು ಅವರ ವಿಚಾರವಾಗಿ ಪಕ್ಷದಲ್ಲಿ ಚರ್ಚೆಯಾಗಬೇಕೆನ್ನತಕ್ಕ ಒಂದು ಆಗ್ರಹವನ್ನು ಮಾಡಿದೆ. ಅದರಂತೆ ಚರ್ಚೆಯಾಯಿತು. ಚರ್ಚೆಯಾದ ನಂತರ ಪುನಃ ಹೈಕಮಾಂಡಿನಿಂದ ಕೆಲವು ಮಂದಿ ಇಲ್ಲಿಗೆ ಬಂದು, ಹೊಸದಾಗಿ ನಾಲ್ಕು ಜನ ಮಂತ್ರಿಗಳನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವ ಮುಖಾಂತರ ಆ ಬಿಕ್ಕಟ್ಟು ಪರಿಹರಿಸಲ್ಪಟ್ಟಿತು. ಇದಾದ ನಂತರ ಚುನಾವಣೆಗೆ ಬಹಳ ಕಾಲವಿರಲಿಲ್ಲ, ಕೇವಲ ಒಂದೂವರೆ ವರ್ಷ ಮಾತ್ರವಿತ್ತು. ಈ ಉಪೋದ್ಘಾತ ಏತಕ್ಕೆ? ಇದರ ಬಗ್ಗೆ ಪುನಃ ನಾನು ಹೇಳುವುದಾದರೆ ಭಿನ್ನಮತೀಯರು ಅಥವಾ ಅಸಂತುಷ್ಟ ಶಾಸಕರ ಅಸ್ತಿತ್ವ ಮತ್ತು ಅವರ ಚಟುವಟಿಕೆ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ನಾನು ಮುಖ್ಯಮಂತ್ರಿಯಾದ ಪ್ರಾರಂಭದಲ್ಲಿ,ಯಾವಾಗ ನಮಗೆ ಸಾಕಷ್ಟು ಅಧಿಕಾರ ಅಥವಾ ಆಡಳಿತದ ಒಂದು ಯಶಸ್ಸು ಸಿಕ್ಕಿತೋ, ಆಗಿನಿಂದ ನಮಗೆ ಭ್ರಮೆಯಾಯಿತು. ಅಂದು ನನ್ನ ಪಕ್ಷದಲ್ಲಿಯೂ ಕೂಡ ಸ್ವಲ್ಪಮಟ್ಟಿಗೆ ಭಿನ್ನಾಭಿಪ್ರಾಯ ತಲೆದೋರಿತು. ಏತಕ್ಕೆ ಈ ಭಿನ್ನಮತ? ಯಾವುದೇ ಒಬ್ಬ ನಾಯಕನ ವಿರುದ್ಧ ಆ ಪಕ್ಷದ ಸದಸ್ಯನಿಗೆ ಅತೃಪ್ತಿಯಾಗಿದ್ದರೆ, ಆ ಅತೃಪ್ತಿಗೆ ಬಲವಾದಂಥ ಕಾರಣವಿದ್ದರೆ, ಆ ಅತೃಪ್ತಿ ಅಸಾಧುವೂ ಅಲ್ಲ, ಅನೈಸರ್ಗಿಕವೂ ಅಲ್ಲ. ಆದರೆ, ಅದಕ್ಕೆ ಬಲವಾದ ಕಾರಣಗಳು ಇಲ್ಲದೇ ಇದ್ದರೆ ಆಗ ಈ ಅತೃಪ್ತಿಯೇ ಮುಖ್ಯ ಕಾರಣ. 'ಅಧಿಕಾರದ ಲಾಲಸೆ' ಎಂದರೆ ಅದು ಸತ್ಯಕ್ಕೆ ದೂರವಾದಂಥ ಮಾತಾಗುವುದಿಲ್ಲ. ಆದರೆ, ನನಗೆ ಇವೊತ್ತು ಯೋಚನೆಗಿಟ್ಟುಕೊಂಡಿರುವುದೇನೆಂದರೆ, ಅವರ ಪಕ್ಷದಲ್ಲಿರುವ ಭಿನ್ನಮತೀಯರ ಚಟುವಟಿಕೆ ಮತ್ತು ಒಳಜಗಳ – ಇದರ ಪರಿಣಾಮ ಪಕ್ಷದ ಮೇಲೆ ಏನಾಗುತ್ತದೋ ಅದಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. ನಮ್ಮ ದೃಷ್ಟಿಯಲ್ಲಿ ಆಳುವ ಪಕ್ಷ ಇದೇ ರೀತಿ ಜಗಳವಾಡುತ್ತಲೇ ಇರಲಿ, ಅದರಿಂದ ನಮಗಂತೂ ಯಾವುದೇ ತರಹದ ಹಾನಿಯಿಲ್ಲ; ಆದರೆ, ನಮ್ಮ ರಾಜ್ಯಕ್ಕೆ ಹಾನಿ ಇದೆ; ರಾಜ್ಯದ ಜನತೆಗೆ ಇದರಿಂದ ಹಾನಿಯುಂಟಾಗುತ್ತದೆ. ಮೂರೂವರೆ ವರ್ಷದ ಮೊದಲಿದ್ದ ಸರ್ಕಾರ ಏತಕ್ಕೆ ಹೋಯಿತು? ನಾನು ಹೇಳಿದೆ: ನಮ್ಮ ಸರ್ಕಾರ

ಹೋದನಂತರ, ಮೊದಲನೇ ಸರ್ಕಾರ ಕೇಂದ್ರಸರ್ಕಾರದ ಸರ್ಕಾರವಾಗಿತ್ತು. ಅಂದರೆ, ಗವರ್ನರ್ ಸರ್ಕಾರ. ಅದಾದ ಮೇಲೆ, ಶ್ರೀಮಾನ್ ವೀರೇಂದ್ರಪಾಟೀಲರ ಸರ್ಕಾರ. ಆದರೆ ಪಕ್ಷ ಬದಲಾವಣೆಯಾಗಲಿಲ್ಲ. ಇಂದಿರಾಗಾಂಧಿಯವರಿಂದ ಹಿಡಿದು ರಾಜೀವ್‌ಗಾಂಧಿಯವರೆಗೆ ಎಲ್ಲಾ ಕಾಂಗ್ರೆಸ್ ನಾಯಕರ ಆಪಾದನೆ ವಿರೋಧಿ ಪಕ್ಷದ ನಾಯಕರ ಮೇಲೆ ಏನೆಂದರೆ ನಮ್ಮ ದೇಶದ ಸ್ಟೆಬಿಲಿಟಿಗೆ ಇವರು ಭಂಗವನ್ನು ತರುತ್ತಾರೆ ಎನ್ನುವುದಾಗಿತ್ತು ಅಂದರೆ ವಿರೋಧಪಕ್ಷದವರು ಕಾಂಗ್ರಸನ್ನು ಅಟ್ಯಾಕ್ ಮಾಡಿದರೆ ಸ್ಟೆಬಿಲಿಟಿ ಹೋಗುತ್ತದೆ ಎಂದು. ನಾನು ಇಂದಿರಾಗಾಂಧಿಯವರ ಕಾಲದಲ್ಲೂ ಮತ್ತು ರಾಜೀವ್‌ಗಾಂಧಿಯವರ ಕಾಲದಲ್ಲೂ ಇದನ್ನು ಹೇಳುತ್ತಿದ್ದೆ. ಅವರ ದೃಷ್ಟಿಯಲ್ಲಿ ಸ್ಟೆಬಿಲಿಟಿ ಅಥವಾ ಸುಭದ್ರತೆ, ಭದ್ರತೆಯು, ಅವರ ವೈಯಕ್ತಿಕವಾದಂಥ ದೃಷ್ಟಿಯಲ್ಲಿ ಇರುತ್ತದೆ. ವೀರೇಂದ್ರಪಾಟೀಲರ ಸರ್ಕಾರ ಏಕೆ ಹೋಯಿತು? ವೀರೇಂದ್ರಪಾಟೀಲರು ರಾಜೀವ್‌ಗಾಂಧಿಯವರ ಮನಸ್ಸನ್ನು ಒಲಿಸಲು ಮಾಡಬಾರದಂಥ ಕೆಲಸವನ್ನು ಮಾಡಿದರು. ಯಾವ ವಿಚಾರವಾದ ಟೆಲಿಫೋನ್ ಟ್ಯಾಪಿಂಗ್ ಪ್ರಕರಣ ಸತ್ತು ಹೋಗಿತ್ತೋ ಮತ್ತು ಇಡೀ ದೇಶದಲ್ಲಿಯೇ ಹೊಸ ಉದಾಹರಣೆಯಾಗಿ, ಹೊಸ ಮಾದರಿಯನ್ನಾಗಿ ಹಾಕಿ ನಾನು ರಾಜೀನಾಮೆಯನ್ನು ಕೊಟ್ಟೆನೋ ಅವಾಗ ಅದು ಮುಗಿದು ಹೋಗಬೇಕಾಗಿತ್ತು. ನಾನು ಯಾವ ದಿವಸ ಇದಾಗಿದೆ ಎಂದು ತಿಳಿದ ತಕ್ಷಣವೇ ನಾನು ದೆಹಲಿಯಿಂದಲೇ ರಾಜೀನಾಮೆಯನ್ನು ಕಳಿಸಿಕೊಟ್ಟೆ. ಇದಾದ ನಂತರ, ಕೇಂದ್ರದಲ್ಲಿ ಮಾನ್ಯ ಚಂದ್ರಶೇಖರ್‌ರವರು ರಾಜೀವ್‌ಗಾಂಧಿಯವರ ಮೇಲೆ ನೇರವಾಗಿ ಆಪಾದನೆಯನ್ನು ಮಾಡಿದಾಗ, ತನ್ನ ಟೆಲಿಫೋನ್ ಮತ್ತು ಇನ್ನಿತರ ವಿರೋಧಿಪಕ್ಷದ ನಾಯಕರ ಟೆಲಿಫೋನ್ ಟ್ಯಾಪ್ ಆಗುತ್ತಿದೆ ಎಂದಾಗ, ಬಲವಂತಕ್ಕಾಗಿ ಸಿ.ಬಿ.ಐ ವಿಚಾರಣೆಯಾಯಿತು; ಆ ವಿಚಾರಣೆಯ ವರದಿಯನ್ನು ಲೋಕಸಭೆಯ ಮುಂದಿಡಲಾಯಿತು; ಅದರ ಪ್ರಕಾರ 489 ಟೆಲಿಫೋನ್‌ಗಳನ್ನು ಕೇಂದ್ರಸರ್ಕಾರ, ಮಾನ್ಯ ರಾಜೀವಗಾಂಧಿಯವರು ಪ್ರಧಾನಮಂತ್ರಿಗಳಾಗಿದ್ದಾಗ, ಅವರ ಪಕ್ಷದ ಸದಸ್ಯರದ್ದು, ಅವರ ಮಂತ್ರಿಮಂಡಲದ ಸದಸ್ಯರದ್ದು , ವಿರೋಧಿಪಕ್ಷದ ನಾಯಕರದ್ದು, ಕೆಲವು ಕೈಗಾರಿಕೋದ್ಯಮಿಗಳದ್ದು ಮತ್ತು ಕೆಲವು ಅಧಿಕಾರಿಗಳದ್ದು. ಟೆಲಿಫೋನ್ ಟ್ಯಾಪ್ ಆಗುತ್ತಿತ್ತೆಂದು ಗೊತ್ತಾಯಿತು. ಆಗ ಅವರು ರಾಜೀನಾಮೆಯನ್ನು ಕೊಡಬೇಕಾಗಿತ್ತು. ಅದೇ ರೀತಿಯಲ್ಲಿ ಇವತ್ತು ನನಗೆ ಗೊತ್ತಾಗಿರುವುದೇನೆಂದರೆ, ವೀರೇಂದ್ರಪಾಟೀಲರ ಕಾಲದಲ್ಲೂ ಕೂಡ ಟೆಲಿಫೋನ್ ಟ್ಯಾಪಿಂಗ್ ಅನೂಚಾನವಾಗಿ ನಡೆಯುತ್ತಿತ್ತು. ಆ ಕಾಲದಿಂದ ಈವತ್ತಿನವರೆಗೂ ಕೂಡ ಅದು ನಡೆಯುತ್ತಿದೆ ಎನ್ನುವ ಬಗ್ಗೆ ನಾನು ಅನುಮಾನವನ್ನು ಮಾಡಿದರೆ ಅದು ತಪ್ಪಾಗುವುದಿಲ್ಲ. ವೀರೇಂದ್ರಪಾಟೀಲರು ಆ ವಿಚಾರವನ್ನು ಚರ್ಚೆ ಮಾಡಲು ಈ ಸದನದ ಮೂರು ದಿನಗಳನ್ನು ವ್ಯರ್ಥವಾಗಿ ಕಳೆದರು. ರಾಜೀವ್‌ಗಾಂಧಿಯವರ ಮನಸ್ಸನ್ನು ಒಲಿಸುವುದಕ್ಕೆ, ಅಂದರೆ ವೀರೇಂದ್ರಪಾಟೀಲರಿಗೆ ಬಹುಶಃ ತನ್ನ ಸ್ಥಾನಕ್ಕೆ ಗಂಡಾಂತರ ಬಂದಿದೆ ಎಂದು ಗೊತ್ತಾಗಿರಬೇಕು. ಸರ್ಕಾರದ ದಾಖಲೆಯನ್ನು ಬದಲಾಯಿಸಿ, ಕೇಂದ್ರಸರ್ಕಾರದ ಇಬ್ಬರು ಮಂತ್ರಿಗಳನ್ನು ಇಲ್ಲಿಟ್ಟುಕೊಂಡು, ಅವರ ಮನಸ್ಸನ್ನು ತೃಪ್ತಿ ಮಾಡುವುದಕ್ಕಾಗಿ ಇಲ್ಲಿ ಮೂರು ದಿನಗಳ ಕಾಲ ಅದನ್ನು ಚರ್ಚೆ ಮಾಡಿದರು, ಆದರೆ ಅವರಿಗೆ ಏನು ಪ್ರತಿಫಲ ಸಿಕ್ಕಿತು? ಅವರು ಇಂಥ ವಿಶ್ವಾಸದ್ರೋಹವನ್ನು ಮಾಡುತ್ತಾರೆಂದು ನಾನು ತಿಳಿದುಕೊಂಡಿರಲಿಲ್ಲ. ಫೈಲಿನಲ್ಲಿ ಹೊಸದಾಗಿ, ಹಿಂದಿನ ದಿವಸ ಮುಖ್ಯ ಕಾರ್ಯದರ್ಶಿ ಮತ್ತು ಹಿಂದಿನ ಡಿ.ಜಿ.ಪಿ.ಯವರ ಹತ್ತಿರ ಸ್ಟೇಟ್‌ಮೆಂಟನ್ನು ತೆಗೆದುಕೊಂಡು ಅದನ್ನು ಜೋಡಿಸಿ ಅದನ್ನು ವಿಚಾರಣೆ ಮಾಡಿ ಅದನ್ನು ಬಹಿರಂಗ ಮಾಡುತ್ತಾರೆ. ಆ ಸಂದರ್ಭದಲ್ಲಿ ಅವರು

ಅದರ ಬಗ್ಗೆ ಇಲ್ಲಿ ಭಾಷಣ ಮಾಡುತ್ತಾರೆ. ಆಗ ನಾನು ಇಲ್ಲಿ ಇರಲಿಲ್ಲ. ನಾನು ಇದ್ದಿದ್ದರೆ ಅದಕ್ಕೆ ಸರಿಯಾದ ಉತ್ತರವನ್ನು ಕೊಡುತ್ತಿದ್ದೆ. ಅವರು ಏನು ಹೇಳಿದರು ಹೆಗಡೆಯವರ ಸ್ಥಿತಿ ಹೇಗೆ ಆಗಿದೆ ಎಂದರೆ ಒಂದು ಜೋಡಿನಲ್ಲಿ ಹೊಡೆಸಿಕೊಳ್ಳುವುದು, ನೂರು ಉಳ್ಳಾಗಡ್ಡಿ ತಿನ್ನುವುದು ಮತ್ತೊಂದು. ಹೀಗೆ.......

(ಗೊಂದಲ)

ಶ್ರೀ ಕೆ. ಶಿವಮೂರ್ತಿ :- ಇದೆಲ್ಲಾ ಬಹಳ ಲೇಟ್ ಆಯಿತು. ತಮಗೆ ನೈತಿಕವಾದ ಬೆಂಬಲವಿದ್ದರೆ ಅವತ್ತೇ ಈ ರೀತಿ ಉತ್ತರವನ್ನು ಕೊಡಬಹುದಾಗಿತ್ತು. ವೀರೇಂದ್ರಪಾಟೀಲರು ಇಲ್ಲದ ಸಮಯದಲ್ಲಿ ಈ ರೀತಿ ಹೇಳುವುದು ಸರಿಯಾಗುವುದಿಲ್ಲ. ವೀರೇಂದ್ರಪಾಟೀಲರೂ ಬರಲಿ; ತಾವೂ ಇರಿ; ಅವತ್ತು ಇದು ಚರ್ಚೆಯಾಗಲಿ.

ಶ್ರೀ ಎಂ. ಮಹದೇವ್:- 2 ವರ್ಷದ ನಂತರ ಏಕೆ ನಿಮಗೆ ಇದು ಜ್ಞಾಪಕ ಬಂತು? ನಿಮ್ಮ ಕಾಲದಲ್ಲಿ ಎಷ್ಟು ಟೆಲಿಫೋನ್‌ಗಳ ಟ್ಯಾಪ್ ಆಗಿದೆ? ನಿಮ್ಮ ಮೇಲೆ ಬೇಕಾದಷ್ಟು ಆಪಾದನೆಗಳಿವೆ. ಅವಿಶ್ವಾಸ ನಿರ್ಣಯವಿರುವುದು ಈ ಸರ್ಕಾರದ ಮೇಲೆ; ವೀರೇಂದ್ರಪಾಟೀಲರ ಮೇಲೆ ಅಲ್ಲ ಅವಿಶ್ವಾಸ ನಿರ್ಣಯ ಇರುವುದು.

(ಗೊಂದಲ)

ಶ್ರೀ ಶಿವಮೂರ್ತಿ:- ಹಳೆಯದನ್ನು ಹೊಸ ಬಾಟಲಿಯಲ್ಲಿ ಹಾಕಿಕೊಡುತ್ತಾರಲ್ಲಾ ನಮ್ಮ ಹೆಗಡೆವರು...

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ :- ಇಷ್ಟೆಲ್ಲಾ ಆದರೂ ಕೂಡ ಅವರಿಗೆ ದೇವರೇ ಶಿಕ್ಷೆ ಮಾಡುತ್ತಾನೆ.

ಶ್ರೀ ಟಿ.ಎಂ. ಮಂಜುನಾಥ್(ಯೋಜನಾ ರಾಜ್ಯ ಮಂತ್ರಿಗಳು):- ಶ್ರೀ ರಾಮಕೃಷ್ಣ ಹೆಗಡೆಯವರ ಬಗ್ಗೆ ನನಗೆ ಅತ್ಯಂತ ಗೌರವವಿದೆ. ಅಷ್ಟೇ ಗೌರವ ಹಿರಿಯರಾದಂತಹ ವೀರೇಂದ್ರ ಪಾಟೀಲರ ಬಗ್ಗೆ ಕೂಡ ಇದೆ. ನನ್ನ ಅಭಿಪ್ರಾಯದಲ್ಲಿ ಇವರಿಬ್ಬರ ರಾಜಕೀಯ ಪಕ್ಷಗಳು ಬೇರೆಯಿರಬಹುದು. ಆದರೆ ಜನತೆ ಮುಂದೆ ಅವರಿಬ್ಬರ ವ್ಯಕ್ತಿತ್ವ ಬಹಳ ಅಮೋಘವಾಗಿದೆ ಮತ್ತು ವ್ಯಕ್ತಿಗಳು ಅಷ್ಟೇ ಪ್ರಧಾನವಾಗಿರತಕ್ಕಂಥಾದ್ದು ಇದೆ. ನಾನು ಅವರಲ್ಲಿ ಕೇಳಿಕೊಳ್ಳುವುದಿಷ್ಟೆ; ಸಂದರ್ಭಕ್ಕೆ ಅನುಗುಣವಾಗಿ ಅವರು ಹೇಳುವಂತಹ ವಿಚಾರಗಳನ್ನು ಇಷ್ಟು ತಡ ಮಾಡದೆ ಆಗಲೇ ಅವರು ವ್ಯಕ್ತಪಡಿಸಬಹುದಾಗಿತ್ತೆಂದು ನನ್ನ ಭಾವನೆಯಷ್ಟೆ. ಕರ್ನಾಟಕ ರಾಜ್ಯದಲ್ಲಿ ತಾವಿಬ್ಬರೂ ಲವಕುಶ ಇದ್ದಂತೆ ಇರಬಹುದು. ಆದರೆ ಅದಕ್ಕಿಂತ ಮಿಗಿಲಾಗಿ ಒಂದು ಆಶಾ ಭಾವನೆಯನ್ನು ಜನತೆ ನಿಮ್ಮ ಮೇಲೆ ಇಟ್ಟುಕೊಂಡಿರತಕ್ಕಂತಹ ಕಾಲದಲ್ಲಿ ತಾವು ವೀರೇಂದ್ರಪಾಟೀಲರ ಮೇಲೆ ಆಗಲಿ ಅಥವಾ ಈ ಸದನಕ್ಕೆ ಈಗಿನ ಕಾಲಕ್ಕನುಗುಣವಾಗಿಲ್ಲದೇ ಇರತಕ್ಕಂತಹ ಮಾತುಗಳನ್ನು ತಾವು ವಿಷದಪಡಿಸುವುದರಿಂದ ಏನೂ ಲಾಭ ಅದರಿಂದ ಸಿಗುವುದಿಲ್ಲ. ಅದು ತಮ್ಮ ಮೇಲೆ ಹೆಚ್ಚಿನ ಪರಿಣಾಮವಾಗುತ್ತದೆಂಬ ಒಂದು ಭಾವನೆಯಿಂದ ನಿಮ್ಮ ಮುಂದೆ ಕಳಕಳಿಯಿಂದ ಮಾತನಾಡುತ್ತಿದ್ದೇನೆ. ಆದ್ದರಿಂದ ಈ ವಿಚಾರವನ್ನು ಅಲ್ಲಿಗೇ ಬಿಟ್ಟು ಬೇರೆಯದನ್ನೆ ಮಾತನಾಡತಕ್ಕಂಥಾದ್ದು ಉಚಿತವೆಂದು ನನ್ನ ಅಭಿಪ್ರಾಯ.

ಶ್ರೀ ಎಂ. ಮಹದೇವ್:-ಸರಕಾರದ ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡಬೇಕೇ ಹೊರತು ರಾಜ್ಯದ ಜನತೆಯಲ್ಲಿ ವಿಶ್ವಾಸ ಬೆಳಸಿಕೊಳ್ಳುವುದಕ್ಕೋಸ್ಕರ 2 ವರುಷದ ನಂತರ ಈಗ ಅವಕಾಶ ತೆಗೆದುಕೊಂಡಿದ್ದಿರಲ್ಲ, ಇದು ಸರಿಯೇ? ಟೆಲಿಫೋನ್ ಹಗರಣ ನಿಮ್ಮ ಕಾಲದಲ್ಲಾಗಿಲ್ಲವೇ? ನಿಮ್ಮ ಮೇಲೂ ಬೇಕಾದಷ್ಟು ಆಗಿದೆ. ನೀವೇಕೆ ಮುಚ್ಚಿಕೊಳ್ಳುತ್ತೀರಿ?

ಪ್ರೊ : ಎಂ.ಡಿ. ನಂಜುಂಡಸ್ವಾಮಿ:- ನಾನು ಈ ಸದನದ ಅತ್ಯಂತ ಕಿರಿಯ ಸದಸ್ಯ. ನಾನು ಕಾಂಗ್ರೆಸ್ಸಿನ ಬೆಂಬಲಿಗನೂ ಅಲ್ಲ; ವೀರೇಂದ್ರಪಾಟೀಲರ ಬೆಂಬಲಿಗನೂ ಅಲ್ಲ. ನಾನು ಹಾಜರಿಲ್ಲದೇ ಇರುವಾಗ ಇಲ್ಲಿ ಯಾರಾದರೂ ಒಬ್ಬ ಸದಸ್ಯರು ನನ್ನ ಮೇಲೆ ಮಾತನಾಡಬಹುದೇ? ವೀರೇಂದ್ರ ಪಾಟೀಲರು ಇಲ್ಲಿ ಹಾಜರಿಲ್ಲದಿರುವಾಗ ಅವರ ಬಗ್ಗೆ ಮಾತನಾಡಬಹುದೇ ಎಂಬ ಬಗ್ಗೆ ತಮ್ಮಿಂದ ಸ್ಪಷ್ಟೀಕರಣ ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ:- ಮಾನ್ಯ ನಂಜುಂಡಸ್ವಾಮಿಯವರಿಗೆ ನಾನು ಈ ಸಭೆಯ ನಡವಳಿಕೆಗಳ ಪರಿಚಯ ಮಾಡಿಸಿಕೊಡಬೇಕಾದ್ದಿಲ್ಲ. ವೀರೇಂದ್ರಪಾಟೀಲರ ಬಗ್ಗೆ ನಾನು ಯಾವುದೇ ಆಪಾದನೆ ಮಾಡುತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು:- ಉಳ್ಳಾಗಡ್ಡೆ ತಿಂದಿದ್ದು....

ಶ್ರೀ ರಾಮಕೃಷ್ಣ ಹೆಗಡೆ:-ಉಳ್ಳಾಗಡ್ಡೆ ನಾನು ತಿಂದೆ ಎಂದು ಅವರು ಹೇಳಿದ್ದನ್ನು ನಾನು ಉದ್ಧರಿಸಿದೆ ಅಷ್ಟೆ; ಅದು ಅವರು ಹೇಳಿದ ಮಾತು. ಈಗ ನಾನು ಅವರನ್ನು ಕೇಳುತ್ತೇನೆ. ಆಗ ನಾನು ಇಲ್ಲಿ ಇದ್ದೆನಾ ಎಂದು. ಆಗ ನೀವು ಪ್ರತಿಭಟಿಸಿದಿರಾ? ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಹಚ್ಚುವುದು ಯಾವ ನ್ಯಾಯ? ಅದು ಯಾವ ನ್ಯಾಯ ಹೇಳಿ. ಆಗ ನಾನು ಇಲ್ಲಿ ಇದ್ದೆನಾ? ಆ ದಿವಸ ಹೇಳಬೇಕಾಗಿತ್ತು ನಾನು ಇದ್ದೆನಾ? ಅವತ್ತು, ನೀವು ಇದ್ದಿರಿ. ವೀರೇಂದ್ರಪಾಟೀಲರಿಗೆ ಒಂದು ರೂಲ್, ನನಗೆ ಒಂದು ರೂಲಾ?

(ಗೊಂದಲ)

ಪ್ರೊ ಎಂ.ಡಿ. ನಂಜುಂಡಸ್ವಾಮಿ:- ನಾನು ಇದ್ದೆ ಹೌದು; ಆದರೆ ನಾನು ಕೇಳುತ್ತಿರುವುದು ಯಾವುದೇ ಒಬ್ಬ ಸದಸ್ಯ ಇಲ್ಲಿ ಹಾಜರಿಲ್ಲದೇ ಇರುವಾಗ ಇನ್ನೊಬ್ಬ ಸದಸ್ಯ ಅವರ ಬಗ್ಗೆ ಮಾತನಾಡಬಹುದೇ ಎಂದು.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ:- ಇವತ್ತು ನಾನು ಪ್ರಥಮ ಬಾರಿಗೆ ನನ್ನ ಬಾಯಿಂದ ಆ ಮಾತನ್ನು ಹೇಳುತ್ತಿಲ್ಲ. ಅವರ ಬಾಯಿಂದ ಬಂದ ಮಾತನ್ನು ನಾನು ಇಲ್ಲಿ ಪುನರುಚ್ಚಾರ ಮಾಡುತ್ತಿದ್ದೇನೆ ಅಷ್ಟೆ; ಕಳೆದ ಮೂರೂವರೆ ವರ್ಷಗಳಲ್ಲಿ 3 ಜನ ಮುಖ್ಯಮಂತ್ರಿಗಳಾದರು. ಮೊದಲನೇ ಮುಖ್ಯಮಂತ್ರಿ ಈ ಅವಧಿಯಲ್ಲಿ ಮಾನ್ಯ ವೀರೇಂದ್ರಪಾಟೀಲರು ಆದುದ್ದು ಹೌದೋ ಅಲ್ಲವೋ? ನಾನು ಅವರ ಬಗ್ಗೆ ಮಾತನಾಡುತ್ತೇನೆ. ಅದಾದ ನಂತರ ಮಾನ್ಯ ಬಂಗಾರಪ್ಪನವರ ವಿಚಾರ, ಅನಂತರ ಇವತ್ತಿನ ಮುಖ್ಯಮಂತ್ರಿಯವರ ಬಗ್ಗೆ ಬರುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ವೀರೇಂದ್ರಪಾಟೀಲರಿಗೆ ಕಲ್ಲಿನಲ್ಲೊಡೆದು ಮನೆಗೆ

ಶ್ರೀ ಕೆ. ಶಿವಮೂರ್ತಿ:- ವೀರೇಂದ್ರಪಾಟೀಲರ ಮೇಲೆ ದೂರನ್ನು ಹೇಳಿದಿರಿ. ಶ್ರೀಮಾನ್ ಬಂಗಾರಪ್ಪನವರ ಸರ್ಕಾರ, ನಂತರ ಮೊಯ್ಲಿ ಸರ್ಕಾರ ಎಂದು ಹೇಳಿದಿರಿ. ಈ ಮಧ್ಯೆ ವಿ.ಪಿ.ಸಿಂಗರು ಮಾಡಿದ್ದನ್ನು ತಾವೇ ಮರೆತಿರಲ್ಲಾ. ರಾಜ್ಯದಲ್ಲಿ ಸರ್ಕಾರವನ್ನು ಡಿಸಾಲ್ವ್ ಮಾಡಿಸಿ ಪ್ರೆಸಿಡೆಂಟ್ ರೂಲನ್ನು ತರುವುದಕ್ಕೆ ತಾವು ಪ್ರಯತ್ನ ಮಾಡಿದಿರಿ. ಆಗ ತಾವೇ ಪ್ಲಾನಿಂಗ್ ಕಮಿಷನ್‌ನ ವೈಸ್ ಛೇರ್ಮನ್ ಆಗಿ ವಿ.ಪಿ.ಸಿಂಗರಿಗೆ ಮಧ್ಯದಲ್ಲಿ ಅಡ್ವೈಸ್ ಮಾಡಿದಿರಿ. ಸಸ್ಪೆಂಡ್ ಆದ ಅವಧಿಯನ್ನೂ ತಾವು ಕೌಂಟ್ ಮಾಡಿಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ:- ವಿ.ಪಿ. ಸಿಂಗರು ನಮ್ಮ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದರೆ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಆಗಲೂ ನೀವು ಹೀಗೇ ಜಗಳವಾಡಿದಿರಲ್ಲಾ.

ಶ್ರೀ ಕೆ. ಶಿವಮೂರ್ತಿ:-ನೀವೂ ಮತ್ತು ಚಂದ್ರಶೇಖರ್‌ರವರು ಜಗಳವಾಡಲಿಲ್ಲವೆ? ದೇವೇಗೌಡರೂ, ನೀವೂ ಗಲಾಟೆಮಾಡಿಕೊಳ್ಳಲಿಲ್ಲವೇ? ಈಗ ಏತಕ್ಕೆ ಒಂದಾಗಿದ್ದೀರಿ?

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ನಾವು ಯಾವಾಗಲೂ ಹಾಗೇ ಇದ್ದೇವೆ.

(ಗೊಂದಲ)

ಶ್ರೀ ರಾಮಕೃಷ್ಣಹೆಗಡೆ:- ನಾನು ಮಾತನಾಡಬಹುದೇ ಅಧ್ಯಕ್ಷರೇ, ಮಾನ್ಯ ವೀರೇಂದ್ರ ಪಾಟೀಲರನ್ನು ಅಧಿಕಾರದಿಂದ ತೆಗೆದುಹಾಕಿದ್ದಕ್ಕೆ ಕಾರಣ ಏನು ಎಂಬುದು ಈ ದೇಶದ ಜನತೆಗೆ, ಈ ರಾಜ್ಯದ ಜನತೆಗಂತೂ ಗೊತ್ತಿದೆ. ಆ ಸಂದರ್ಭವನ್ನು ಉಪಯೋಗಿಸಿಕೊಂಡು ನಾನು ಹೇಳಿದೆ; ಅವರು ಕಾಂಗ್ರೆಸ್ ಹೈಕಮಾಂಡನ್ನು ಅಥವಾ ರಾಜೀವ್ ಗಾಂಧಿಯವರನ್ನು ಖುಷಿ ಪಡಿಸುವುದಕ್ಕೆ, ಅಥವಾ ಅವರನ್ನು ಓಲೈಸುವುದಕ್ಕೆ ಮಾಡಬಾರದಂಥ ಕೆಲಸವನ್ನು ಮಾಡಿದರೂ ಸಹ ಅದರಿಂದ ಯಾವುದೇ ಪ್ರಯೋಜನವಾಗಲಿಲ್ಲವಾದ್ದರಿಂದ ಅವರು ಹೋದರು ಎಂಬುದನ್ನು ನಾನು ಹೇಳುವುದಕ್ಕೆ ಹೋದೆ.

ಶ್ರೀ ಕೆ.ಶಿವಮೂರ್ತಿ:-ಅದು ಸರಿಯಲ್ಲ. ಈ ರೀತಿ ವೀರೇಂದ್ರಪಾಟೀಲರ ಮೇಲೆ......

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ಎಲ್ಲರೂ ಕೂತುಕೊಳ್ಳಿ

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಒಬ್ಬೊಬ್ಬರಿಗೂ ಚೂರಿ ಹಾಕುವುದೇ ನಿಮ್ಮ ಕೆಲಸ.

ಶ್ರೀ ಎಂ. ಮಹದೇವ್:- ಇವತ್ತು ನೀವು ಅವಿಶ್ವಾಸ ನಿರ್ಣಯವನ್ನು ಯಾರ ಮೇಲೆ ತಂದಿದ್ದೀರಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ತಾಕತ್ತಿದ್ದರೆ ಬಂದು ಓಟು ಹಾಕಿ. ಸುಮ್ಮನೆ ಏತಕ್ಕೆ ಮಾತನಾಡುತ್ತೀರಿ?

ಶ್ರೀ ಆರ್.ಎನ್. ನಾಯಕ್:-ತಾಕತ್ತಂತೆ. ನೀವೇನು ಪೈಲ್ವಾನರೇನ್ರಿ?

ಶ್ರೀ ರಾಮಕೃಷ್ಣ ಹೆಗಡೆ:- ಅವಿಶ್ವಾಸ ನಿರ್ಣಯವನ್ನು ತಂದಿದ್ದಕ್ಕಾಗಿ ಆಡಳಿತ ಪಕ್ಷದವರು ನಮಗೆ ಉಪಕೃತವಾಗಬೇಕು. ಕನಿಷ್ಟಪಕ್ಷ ಓಟು ಹಾಕುವ ಸಂದರ್ಭದಲ್ಲಾದರೂ ಅವರು ಯುನೈಟ್ ಆಗುತ್ತಾರೆ.

ಶ್ರೀ ಆರ್.ಎನ್. ನಾಯಕ್:- ಇದನ್ನು ನೋಡಿದರೆ ತಮಗೆ ಏನೋ ತೊಂದರೆಯಾಗಿದೆ ಅನಿಸುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ:- ನಮಗೆ ಯಾವುದೇ ತೊಂದರೆಯೂ ಇಲ್ಲವೇ ಇಲ್ಲ. ಮಾನ್ಯ ಅಧ್ಯಕ್ಷರೇ, ಮಾನ್ಯ ವೀರೇಂದ್ರಪಾಟೀಲರ ಬಗ್ಗೆ ಇವರಿಗೆಲ್ಲಾ ಇಷ್ಟೊಂದು ಅಭಿಮಾನ, ಒಳ್ಳೆಯ ಅಭಿಪ್ರಾಯ ಇದ್ದರೆ ರಾಜೀವ್‌ಗಾಂಧಿಯವರು ವಿಮಾನ ನಿಲ್ದಾಣದಲ್ಲಿ ಅವರನ್ನು ಡಿಸ್‌ಮಿಸ್ ಮಾಡುವಾಗ, ಒಬ್ಬ ಮುಖ್ಯಮಂತ್ರಿಯನ್ನು ಡಿಸ್‌ಮಿಸ್ ಮಾಡುವಾಗ ಏತಕ್ಕೆ ಬಾಯಿಮುಚ್ಚಿಕೊಂಡು ಕುಳಿತಿದ್ದಿರಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಆಗ ಒಬ್ಬರಿಗೂ ಬಾಯಿ ಮಾಡುವುದಕ್ಕಾಗಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ:- ಆಗ ಏಕೆ ಅವರಿಗೆ ಬೆಂಬಲ ಕೊಡಲಿಲ್ಲ?

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಅಧ್ಯಕ್ಷರೇ, ಇವರು ಯಾರ ಪರ, ಯಾವ ಘಳಿಗೆಯಲ್ಲಿ ಏನು ಆಗುತ್ತದೆ, ಎಂದು ಗೊತ್ತೇ ಆಗುತ್ತಿಲ್ಲ; ಇವರು ನಿಂತುಕೊಳ್ಳುವುದು; ಯಾರ ಪರ ಎಂದು ಗೊತ್ತೇ ಆಗುತ್ತಿಲ್ಲ. ರಾಜ್ಯದ ಮರ್ಯಾದೆ ಹೋಗುತ್ತದೆ. ಬಣ ಬದಲಾವಣೆ ಮಾಡಿಕೊಂಡು ವರ್ಷಕ್ಕೆ ಒಬ್ಬೊಬ್ಬ ಮುಖ್ಯಮಂತ್ರಿಗಳನ್ನು ಬೀದಿಗೆ ಹಾಕುತ್ತಿದ್ದಾರೆ. ನಾಚಿಕೆ, ಮಾನ ಇಲ್ಲ ಇವರಿಗೆ; ಏನು ಮಾತನಾಡುತ್ತಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಯಾರು ಅಧಿಕಾರ ಕೊಡುತ್ತಾರೆ, ಅವರ ಪರವಾಗಿ ಇವರೆಲ್ಲಾ

ಶ್ರೀ ಎಂ. ಮಹದೇವ:- ನೀವು ಅವಿಶ್ವಾಸ ನಿರ್ಣಯವನ್ನು ಸರ್ಕಾರದ ಮೇಲೆ ತಂದಿದ್ದರೆ. ಸರ್ಕಾರದ ತಪ್ಪುಒಪ್ಪುಗಳ ಬಗ್ಗೆ ಮಾತನಾಡಿ, ಬೇಡ ಎನ್ನುವುದಿಲ್ಲ. ಆದರೆ ಈ ಉದ್ದೇಶವನ್ನು ಬಿಟ್ಟು ವೀರೇಂದ್ರಪಾಟೀಲ್‌ರ ತೇಜೋವಧೆಯನ್ನು ಮಾಡುವುದಕ್ಕೆ ಮತ್ತು ಇವರ ವರ್ಚಸ್ಸನ್ನು ಬೆಳೆಸಿಕೊಳ್ಳುವುದಕ್ಕೆ ಮಾತನಾಡುವುದೆಂದರೆ ಇದು ಖಂಡನೀಯ. ಮೂರೂವರೆ ವರ್ಷಗಳ ಕಾಲ ಏನು ಮಾಡುತ್ತಿದ್ದೀರಿ? ಈಗ ಜ್ಞಾಪಕಕ್ಕೆ ಬಂತೇ, ಆಗಲೇ ಇದನ್ನು ಹೇಳಬಹುದಿತ್ತು. 5 ವರ್ಷಗಳ ನಂತರ ಜನತೆಯ ಮುಂದೆ ಹೋದಾಗ ಹೇಳಲಿ ಅವರು ಅದನ್ನು ಬಿಟ್ಟು ಈಗ ಸದನವನ್ನು ಏಕೆ ದುರುಪಯೋಗ ಮಾಡಿಕೊಳ್ಳಬೇಕು?

ಶ್ರೀ ಟಿ.ಎಂ. ಮಂಜುನಾಥ್:- ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಪ್ರಸ್ತಾವನೆ ಮಾಡಿದ್ದೆ. 1989ರಲ್ಲಿ ಚುನಾವಣೆ ನಡೆಯುವಂತಹ ಕಾಲದಲ್ಲಿ ಇಬ್ಬರು ಧೀಮಂತ ವ್ಯಕ್ತಿಗಳ ನಡುವೆ ಚುನಾವಣೆ ನಡೆಯಿತು. ಅವರು ಸನ್ಮಾನ್ಯ ವೀರೇಂದ್ರಪಾಟೀಲ್ ಮತ್ತು ಸನ್ಮಾನ್ಯ ರಾಮಕೃಷ್ಣಹೆಗಡೆಯವರ ನಡುವ ನಡೆಯಿತು. ಈ ಚುನಾವಣೆ ನಡೆದಂತಹ ಕಾಲದಲ್ಲಿ ಜನರು ತೀರ್ಮಾನ ಕೊಟ್ಟಿದ್ದಾರೆ. ಆದಕ್ಕೆ ಈಗ ನಾನು ಕಳಕಳಿಯ ಪ್ರಾರ್ಥನೆ ಮಾಡುತ್ತೇನೆ. ತಾವು ಇವತ್ತು ನಮ್ಮ ರಾಜ್ಯದ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯವನ್ನು ತಂದಿದ್ದೀರಿ; ಆದುದರಿಂದ ತಾವು ದಯಮಾಡಿ ತಮ್ಮ ವಿಚಾರಗಳನ್ನು ನಮ್ಮ ಗಮನಕ್ಕೆ ತಂದರೆ ನಮಗೆ ಸಹಾಯವಾಗುತ್ತದೆ. ಆದಕ್ಕೋಸ್ಕರ ನಮ್ಮಲ್ಲಿ ಏನಾದರೂ ಲೋಪದೋಷಗಳು ಇದ್ದರೆ ತಿಳಿಸಿ ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ:- ನೀವು ರಾಜೀನಾಮೆಯನ್ನು ಕೊಡಬೇಕು.

ಶ್ರೀ ಟಿ.ಎಂ. ಮಂಜುನಾಥ್:- ರಾಜೀನಾಮೆಯನ್ನು ಕೊಡುವಂತಹ ಸಂದರ್ಭ ಬಂದಾಗ ನಮ್ಮ ಆತ್ಮಸಾಕ್ಷಿಗೆ ಅದು ಸರಿಯೆಂದು ಕಂಡುಬಂದಾಗ, ನಾವು ಹಿಂದುಮುಂದು ನೋಡುವುದಿಲ್ಲ ಮತ್ತು ಯಾರಿಂದಲೂ ಪಾಠ ಕಲಿತುಕೊಳ್ಳಬೇಕಾಗಿಲ್ಲ.

ಶ್ರೀ ವಾಟಾಳ್‌ನಾಗರಾಜ್:- ಮಂಜುನಾಥ್‌ರವರು, ಈಗಾಗಲೇ ಎರಡು ಬಾರಿ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಅವರು ಹೆದರುವುದಿಲ್ಲ, ಮತ್ತೆ 3ನೇ ಸಾರಿ ರಾಜಿನಾಮೆ ಕೊಡಬಹುದು.

ಶ್ರೀ ಟಿ.ಎಂ. ಮಂಜುನಾಥ್:- ಅದನ್ನು ನಾನು ಹೇಳಿದ್ದೆನಲ್ಲಾ, ನಮ್ಮ ವಾಟಾಳ್‌ನಾಗರಾಜು ಅವರಿಗೆ ಮಾತನಾಡುವುದಕ್ಕೆ ಸಮಯ ಸಂದರ್ಭ ಏನೂ ಇಲ್ಲ. ಹಿರಿಯರಾದಂತಹ ಶ್ರೀ ರಾಮಕೃಷ್ಣ ಹೆಗಡೆಯವರಲ್ಲಿ ನಾನು ಪ್ರಸ್ತಾವನೆ ಮಾಡುವುದಿಷ್ಟೇ; ತಮ್ಮ ಪಕ್ಷಗಳಿಗಿಂತಲೂ ವಿರೋಧಪಕ್ಷಗಳ ಹೆಚ್ಚಿನ ಜವಾಬ್ದಾರಿಯನ್ನು ಅರಿತುಕೊಂಡು ಹೋಗುತ್ತಿರುವಂತಹ ಸನ್ನಿವೇಶ, ಸಂದರ್ಭ ಇರುವಾಗ ಎರಡು ಪಕ್ಷಗಳೂ ಒಂದಾಗಿ ಈವತ್ತು ನಡೆಯುತ್ತಿಲ್ಲ. ಇಂತಹ ಸಂದರ್ಭದಲ್ಲಿ ನಮ್ಮ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯವನ್ನು ತಂದಿದ್ದೀರಿ ಅದರ ಬಗ್ಗೆ ಪ್ರಸ್ತಾವನೆ ಮಾಡಲಿ ನಾವು ಬೇಡ ಎನ್ನುವುದಿಲ್ಲ ಅದು ಬಿಟ್ಟು ಇಲ್ಲಸಲ್ಲದ್ದನ್ನು ಮಾತನಾಡಿ ಗದ್ದಲಕ್ಕೆ ಅವಕಾಶ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ:-ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರಾದಂತಹ ಮಂಜುನಾಥ್ ಅವರು ಕಳೆದ ಚುನಾವಣೆಯನ್ನು ನೆನಪು ಮಾಡಿದರು. ಅದರ ಸಂಪೂರ್ಣ ನೆನಪು ನನಗೆ ಇದೆ. ಶ್ರೀ ವೀರೇಂದ್ರ ಪಾಟೀಲ್‌ರವರ ನೇತೃತ್ವದಲ್ಲಿ ಕಾಂಗ್ರೆಸ್ ಪುನಃ ಅಧಿಕಾರಕ್ಕೆ ಬಂತು. ಅದನ್ನು ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅವರ ಗತಿ ಏನಾಯಿತು ಎಂಬುದನ್ನು ಹೇಳಿ. ಶ್ರೀ ವೀರೇಂದ್ರ ಪಾಟೀಲರು ರಾಜೀನಾಮೆ ಕೊಡಲಿಲ್ಲ. ಅವರು ನನಗೆ ಪಕ್ಷದ ಬೆಂಬಲವಿದೆ ಎಂದು ಹೇಳಿದರು. ಆಗ ನೀವು ಅವರಿಗೆ ಬೆಂಬಲ ಸೂಚಿಸಿದ್ದೀರಾ? ಇವತ್ತು ಅವರ ಪರವಾಗಿ ವಾದ ಮಾಡುತ್ತಿದ್ದೀರಲ್ಲಾ, ಆಗ ವೀರೇಂದ್ರಪಾಟೀಲರಿಗ ಏಕೆ ಬೆಂಬಲ ಕೊಡಲಿಲ್ಲ?

5.25 ಪಿ.ಎಂ.

(ಗೊಂದಲ)

ಶ್ರೀ ಎ.ಕೆ. ಅನಂತ ಕೃಷ್ಣ:-ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

MR. SPEAKER:- What is your Point of order ?

ಶ್ರೀ ರಾಮಕೃಷ್ಣಹೆಗಡೆ:- ನೀವಲ್ಲಾ ಆಗ ಹೇಳಿದ್ದರೆ, ವೀರೇಂದ್ರಪಾಟೀಲರು ಹೋಗುತ್ತಿರಲಿಲ್ಲ.

SRI A.K. ANANTHAKRISHNA:- I do not want any direction from Mr. Hegde. I am here to be directed by the Chair.

ಅಧ್ಯಕ್ಷರು:- ನಿಮ್ಮದು ಏನು ಪಾಯಿಂಟ್ ಆಫ್ ಆರ್ಡರ್ ಎಂಬುದನ್ನು ಹೇಳಿ.

(INTERRUPTIONS)

SRI A.K. ANANTHAKRISHNA:- Sir, I have raised a Point of Order.

(INTERRUPTIONS)

ಅಧ್ಯಕ್ಷರು:- ಏನು ಪಾಯಿಂಟ್ ಆಫ್ ಆರ್ಡರ್ ಎಂಬುದನ್ನು ಹೇಳಿ?

SRI A.K. ANANTHAKRISHNA:- The Point of Order is, the issue before this House, the subject before this House, is the No Confidence Motion against the present Government. The discussion should confine itself only to the purview of this Resolution.

(INTERRUPTIONS)

ಶ್ರೀ ಎ.ಕೆ. ಅನಂತಕೃಷ್ಣ:- ಇದನ್ನು ಮಾಡಬೇಕಾಗಿದ್ದರೆ ಇಂದಿನ ಸರ್ಕಾರದ ವಿರುದ್ಧ ಅವರು ಏನೇನು ಹೇಳಬೇಕಾಗಿದೆ ಅದನ್ನು ಹೇಳುವುದಕ್ಕೆ ಸಂಪೂರ್ಣ ಅಧಿಕಾರ ಇದೆ. ಅದಕ್ಕೆ ನಾವು ಅಡ್ಡ ಬರುತ್ತಾ ಇಲ್ಲ. ಮಾನ್ಯ ಹೆಗಡೆಯವರು....

(INTERRUPTIONS)

ಶ್ರೀ ಎ.ಕೆ. ಅನಂತಕೃಷ್ಣ:-ನೀವು ಸಾಕಷ್ಟು ಪ್ರಚೋದನೆ ಮಾಡುತ್ತಿದ್ದೀರಿ. ನಾವು ಕೇಳುತ್ತಾ ಕುಳಿತಿದ್ದೇವೆ.

(ಗೊಂದಲ)

ಶ್ರೀ ಎಂ.ನಾರಾಯಣಸ್ವಾಮಿ:-ಭಾಷಣ ಮಾಡತಕ್ಕವರು ನಾವು.

SRI C. BYRE GOWDA:- Afterall he is a suspended Member!

SRI A.K. ANANTHAKRISHNA:- This issue before this House is a very serious matter.

SRI P.G.R. SINDHIA:-What is the Point of Order?

(INTERRUPTIONS)

SRI R.V DESHPANDE:- Whether a suspended Member can raise a Point of Order?

MR.SPEAKER:- ಅನಂತಕೃಷ್ಣರವರೇ, ಕುಳಿತುಕೊಳ್ಳಿ.

ಶ್ರೀ ಎ.ಕೆ. ಅನಂತಕೃಷ್ಣ:- ನಾನು ಹೇಳುವುದಕ್ಕೇ ಬಿಡುತ್ತಿಲ್ಲ ನಾನು ಈಗ ಏನು ಮಾಡಬೇಕು?

MR. SPEAKER:- There is no Point of Order.

SRI A.K. ANANTHAKRISHNA:- There is a Point of Order. You are not allowing me to say to what I am saying. The Resolution moved by the Leader of the Opposition may be passed. The Resolution moved by the Leader of the Opposition should confine itself to the No Confidence on the present Government, moved by the Leader of Opposition and the discussion should also be within the purview of that only and not to bring about issues which do not concern within one year or nine months. What

Mr. Veerendra Patil did at that time is a matter which has been closed a long ago for which adequate reply has been given. Now the point is, Mr. Hegde not only wants to tarnish the image of Mr. Veerendra Patil who is not present in this House but he wants to call us dissidents.

ಅಧ್ಯಕ್ಷರು:- ತಾವು ಕುಳಿತುಕೊಳ್ಳಿ; ವಾಟಾಳ್‌ನಾಗರಾಜ್‌ರವರೇ, ತಾವೂ ಕುಳಿತುಕೊಳ್ಳಿ.

ಶ್ರೀ ವಾಟಾಳ್‌ನಾಗರಾಜ್:-ತಾವು ತೀರ್ಪು ಕೊಟ್ಟಮೇಲೆ, ಅವರು ಕುಳಿತುಕೊಳ್ಳಲೇ ಇಲ್ಲ.

ಅಧ್ಯಕ್ಷರು:- ಅನಂತ ಕೃಷ್ಣರವರೇ, ತಾವು ಕುಳಿತುಕೊಳ್ಳಿ.

SRI A.K. ANANTHAKRISHNA:- I must be allowed to speak.

ಅಧ್ಯಕ್ಷರು:- ತಮಗೆ ಛಾನ್ಸ್ ಬಂದಾಗ ಕೊಡುತ್ತೇನೆ; ಏಕೆ ಈ ರೀತಿ ಮಾಡುತ್ತೀರಿ?

ಶ್ರೀ ಎ.ಕೆ. ಅನಂತಕೃಷ್ಣ:- ಈ ವಿಷಯವನ್ನು ಬಿಟ್ಟು ಬೇರೆ ವಿಷಯವನ್ನು ಮಾತನಾಡುವುದಕ್ಕೆ ಅವರಿಗೆ ಅರ್ಹತೆ ಇಲ್ಲ ಎನ್ನುವ ಮಾತನ್ನು ತಮ್ಮ ಮುಂದೆ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು:- ಅಲ್ಲ, ಅರ್ಹತೆ ಎಂದು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ:- ಅವರು ಅನಾವಶ್ಯಕವಾಗಿ ಪ್ರಚೋದನೆ ಮಾಡಿ ಗೊಂದಲ ಮಾಡಿ ಇಲ್ಲಿ ಇಲ್ಲದಿರುವ ಸದಸ್ಯರ ಬಗ್ಗೆ ಮಾತನಾಡಿ.. ಮೇಲೆ ಆರೋಪ ಮಾಡಿ. ದಿವಂಗತ ರಾಜೀವ್‌ಗಾಂಧಿರವರ.

(ಗೊಂದಲ)

ಅಧ್ಯಕ್ಷರು:- ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:- ನಿಮ್ಮ ಲೀಡರ್ ಮಾತನಾಡುವುದಕ್ಕೆ ಮೊದಲು ಏಕೆ ಇದೆಲ್ಲಾ? ಜಾಲಪ್ಪನವರೇ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ:-ಮಾನ್ಯ ಅನಂತಕೃಷ್ಣರವರು ವೀರೇಂದ್ರಪಾಟೀಲ್ ಅವರ ಕಾಲದಲ್ಲಿ ಡಿಸಿಡೆಂಟ್, ಬಂಗಾರಪ್ಪನವರ ಕಾಲದಲ್ಲಿ ಡಿಸಿಡೆಂಟ್ ಮೊಯಿಲಿಯವರ ಕಾಲದಲ್ಲೂ ಡಿಸಿಡೆಂಟ್

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ:- ನೀವು ಚಾಕುಚೂರಿ ಸಂಸ್ಕೃತಿಯವರು ಎಂದು ಹೇಳಿ ಸರ್ಟಿಫಿಕೇಟ್ ಕೊಟ್ಟಾಗಿದೆ.

ಅಧ್ಯಕ್ಷರು:- ನಾನು ಅದಕ್ಕೆ ಏನು ರೂಲಿಂಗ್ ಕೊಡಲಿಕ್ಕೆ ಆಗುತ್ತದೆ? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರಾಯರೆಡ್ಡಿಯವರೇ, ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣಹೆಗಡೆ:- ಮಾನ್ಯ ಅನಂತ ಕೃಷ್ಣರವರು ಅನಾವಶ್ಯಕವಾಗಿ ಗರಮ್ ಆಗುತ್ತಿದ್ದಾರೆ. ಬಹುಶಃ ನಾನು ಹೇಳುವುದು ಅವರಿಗೆ ಕೇಳಿಸುತ್ತಿಲ್ಲವೋ ಅಥವಾ ಅವರ ತಲೆಯಲ್ಲಿ ಬೇರೆ ಏನಾದರೂ ಗುಂಗು ಇದೆಯೋ ನನಗೆ ಗೊತ್ತಿಲ್ಲ. ಮಾನ್ಯ ವೀರೇಂದ್ರಪಾಟೀಲರ ಬಗ್ಗೆ ನಾನು ಒಬ್ಬ ಮಾಜಿ ಮುಖ್ಯಮಂತ್ರಿಯಾಗಿ ಕಳೆದ ಮೂರೂವರೆ ವರ್ಷದಲ್ಲಿ ಈ ರಾಜ್ಯವನ್ನು ಆಳಿದಂಥ ಒಬ್ಬ

ವ್ಯಕ್ತಿ ಎಂದು ಮಾತನಾಡುತ್ತಿದ್ದೇನೆ. ಮತ್ತು ಮಾನ್ಯ ವೀರೇಂದ್ರಪಾಟೀಲರ ಬಗ್ಗೆ ನನಗೆ ಯಾರೇನೂ ತಿಳಿಸಬೇಕಾಗಿಲ್ಲ. ನಮ್ಮ ಸಂಬಂಧ ಹೇಗಿತ್ತು, ರಾಜಕೀಯ ಮತ್ತು ವೈಯಕ್ತಿಕವಾದ ಸ್ನೇಹಸಂಬಂಧ ಇಡೀ ಪ್ರಪಂಚಕ್ಕೆ ಗೊತ್ತಿದೆ. ಆದ್ದರಿಂದ ಅವರ ಬಗ್ಗೆ ನೀವೇನೂ ಸರ್ಟಿಫಿಕೇಟ್ ಕೊಡಬೇಕಾದ್ದಿಲ್ಲ. ಆದ್ದರಿಂದ ನನ್ನ ಮನಸ್ಸಿನಲ್ಲಿರತಕ್ಕಂಥ ನೋವನ್ನು ನಾನು ಹೇಳಿದೆ. ಅದೇ ಮತ್ತೊಂದು ನೋವನ್ನು ನಾನು ಹೇಳಿದೆ, ಆ ನೋವು ನಿಮಗೆ ಇರಬೇಕಾಗಿತ್ತು;ಅದು ನಿಮಗೆ ಇಲ್ಲ ಎಂದು. ಅವರನ್ನು ಯಾವುದೇ ಕಾರಣವಿಲ್ಲದೆ ತೆಗೆದುಹಾಕಿದಾಗ ಎಷ್ಟು ಜನ ಅಲ್ಲಿದ್ದವರು. ಕೇವಲ ಉಳಿದಂಥವರು ನಾಲ್ಕುಜನರು ತಾನೇ; ರಾಜಶೇಖರಮೂರ್ತಿಯವರು ಮತ್ತು 3-4 ಜನ. 12ಜನ ಎಂದು ಇಟ್ಟುಕೊಳ್ಳಿ. ಈ 12ಜನರಲ್ಲಿ ಇವತ್ತು ಇರುವವರು 4ಜನ. ಎಲ್ಲಿಹೋದರು ಎಲ್ಲಾ? ಅವರನ್ನು ಯಾವ ಕಾರಣಕ್ಕಾಗಿ...

(ಗೊಂದಲ)

ಶ್ರೀ ಪಿ.ಜಿ.ಆರ್ ಸಿಂಧ್ಯ:- ಯಾರು ಇವರೆಲ್ಲಾ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಇವರಿಗೆ ಬೇರೆ ಉದ್ಯೋಗ ಇಲ್ಲವೇ? ಮಾತನಾಡುವಾಗ ಸರಿಯಾಗಿ ಯೋಚನೆ ಮಾಡಿ ಮಾತನಾಡಬೇಕು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇವರು ತಮ್ಮ ಕ್ಷೇತ್ರಕ್ಕೆ ಹೋದರೆ ಇವರ ಮಾತಗಳನ್ನು ಕೂಡ ಕೇಳುವುದಿಲ್ಲ.

ಶ್ರೀ ಕರಿಯಣ್ಣ:- ಯಾರಾದರೂ ಒಬ್ಬರು ಮಾತನಾಡಿದರೆ ಸರಿ. ನೀವು ಅವರಿಗೆ ಲೀಡರ್ ಆದಾಕ್ಷಣಕ್ಕೆ ನಮಗೆ ಲೀಡರೇ?

(ಗೊಂದಲ)

ಅಧ್ಯಕ್ಷರು:- ತಾವು ಕುಳಿತುಕೊಳ್ಳಿ, ಮಾನ್ಯ ಸಿಂಧ್ಯರವರೇ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ....

ಶ್ರೀ ಆರ್.ಎಸ್. ನಾಯಕ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯರವರು ಎಂದು ತಮ್ಮ ಭಾಷಣದಲ್ಲಿ ಬಳಸಿದ್ದಾರೆ.ಅದನ್ನು ತಾವು ನೋಡಬೇಕು. ಅದನ್ನು ಕಡತದಿಂದ ತೆಗೆಯಬೇಕು. ಏತಕ್ಕೆಂದರೆ ಅದು ಕಡತದಲ್ಲಿ ಹೋಗಿರುತ್ತದೆ. ಅದನ್ನು ಸ್ವಲ್ಪ ಪರೀಕ್ಷೆ ಮಾಡಬೇಕು. ಅಸಭ್ಯವರ್ತನೆ; ಅವರು ಎಂಥಾ ಸಂಸ್ಕಾರವಂತರು.... ಅದಕ್ಕೆ ಅವರು ಕ್ಷಮಾಪಣೆ ಕೇಳಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಿಯಮಾವಳಿಗಳ ಪ್ರಕಾರವಾಗಿ ಯಾವುದೇ ಸದಸ್ಯರು ಮಾತನಾಡಲಿಕ್ಕೆ ಹಕ್ಕಿದೆ. ಇದಕ್ಕೆ ತಾವು ಅವಕಾಶ ಕೊಡಬೇಕು. ಎಷ್ಟೊತ್ತು ಮಾತನಾಡಬೇಕು? ಏನು ಮಾತನಾಡಬೇಕು, ಹೇಗೆ ಮಾತನಾಡಬೇಕು, ಪಾರ್ಲಿಮೆಂಟಿನ ಚೌಕಟ್ಟಿನ ಒಳಗಡೆ ಯಾವುದೇ ರೀತಿಯಲ್ಲಿ ಮಾತನಾಡಲಿಕ್ಕೂ ಸಹಿತ ನಮಗೆ ಅವಕಾಶವಿದೆ. ನಾನು ಈ ಗೌರವಾನ್ವಿತ ಸದಸ್ಯರುಗಳನ್ನು ಕೇಳುತ್ತಿದ್ದೇನೆ ಇದುವರೆಗೂ ಸಹಿತ ಇವರು ಯಾವುದೇ ರೀತಿಯ ಮಾತುಗಳನ್ನು ಹೇಳದೆ ಇರತಕ್ಕಂಥವರು ಮಾನ್ಯ ರಾಮಕೃಷ್ಣಹೆಗಡೆಯವರು ಬಂದು ಮಾತನಾಡುತ್ತಾರೆಂದರೆ ಏತಕ್ಕೆ ಇವರಿಗೆ ಉರಿ ಎಂದು ನನಗಂತೂ ಅರ್ಥವಾಗುತ್ತಿಲ್ಲ. ಈಗ ಹೌಸ್ ಆರ್ಡರ್‌ನಲ್ಲಿ ಇಲ್ಲ. ಕಾರಣ, ಯಾವುದೇ

ಸದಸ್ಯರು ಮಾತನಾಡುವುದಕ್ಕೆ ಅವಕಾಶ ಇಲ್ಲ, ಇವರೆಲ್ಲರೂ ಎದ್ದುನಿಂತು ಮಾತನಾಡುತ್ತಾರೆಂದರೆ ಹೌಸ್ ಎಲ್ಲಿ ಆರ್ಡರ್‌ನಲ್ಲಿರುತ್ತದೆ?. ತಾವು ದಯವಿಟ್ಟು ನನಗೆ ಹೇಳಬೇಕು. ನನಗೆ ಮಾತನಾಡುವುದಕ್ಕೆ ಅಲೋ ಮಾಡುತ್ತೀರಾ? ಅವರು ಎದ್ದುನಿಂತುಕೊಂಡು ಏನೋ ಹೇಳುತ್ತಿದ್ದಾರೆ. ಯಾರದ್ದು ರೆಕಾರ್ಡನಲ್ಲಿ ಹೋಗುತ್ತಿದೆ, ಏನಾಗುತ್ತಿದೆ, ದಯವಿಟ್ಟು ಹೇಳಿ. ಏತಕ್ಕೆ ಇವರು ಹೆಗಡೆಯವರು ಮಾತನಾಡುವುದನ್ನು ಅಡಚಣೆ ಮಾಡುತ್ತಿರುವುದು? ಅನ್‌ಪಾರ್ಲಿಮೆಂಟರಿ ಏನಾದರೂ ಹೇಳಿದ್ದಾರಾ? ಇವರಿಗೆ ಏತಕ್ಕೆ ಉರಿ ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಜಿ.ಎಂ. ಕಾನಡೆ: ಎಂದು ಹೇಳಿದ್ದಾರೆಂದರೆ ಏತಕ್ಕೆ ನಾವು ಕೂಡಬೇಕು? ಅವರ ಹತ್ತಿರ ಹೇಳಿಸಿಕೊಳ್ಳುವುದಕ್ಕೇನೆ ನಾವು ಇಲ್ಲಿ ಇರುವುದು? ಅವರು ಒಬ್ಬರಿಗೇನೆ ಸಿಟ್ಟು ಬರುವುದು? ಕಡತದಲ್ಲಿದೆ ನೋಡಿ; ಎಂದು ಹೇಳಿದ್ದಾರೆ. ಅದಕ್ಕೆ ಅವರು ಕ್ಷಮೆ ಕೇಳಬೇಕು.

ಅಧ್ಯಕ್ಷರು:- ನಾನು ಅದನ್ನು ಪರಿಶೀಲನೆ ಮಾಡುತ್ತಿದ್ದೇನೆ.

ಶ್ರೀ ಜಿ.ಎಂ.ಕಾನಡೆ:- ಎಂದು ಏತಕ್ಕೆ ಹೇಳಿದರು? ಕಡತ ತರಿಸಿ ನೋಡಿ. ಅವರು ಹೇಳಿ ಬಿಡುತ್ತಾರೆ ನೀವೆಲ್ಲರೂ ಕೇಳಿಬಿಡುತ್ತೀರಿ.

ಅಧ್ಯಕ್ಷರು:-ತಾವು ಈಗ ಏನು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್:- ಅವಮಾನವಾಗುತ್ತದೆ. ಅದನ್ನು ದಯವಿಟ್ಟು ಕಡತದಿಂದ ತೆಗೆಯಿರಿ.

ಅಧ್ಯಕ್ಷರು:- ನಾಗರಾಜು ಅವರೆ, ನಾನು ನಿಮ್ಮನ್ನು ಕರೆದಿಲ್ಲ, ತಾವು ಮಾತನಾಡಬಾರದು. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:-ತಾವು ಕುಳಿತುಕೊಳ್ಳಿ. ಅವರ ಭಾಷಣದಲ್ಲಿ ಏನಾದರೂ ಅನ್‌ಪಾರ್ಲಿಮೆಂಟರಿ ಶಬ್ದಗಳು ಇದ್ದರೆ ಕಡತ ತರಿಸಿ ನೋಡಿ ಕಡತದಿಂದ ತೆಗೆದುಹಾಕುತ್ತೇನೆ.

(ಗೊಂದಲ)

ಅಧ್ಯಕ್ಷರು:- ಅನ್‌ಪಾರ್ಲಿಮೆಂಟರಿ ಏನಾದರೂ ಇದ್ದರೆ ಪರಿಶೀಲನೆ ಮಾಡುತ್ತೇನೆ. ಪದೇಪದೇ ಹೀಗೆ ಮಾಡಿದರೆ ಬೇರೆ ಉತ್ತರ ಕೊಡಬೇಕಾಗುತ್ತದೆ. ಎಲ್ಲರೂ ಕುಳಿತುಕೊಳ್ಳಿ; ಏನು ಮಾಡಬೇಕೆಂದು ನನಗೂ ಗೊತ್ತಿದೆ. ಕುಳಿತುಕೊಳ್ಳಿ, ನೀವು ಹೇಳಿದರಲ್ಲಾ ಆಯಿತು

(ಗೊಂದಲ)

ಶ್ರೀ ರಾಮಕೃಷ್ಣಹೆಗಡೆ:- ಮಾನ್ಯ ಅಧ್ಯಕ್ಷರೇ ತಾವು ನನ್ನ ಕಡೆಗೆ ನೋಡಿ. ಇವರು ಏನಾದರೂ ಅನ್‌ಪಾರ್ಲಿಮೆಂಟರಿ ಶಬ್ದ ಉಪಯೋಗಿಸಿದರೆ ಅದನ್ನು ಕಡತದಿಂದ ತೆಗೆದು ಹಾಕುತ್ತೇನೆಂದು ಹೇಳಿದಿರಿ. ನಾನು ಇಲ್ಲಿಯವರೆಗೆ ಉಪಯೋಗಿಸಿದ್ದು ವೀರೇಂದ್ರಪಾಟೀಲರು, ಅವರನ್ನು ಏತಕ್ಕೆ ತೆಗೆದಿರಿ ಎಂಬ ಶಬ್ದಗಳನ್ನು. ವೀರೇಂದ್ರಪಾಟೀಲರು ಅನ್‌ಪಾರ್ಲಿಮೆಂಟರಿಯೇ? ಹಾಗಿದ್ದರೆ ತೆಗೆದು ಹಾಕಿ. ಅದೇನಾದರೂ ಅನ್‌ಪಾರ್ಲಿಮೆಂಟರಿ ಆಗಿದ್ದರೆ ತೆಗೆದುಹಾಕಿ, ಶಾಶ್ವತವಾಗಿ ತೆಗೆದುಹಾಕಿ ಪರವಾಗಿಲ್ಲ. ಇವತ್ತು ಒಂದೇ ದಿವಸ ಅಲ್ಲ.

ಶ್ರೀ ಆರ್. ಎನ್. ನಾಯಕ್ :- ಸಿಂಧ್ಯರವರು ತಮ್ಮ ಭಾಷಣದಲ್ಲಿ ಹೇಳಿದರು. ಭಾಷೆ ಬಗ್ಗೆ ಬಹಳ ಅಭಿರುಚಿ ಅವರಿಗೆ....

ಅಧ್ಯಕ್ಷರು : ಕುಳಿತುಕೊಳ್ಳಿ. ನೀವು ಪದೇಪದೇ ಎದ್ದರೆ ಅವರೂ ಮಾತನಾಡುತ್ತಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಎಲ್ಲಾ ಕಡೆ ನೋಡಿ ಹೇಳುತ್ತೇನೆ; ಕುಳಿತುಕೊಳ್ಳಿ. ಅವರು ಭಾಷಣ ಮಾಡಲಿ, ನಂತರ ಹೇಳುವುದಕ್ಕೆ ತಮಗೂ ಅವಕಾಶ ಇದೆ.

ಶ್ರೀ ರಾಮಕೃಷ್ಣ ಹೆಗಡೆ :- ಅನಂತಕೃಷ್ಣ ಮತ್ತಿತರ ಸ್ನೇಹಿತರು ಅವರ ಮನಸ್ಸಿನಲ್ಲಿರುವುದನ್ನು ಹೇಳಬೇಕೆಂದಿದ್ದಾರೆ. ಅದಕ್ಕಾದರೂ ಅವರಿಗೆ ಅವಕಾಶ ಕೊಡಿ ಆಳುವ ಪಕ್ಷಕ್ಕೆ ನನ್ನ ಪ್ರಶ್ನೆ ಇಷ್ಟೆ. ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿ ಸ್ಥಾನದಿಂದ ಹೋದರುದ ಅದಕ್ಕೆ ಕಾರಣ ಏನೆಂದು ಜನತೆಗೆ ಗೊತ್ತಾಗಬೇಕು.

ಆಮೇಲೆ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿ ಸ್ಥಾನದಿಂದ ಹೋದರು, ಅದಕ್ಕೆ ಏನು ಕಾರಣ? ಅದು ಚರ್ಚೆ ಆಗಬೇಕು. ಏಕೆಂದರೆ ಈ ರಾಜ್ಯದ ಆಗುಹೋಗುಗಳು ನಿಮ್ಮ ಕಾಂಗ್ರೆಸ್ (ಐ) ಪಕ್ಷದ ಒಂದೇ ಆಂತರಿಕ ವ್ಯವಹಾರ ಅಲ್ಲ.

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಧ್ಯಕ್ಷರೇ, ಬೊಮ್ಮಾಯಿಯವರು ಏನು ಮಾಡಿದರು, ದೇವೇಗೌಡರು ಏತಕ್ಕೆ ಪಾರ್ಟಿ ಬಿಟ್ಟರು ಎನ್ನುವುದನ್ನೂ ಕೇಳಬೇಕಾಗುತ್ತದೆ.

(ಗೊಂದಲ)

ಶ್ರೀ ರಾಮಕೃಷ್ಣಹೆಗ್ಡೆ :- ಮೂರು ವರ್ಷಗಳಲ್ಲಿ ಮೂರನೇ ಸರ್ಕಾರ ಹೋಗಬೇಕೆಂದರೆ, ಯಾವ ಕಾರಣದಿಂದ ಹೋಗುತ್ತಾರೆ? ಅದರ ಬಗ್ಗೆ ಜನರಿಗೆ ಉತ್ತರ ಕೊಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು :-ತಾವೆಲ್ಲರೂ ಕುಳಿತುಕೊಳ್ಳಿ. ಪದೇಪದೇ ಹೀಗಾದರೆ ಕಾರ್ಯಕಲಾಪ ಆಗುವುದಿಲ್ಲ. ಜಾಲಪ್ಪನವರೇ, ತಾವು ಕುಳಿತುಕೊಳ್ಳಿ.

ಶ್ರೀ ಆರ್. ಎಲ್. ಜಾಲಪ್ಪ :- ಬಂಗಾರಪ್ಪನವರಿಗೇ ಚಾಕು ಹಾಕಿದವರು ಇನ್ನು ಯಾರನ್ನು ತಾನೇ ಬಿಡುತ್ತಾರೆ? ನಿಮ್ಮನ್ನು ಬೆಳೆಸಿದ ಅವರಿಗೇ ಚೂರಿ ಹಾಕಿದ ನೀವು; ಇನ್ನು ಯಾರನ್ನು ಬಿಡುತ್ತೀರಿ ಪಾಪ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ :- ಇತಿಹಾಸದಲ್ಲೇ ಬರೆದಿರತಕ್ಕ ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಆವತ್ತಿನ ದಿವಸ..... ಅವರ ಉತ್ತರವನ್ನು ಇವರು ಒಂದು ವರ್ಷವಾದ ಮೇಲೆ..

(ಗೊಂದಲ)

ಅಧ್ಯಕ್ಷರು :- ಅವರು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಹೆಗಡೆಯವರೇ ಮಾತನಾಡಿ.

ಶ್ರೀ ರಾಮಕೃಷ್ಣಹೆಗ್ಡೆ :-ಮಾನ್ಯ ಅಧ್ಯಕ್ಷರೇ, ಅಲ್ಲಿ ಕುಳಿತಿರತಕ್ಕಂತಹ.....

(ಗೊಂದಲ)

ಶ್ರೀ ರಾಮಕೃಷ್ಣ ಹೆಗ್ಡೆ :- ಮುಗಿಯದ ಕತೆ ಯಾವುದು? ನಿಮ್ಮದು ಮುಗಿಯೋದಿಲ್ಲ. ಅಲ್ಲಿ ಕುಳಿತಿರತಕ್ಕ ಮಾನ್ಯ ಸದಸ್ಯರಿಗೆ ನನ್ನ ಮೇಲೆ ವಿಶೇಷವಾದ ಪ್ರೀತಿ ಇದೆ. ಅದು ನನಗೆ ಗೊತ್ತುಂಟು.

ಆದರೂ ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಬೇಕೋ ಬೇಡವೋ ಎಂದು ತಾವು ತೀರ್ಮಾನ ಮಾಡಬೇಕು. ಇನ್ನು ಮುಂದೆ ಯಾವುದಾದರೂ ಒಂದು ನನಗೆ ಅನಾವಶ್ಯಕವಾದ ಇಂಟರಪ್‌ಷನ್ ಬಂದರೆ ಅದನ್ನು ನಾನು ದಯವಿಟ್ಟು ಸಹಿಸುವುದಿಲ್ಲ. ಅದು ಆಗುವುದಿಲ್ಲ. ತಾವು ಏನು ತಿಳಿದುಕೊಂಡಿದ್ದೀರಿ? ಕಾಂಗ್ರೆಸ್ ಪಾರ್ಟಿ ಮೀಟಿಂಗ್‌ನಲ್ಲಿ ಮಾಡಿದಹಾಗೆ ಇಲ್ಲಿ ನೀವು ಮಾಡುವುದಕ್ಕಾಗುವುದಿಲ್ಲ. ಅನಾಗರೀಕ ವರ್ತನೆ ಮಾಡುವುದಕ್ಕಾಗುವುದಿಲ್ಲ ಇಲ್ಲಿ. ನಾಚಿಕೆ ಆಗಬೇಕು. ಯಾವ ರೀತಿ ವ್ಯವಹಾರ ಆಗುತ್ತಿದೆ ಇವತ್ತು.

(ಗೊಂದಲ)

ಅಧ್ಯಕ್ಷರು:- ತಾವೆಲ್ಲರೂ ಕುಳಿತುಕೊಳ್ಳಿ. ಈಗ ಸಭೆಯ ಕಾರ್ಯಕಲಾಪಗಳನ್ನು ನಡೆಸಬೇಕೋ, ಬಿಡಬೇಕೋ? ಈಗ ನಾನು ಮಾನ್ಯ ಹೆಗಡೆಯವರನ್ನು ಕರೆದಿದ್ದೇನೆ. ತಾವು ಪದೇ ಪದೇ ಹೀಗೆ ಮಾತನಾಡಿದರೆ ಅವರಿಗೆ ಮಾತನಾಡುವುದಕ್ಕೆ ಆಗುವುದಿಲ್ಲ. ತಾವು ಹೇಳುವುದೆಲ್ಲಾ ನನಗೆ ಗೊತ್ತಿದೆ. ಅವರು ಮಾತನಾಡಿದ ನಂತರ ತಮ್ಮ ನಾಯಕರು ಉತ್ತರ ಕೊಡುತ್ತಾರೆ. ತಮಗೆ ಅವಕಾಶ ಬಂದಾಗ ತಾವು ಹೇಳಿ. ಆದ್ದರಿಂದ ಅವರ ಭಾಷಣಕ್ಕೆ ತಾವು ಪದೇಪದೇ ಆಕ್ಷೇಪಣೆ ಎತ್ತಬಾರದು ಎಂದು ನಾನು ತಮಗೆ ಹೇಳುತ್ತೇನೆ.

ಶ್ರೀ ರಾಮಕೃಷ್ಣಹೆಗಡೆ:- ಮಾನ್ಯ ಅಧ್ಯಕ್ಷರೇ, ನಾನು ಯಾರ ಮೇಲೂ ಕೂಡ ಆಪಾದನೆ ಮಾಡಲಿಲ್ಲ.

SRI C.S. NADAGOWDA: Sir, I want to brief certain facts.

(ಗೊಂದಲ)

ಅಧ್ಯಕ್ಷರು: ಮಾನ್ಯ ನಾಡಗೌಡರೇ, ತಾವು ಕುಳಿತುಕೊಳ್ಳಿ. ನೀವು ಹೇಳಿದ್ದು .ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಗೊಂದಲ

(ಈ ಹಂತದಲ್ಲಿ ವಿರೋಧಪಕ್ಷದ (ಜನತಾದಳ) ಸದಸ್ಯರು ಧರಣಿ ಮಾಡಲು ಬಾವಿಯೊಳಗೆ ಬಂದರು)

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೇ, ನಾನು ನಿಂತಿದ್ದೇನೆ, ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಅಧ್ಯಕ್ಷರೇ, ಇದು ಕಾಂಗ್ರೆಸ್ ಪಕ್ಷಕ್ಕೆ ಗೌರವ ತರುವುದಿಲ್ಲ. ಅನಾಗರೀಕ ಸಂಸ್ಕೃತಿಯನ್ನು ರೌಡಿಸಂ ಅನ್ನು ತೋರಿಸುತ್ತಿದ್ದಾರೆ. ರಾಜ್ಯದ ಜನತೆ ನೋಡುತ್ತಿದ್ದಾರೆ. ಇವತ್ತು ನಾವೇನು ಅವಿಶ್ವಾಸ ನಿರ್ಣಯವನ್ನು ತಂದು ಪರಿಣಾಮಕಾರಿಯಾಗಿ ಯಾವುದೇ ಗದ್ದಲವಿಲ್ಲದೆ ಮಾತನಾಡುತ್ತಿದ್ದರೆ ಉದ್ದೇಶಪೂರ್ವಕವಾಗಿ ರಾಜಕೀಯ ಮಾಡತಕ್ಕ ರೀತಿಯಲ್ಲಿ ಕೆಲವರು ಮಾತನಾಡುತ್ತಿದ್ದಾರೆ. ಇದು ರಾಜ್ಯಕ್ಕೆ ದ್ರೋಹ; ಈ ಸಭೆಗೆ ದ್ರೋಹ, ಇದು ಕಾಂಗ್ರೆಸ್ ಪಕ್ಷಕ್ಕೆ ನಾಚಿಕೆಗೇಡು ಎಂದು ಹೇಳುತ್ತಿದ್ದೇನೆ. ಇದು ಸರಿಯಾದ ರೀತಿಯಲ್ಲ. ಇದನ್ನು ಪ್ರತಿಭಟಿಸುವುದಕ್ಕೋಸ್ಕರವಾಗಿ ನಾವು ಧರಣಿ ಮಾಡುತ್ತಿದ್ದೇವೆ. ಎರಡನೆಯದು ಅಧ್ಯಕ್ಷ ಪೀಠಕ್ಕೆ ಅಗೌರವವನ್ನು ಉಂಟು ಮಾಡುತ್ತಿದ್ದಾರೆ. ಪದೇಪದೇ ತಾವು ಎದ್ದು ನಿಂತರೂ ಸಹ ಅಧ್ಯಕ್ಷರಿಗೆ ಅವಮಾನ ಮಾಡುತ್ತಿದ್ದಾರೆ. ಇದು ಅತ್ಯಂತ ನಾಚಿಕೆಗೇಡು. ಇಂತಹ ಸಭೆಯನ್ನು ನಡೆಸುವ ಬದಲು ನಾನು ತಮ್ಮಲ್ಲಿ ಕೈಮುಗಿದು ಕೇಳುತ್ತಿದ್ದೇನೆ ಸಭೆಯನ್ನು ಮುಂದಕ್ಕೆ ಹಾಕಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಇಡೀ ರಾಜ್ಯದ ಜನತೆ ನಮ್ಮನ್ನು ನೋಡುತ್ತಿದ್ದಾರೆ. ವಿರೋಧಪಕ್ಷಗಳಿಗೆ ಏನು ಗೌರವ ಕೊಡಬೇಕೋ ಅದನ್ನು ಕೊಡುತ್ತಿಲ್ಲ. ಪ್ರಜಾಪ್ರಭುತ್ವಕ್ಕೆ ದ್ರೋಹ ಮಾಡಿದ್ದಾರೆ. ಪ್ರಜಾಪ್ರಭುತ್ವಕ್ಕೆ ಅವಮಾನ ಮಾಡಿದ್ದಾರೆ. ದಯವಿಟ್ಟು ಇವರನ್ನು ವಜಾ ಮಾಡಬೇಕು.

ಶ್ರೀ ವಾಟಾಳ್‌ನಾಗರಾಜ್ : ಅವರು ಕ್ಷಮಾಪಣೆ ಕೇಳುವವರೆಗೆ ನಾವು ಧರಣಿ ಬಿಡುವುದಿಲ್ಲ. ಇದು ನಮ್ಮ ಸ್ಪಷ್ಟವಾದ ಅಭಿಪ್ರಾಯ

ಶ್ರೀ ಕೆ.ಎಸ್.ಈಶ್ವರಪ್ಪ: ನಾವು ವಿರೋಧಪಕ್ಷದವರು ಕಡಿಮೆ ಜನ ಇದ್ದರೂ ಸರ್ಕಾರ ಮಾಡಿರುವ ತಪ್ಪುಗಳನ್ನು ಅಧ್ಯಯನ ಮಾಡಿ ಬಹಿರಂಗವಾಗಿ ಎಳೆಎಳೆಯಾಗಿ ಬಿಡಿಸಿ ಹೇಳುತ್ತಿದ್ದೇವೆ. ಆಡಳಿತ ಪಕ್ಷದವರು ಮಾಡತಕ್ಕ ಅನ್ಯಾಯವನ್ನು ಇಡೀ ರಾಜ್ಯಕ್ಕೆ ತೋರಿಸುತ್ತಿದ್ದೇವೆ. ಕಾಂಗ್ರೆಸ್ ಸರ್ಕಾರ ಮಾಡುತ್ತಿರುವುದನ್ನು ನಮಗೆ ಸಹಿಸುವುದಕ್ಕೆ ಆಗುತ್ತಿಲ್ಲ. ಇವರು ಪ್ರಜಾಪ್ರಭುತ್ವಕ್ಕೆ ದ್ರೋಹ ಮಾಡುತ್ತಿದ್ದಾರೆ. ದಯವಿಟ್ಟು ಅವರನ್ನು ಸದನದಿಂದ ಹೊರಗೆ ಹಾಕಬೇಕು. ಪ್ರಜಾಪ್ರಭುತ್ವವನ್ನು ರಕ್ಷಣೆ ಮಾಡುವುದಕ್ಕೆ ನೀವು ಮುಂದೆ ಬರಬೇಕು. ಈ ಸರ್ಕಾರವನ್ನು ವಜಾ ಮಾಡುವುದಕ್ಕೆ ನೀವು ಒತ್ತಾಯ ಮಾಡಬೇಕು, ಅದಕ್ಕಾಗಿ ನಾವೆಲ್ಲರೂ ಒತ್ತಾಯ ಮಾಡುತ್ತಿದ್ದೇವೆ. ತಾವೇ, ಈ ಸದನವನ್ನು ವಜಾ ಮಾಡಿದ್ದೇವೆಂದು ನಿರ್ಣಯ ಮಂಡನೆ ಮಾಡಿ, ಅದಕ್ಕೆ ನಾವು ಬೆಂಬಲ ಕೊಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : –ವರ್ಷಕ್ಕೆ ಒಬ್ಬ ಮುಖ್ಯಮಂತ್ರಿ, ಇದು ನಾಚಿಕೆಗೇಡು, ಇದೇ ನಿಮ್ಮ ವ್ಯವಹಾರ. ಈ ಸರ್ಕಾರವನ್ನು ವಜಾ ಮಾಡಿ, ತಾವು ಇದಕ್ಕೆ ನಿರ್ಣಯ ಮಾಡಿ.

(ಗೊಂದಲ)

ಅಧ್ಯಕ್ಷರು : – ತಾವೆಲ್ಲರೂ ಕುಳಿತುಕೊಳ್ಳಿ, ನನಗೂ ಸ್ವಲ್ಪ ಅವಕಾಶ ಕೊಡಿ. ವಿರೋಧಪಕ್ಷದ ನಾಯಕರು ಮತ್ತು ಸದಸ್ಯರಿಗೆ ಕೇಳಿಕೊಳ್ಳುವುದೇನೆಂದರೆ, ತಾವೆಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಬೇಕು. ಈಗ ಸಭಾನಾಯಕರನ್ನು ಕೇಳಿಕೊಳ್ಳುತ್ತೇನೆ. ಅವರು ಎದ್ದುನಿಂತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : – ಇಲ್ಲಿ ಪ್ರಜಾಪ್ರಭುತ್ವದ ಮೇಲೆ ಹಲ್ಲೆ ನಡೆದಿದೆ, ಎರಡೂ ಕಡೆ ದಾಳಿ ನಡೆದಿದೆ.

ಶ್ರೀ ಎಂ. ವೀರಪ್ಪಮೊಯ್ಲಿ(ಮುಖ್ಯಮಂತ್ರಿಗಳು) : – ಸನ್ಮಾನ್ಯ ಅಧ್ಯಕ್ಷರೇ, ನಾನು ಸಭೆಯ ನಡವಳಿಕೆಯನ್ನು ನೋಡುತ್ತಾ ಇದ್ದೇನೆ. ಮಾನ್ಯ ರಾಮಕೃಷ್ಣಹೆಗಡೆಯವರು ಮಾತನಾಡುತ್ತಿದ್ದರು. ನಿನ್ನೆಯಿಂದ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ನಡೆಯುತ್ತಿದೆ, ನಿರಾತಂಕವಾಗಿ ಚರ್ಚೆ ನಡೆದಿದೆ. ಆ ಕಡೆಯವರಾಗಲೀ; ಈ ಕಡೆಯವರಾಗಲೀ ಮಾತನಾಡುವಾಗ, ಮಧ್ಯದಲ್ಲಿ ಕೆಲವು ಸಾರಿ ಮಾತುಕತೆ ಬರುತ್ತದೆ. ಕೆಲವು ಸಾರಿ ಅದು ಮಿತಿಯಲ್ಲಿ ಇರುತ್ತದೆ, ಕೆಲವು ಸಾರಿ ಮಿತಿ ತಪ್ಪಿ ಹೋಗುತ್ತದೆ. ಸಭೆಯನ್ನು ಸಂಯಮದಿಂದ ನಡೆಸಿಕೊಂಡು ಹೋಗುವುದಕ್ಕೆ, ತಾವು ಅಧ್ಯಕ್ಷರಿದ್ದೀರಿ. ಅಥವಾ ನಮ್ಮ ಮಧ್ಯಪ್ರವೇಶ ಬೇಕಾದರೆ, ನಾವು ಇಲ್ಲಿಯೇ ಕುಳಿತುಕೊಂಡಿದ್ದೇವೆ, ನಾವೂ ಕೂಡ ಇದಕ್ಕೆ ಸಿದ್ಧರಿದ್ದೇವೆ. ಆದರೆ, ನಡವಳಿಕೆಗಳು ನಡೆಯುತ್ತಿರುವಾಗ, ಸನ್ಮಾನ್ಯ ರಾಮಕೃಷ್ಣಹೆಗಡೆಯವರು ನಿಂತರು, ಈ ಕಡೆಯಲ್ಲಿ 3-4 ಜನ ಸನ್ಮಾನ್ಯ ಸದಸ್ಯರೂ ಎದ್ದುನಿಂತರು. ಇದ್ದಕ್ಕಿದ್ದಂತೆ

ಪ್ರೊವೊಕೇಷನ್ ಸಿಕ್ಕಿದ್ದು, ಸನ್ಮಾನ್ಯ ನಾಡಗೌಡರು ಎದ್ದುನಿಂತರು ಎಂದು. ಬೇಕಾದರೆ ರೆಕಾರ್ಡ್ ತೆಗೆದು ನೋಡಿ. Earlier there is another thing. Immediate provocation ಸನ್ಮಾನ್ಯ ನಾಡಗೌಡರು ಎದ್ದು ನಿಂತರು. ಅವರೇನೂ ಆಕ್ಷೇಪಣಾರ್ಹವಾದ ಶಬ್ದ ಹೇಳಿದ್ದು ನನಗೆ ಕಾಣಲಿಲ್ಲ. ಅವರೇನೂ ಹೇಳಲಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ:- ಮಾನ್ಯ ರಾಮಕೃಷ್ಣಹೆಗಡೆಯವರು ಎದ್ದುನಿಂತು ಮಾತನಾಡುವಾಗ, ಆತಂಕ ಮಾಡಬೇಕೆಂದು, ತಡೆ ಮಾಡಬೇಕೆಂಬ ಸಂಚು ಈ ಕಡೆಯಿಂದ ಖಂಡಿತವಾಗಿಯೂ ಇಲ್ಲ. ನನಗೆ ಬೇರೆ ಕಡೆ ಕೆಲಸ ಇದ್ದರೂ ಕೂಡ, ಅವರು ಮಾತನಾಡುವುದನ್ನು ಸಾವಧಾನದಿಂದ ಕೇಳಬೇಕೆಂದು ಇಲ್ಲಿ ಬಂದಿದ್ದೇನೆ. ಏತನ್ಮಧ್ಯೆ, ಕೆಲವು ಸಾರಿ ಇತಿಮಿತಿ, ಇದು ಯಾವಾಗಲೂ ಆಗುತ್ತದೆ. ಸನ್ಮಾನ್ಯ ವಿರೋಧಪಕ್ಷದವರು ಅವಿಶ್ವಾಸ ನಿರ್ಣಯವನ್ನು ಬೇರೆ ರೀತಿಯಲ್ಲಿ ಕೊಂಡು ಹೋಗುವುದಕ್ಕೆ ನಮಗೂ ಇಷ್ಟವಿಲ್ಲ. ತಮಗೂ ಇಷ್ಟವಿಲ್ಲ.

5.55 ಪಿ.ಎಂ.

ಆದ್ದರಿಂದ ದಯಮಾಡಿ ಏನಾದರೂ ಆಗಿದ್ದರೆ ನಿಮಗೆ ಆತಂಕ ಎಂದು ಕಂಡುಬಂದರೆ ನಾವು ಅದಕ್ಕೆ ಪಶ್ಚಾತ್ತಾಪ ಪಡುತ್ತೇವೆ. ಆದರೆ ಇಮ್ಮಿಡಿಯೇಟ್ ಪ್ರವೊಕೇಷನ್; ನಾಡಗೌಡರು ಏನೂ ಮಾಡಲಿಲ್ಲ. ನನಗೆ ಗೊತ್ತಿದ್ದ ಮಟ್ಟಿಗೆ ಅವರು ನಿಂತಿದ್ದು ಮಾತ್ರ; ಏನು ಆಯಿತು ಅಂದರೆ,...... I don't justify. ಸನ್ಮಾನ್ಯ ಹಿರಿಯ ನಾಯಕರು, ಸನ್ಮಾನ್ಯ ರಾಮಕೃಷ್ಣಹೆಗಡೆಯವರು ಅತ್ಯಂತ ಹಿರಿಯ ನಾಯಕರು ಹಾಗೂ ಈ ರಾಜ್ಯದ ಮತ್ತು ರಾಷ್ಟ್ರದ ನಾಯಕರು; ಅದರಲ್ಲಿ ಅನುಮಾನ ಇಲ್ಲ. ಆದ್ದರಿಂದ ತಮ್ಮ ಮಾತನ್ನು ಎಲ್ಲರೂ ಕೇಳಬೇಕೆಂದಿದ್ದಾರೆ. ಬಹುಶಃ ಇಷ್ಟು ಸಂಖ್ಯೆಯಲ್ಲಿ ಸದಸ್ಯರು ಯಾವಾಗಲೂ ಸಭೆಯಲ್ಲಿ ಇರಲಿಲ್ಲ. ಸಾಧಾರಣ 5-6 ಗಂಟೆಗೆ ಸದಸ್ಯರು ಹೊರಗಡೆ ಇರುತ್ತಾರೆ. ಈಗ ಇಲ್ಲಿ ಎಲ್ಲಾ ಸದಸ್ಯರು ಬಂದು ಕುಳಿತುಕೊಳ್ಳಬೇಕಾದರೆ ತಮ್ಮ ಮಾತನ್ನು ಕೇಳಬೇಕೆನ್ನುವ ತವಕದಿಂದ ಕೂತುಕೊಂಡಿದ್ದೇವೆ. ಆದ್ದರಿಂದ ನಾವು ತಮ್ಮ ಮಾತು ಕೇಳಬೇಕು. ಅದನ್ನು ಅಬ್‌ಸ್ಟ್ರಕ್ಟ್ ಮಾಡಬೇಕೆಂದು ಇಲ್ಲ. ನಾನು ಇಲ್ಲಿ ತಮ್ಮ ಗಮನ ಸೆಳೆಯಬೇಕೆಂದು ಪ್ರಯತ್ನ ಮಾಡುತ್ತಲೇ ಇದ್ದೇನೆ. ನನ್ನನ್ನು ತಾವು ನೋಡಲೇ ಇಲ್ಲ. ತಾವು ಆ ಕಡೆ ನೋಡುತ್ತಿದ್ದೀರಿ ಬಹುಶಃ ನಾನು ಕೂಡ ಎದ್ದು ನಿಂತು ಸಮಾಧಾನ ಮಾಡೋಣ ಎನ್ನುತಕ್ಕಂಥ ಅಭಿಪ್ರಾಯದಿಂದ ಇದ್ದೆ; ಆದರೆ ಏನಾಯಿತು ಅಂದರೆ, ನಿಮ್ಮ ಗಮನ ಆ ಕಡೆ ಈ ಕಡೆ ಹೋಗಿ ನಮ್ಮ ಕಡೆ ಗಮನವೇ ಬರಲಿಲ್ಲ. ಆದ್ದರಿಂದ ನಮಗೆ ಅಂದರೆ ಟ್ರೆಜರಿಬೆಂಚ್‌ನವರಿಗೆ ತಮಗೆ ಆತಂಕ ಮಾಡಬೇಕೆಂಬ ಇಚ್ಛೆ ಇಲ್ಲ. ನಮಗೆಲ್ಲರಿಗೂ ತಮ್ಮ ಬಗ್ಗೆ ಅಭಿಮಾನ ಇದೆ. ತಾವು ದಯಮಾಡಿ ತಮ್ಮ ವಿಚಾರವನ್ನು ಮುಂದುವರೆಸಿ. ತಾವು ದಯಮಾಡಿ ವಾಪಸ್ ಹೋಗಿ ಈ ಕಾರ್ಯಕಲಾಪದಲ್ಲಿ ಭಾಗವಹಿಸಿ; ಅಲ್ಲಿ ವಿರೋಧಪಕ್ಷದ ನಾಯಕನಾಗಿದ್ದಾಗ, ಆಗಾಗ ನಾವುಗಳು ಮಾತನಾಡುವಾಗ ಕೂಡ ಇದೇ ರೀತಿ ಆಕ್ಷೇಪಣೆ ಬರುತ್ತಿತ್ತು. ಇದು ತಮಗೂ ಗೊತ್ತಿದೆ. ತಾವು ಕೂಡ ಎದ್ದುನಿಂತು ಅಲ್ಲಿ ಎಲ್ಲಾ ಮಾತುಕತೆ ಕೂಡ ನಡೆಯುತ್ತಿದೆ ಎಂದು ಹೇಳುತ್ತಿದ್ದಿರಿ. ಕೆಲವು ಸಾರಿ ಮಿತಿಯಲ್ಲಿರುತ್ತದೆ. ಕೆಲವು ಸಾರಿ ಮಿತಿ ತಪ್ಪಿ ಹೋಗುತ್ತದೆ. ಯುವಕರು ಸ್ವಲ್ಪ ಎದ್ದುನಿಲ್ಲುತ್ತಾರೆ. ತಮಗೆ ಏನೋ ಒಂದು ಆಸೆ, ಬಾಕಿಯವರನ್ನು ಕೆಣಕಿದರೆ ಅಷ್ಟು ಸ್ವಾರಸ್ಯ ಇಲ್ಲ, ಆದರೆ ರಾಮಕೃಷ್ಣಹೆಗಡೆಯವರು ಮಾತನಾಡುವಾಗ ಸ್ವಲ್ಪ ಕೆಣಕೋಣ ಏನಾಗುತ್ತದೆ ಎಂಬ

ತವಕ ಯುವಕರಿಗೆ ಸ್ವಲ್ಪ ಇದೆ. ತಾವು ಹಿರಿಯರು, ಅಷ್ಟು ಆಕ್ರೋಶ ಕಿರಿಯವರ ಮೇಲೆ ಬರಬೇಕಾದ ಅಗತ್ಯವಿಲ್ಲ. ಇನ್ನು ನಾವು ಯಾವ ಆತಂಕವನ್ನೂ ಮಾಡುವುದಿಲ್ಲ. ತಾವು ದಯಮಾಡಿ ಬನ್ನಿ. ತಾವು ದಯಮಾಡಿ ತಮ್ಮ ಭಾಷಣವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ತಮ್ಮನ್ನು ಸವಿನಯದಿಂದ ವಿನಂತಿ ಮಾಡಿಕೊಳ್ಳುತ್ತೇನೆ. ನಾವೆಲ್ಲಾ ಆಸಕ್ತರಾಗಿದ್ದೇವೆ. ತಾವು ಹೋಗಿ ಮಾತನಾಡಿ. ತಾವು ಹಿರಿಯರು, ಯಾರ ಮೇಲೆ ಸಿಟ್ಟು ಇದು? ತಾವು ದಯಮಾಡಿ ಸಿಟ್ಟು ಮಾಡಿಕೊಳ್ಳಬಾರದು. ನಿರಾತಂಕವಾಗಿ ತಮ್ಮ ಭಾಷಣವನ್ನು ಕೇಳತಕ್ಕಂಥ ತವಕ ನಮಗೆಲ್ಲರಿಗೂ ಇದೆ. ಆದ್ದರಿಂದ ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ ತಮ್ಮ ಭಾಷಣವನ್ನು ಮುಂದುವರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಈ ಹಂತದಲ್ಲಿ ಜನತಾದಳದ ಮಾನ್ಯ ಸದಸ್ಯರು ಬಾವಿಯಿಂದ ತಮ್ಮ ಸ್ಥಾನಗಳಿಗೆ ಬಂದರು)

ಶ್ರೀ ಆರ್. ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳ ಅಸಹಾಯಕತೆ ನೋಡಿ ನನಗೆ ಬಹಳ ದುಃಖವಾಗುತ್ತಿದೆ.

ಶ್ರೀ ಸಿ.ಎಸ್. ನಾಡಗೌಡ:- ಮಾನ್ಯ ಅಧ್ಯಕ್ಷರೇ, ನಾನು ಏನು ಪ್ರಸ್ತಾಪ ಮಾಡುತ್ತಿದ್ದೆ ಎನ್ನುವ ವಿಷಯವನ್ನೂ ಕೂಡ ತಿಳಿದುಕೊಳ್ಳದೆ ಈ ತರಹ ಮಾಡಿದರೆ...

ಶ್ರೀ ಆರ್.ವಿ. ದೇಶಪಾಂಡೆ:- ಈ ಯುವಕರು ನಿಮಗೂ ಕಷ್ಟ ಆಗಿದ್ದಾರೆ. ಹಾಗಾಗಿ ಶಾಸನ ಸಭೆಗೆ ಕಷ್ಟಆಗಬಾರದು. ಈ ಮನೆ ಸರಿಯಾಗಿ ನಡೆಯಲಿಕ್ಕೆ ಈ ಯುವಕರಿಗೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಆದೇಶ ನೀಡಬೇಕು.

ಶ್ರೀ ಸಿ.ಎಸ್. ನಾಡಗೌಡ:- ಮಾನ್ಯ ಅಧ್ಯಕ್ಷರೇ, ನಾನು ಕ್ಷಮೆ ಕೇಳುತ್ತಿದ್ದೇನೆ. ನಾನು ಅವರಿಗೆ ಏನು ಹೇಳಲಿಕ್ಕೆ ಬಯಸಿದ್ದೆ ಅಂದರೆ ಸನ್ಮಾನ್ಯ ವೀರೇಂದ್ರಪಾಟೀಲರು ತಮ್ಮ ಬಗ್ಗೆ ಹೇಳಿದರು ಎನ್ನುವ ಬಗ್ಗೆ ಒಂದು ಮಾತನ್ನು ಹೇಳಿದರು. ಅವಾಗ ಅಲ್ಲಿ ಮೋಷನ್ ಅಡ್ಮಿಟ್ ಆಗಿತ್ತು. ಅವಾಗ ಅವರು ರಿಪ್ಲೈ ಕೊಟ್ಟರು. ಇವರು ಇರಲಾರದಂತಹ ಸಂದರ್ಭದಲ್ಲಿ ಅವರು ದುರುದ್ದೇಶ ಇಟ್ಟುಕೊಂಡು ಏನೂ ಹೇಳಲಿಲ್ಲ ಅಥವಾ ಇವರ ಗೈರು ಹಾಜರಿಯಲ್ಲಿ ಹೇಳಲಿಲ್ಲ. ಇಲ್ಲಿ ಸಾಕಷ್ಟು ಚರ್ಚೆ ಆಯಿತು. ಅವಾಗ ಹೇಳಿದರು. ಆದರೆ ಸನ್ಮಾನ್ಯ ರಾಮಕೃಷ್ಣಹೆಗಡೆಯವರು ಹೇಳುವಾಗ ಡಾಕ್ಯುಮೆಂಟ್ಸನ್ನು ಫೋರ್ಜ್ ಮಾಡಿದ್ದಾರೆ ಎನ್ನುವಂತಹ ಮಾತು ಹೇಳಿದರು. ಆಗ ವೀರೇಂದ್ರ ಪಾಟೀಲರು ಇರಲಿಲ್ಲ. ಆ

ವಿಷಯವನ್ನು ನಾನು ಅವರ ಗಮನಕ್ಕೆ ತರುವುದಕ್ಕೆ ಪ್ರಯತ್ನಪಟ್ಟಿದ್ದೆ, ಅಷ್ಟೆ;

ಶ್ರೀ ಆರ್.ವಿ. ದೇಶಪಾಂಡೆ:- ಏನು ಇದು?

ಶ್ರೀ ಬಿ.ಎಚ್. ಬನ್ನಿಕೋಡ್:- ಹೆಗಡೆಯವರ ಗೈರು ಹಾಜರಿಯಲ್ಲಿ ತಪ್ಪು ಹೇಳಿಕೆ ಕೊಟ್ಟರೆ ನಾವು ಎದ್ದು ನಿಲ್ಲಬೇಕಾಗುತ್ತದೆ. ವೀರೇಂದ್ರಪಾಟೀಲರು ಹೇಳಿದ್ದು ಹೆಗಡೆಯವರ ಗೈರು ಹಾಜರಿಯಲ್ಲಿ ಅದಕ್ಕಾಗಿ ಎದ್ದು ನಿಲ್ಲಬೇಕಾಯಿತು.

ಶ್ರೀ ರಾಮಕೃಷ್ಣಹೆಗಡೆ:- ಮಾನ್ಯ ಅಧ್ಯಕ್ಷರೇ, ಒಂದೊಂದು ಸಲ ಮಧ್ಯದಲ್ಲಿ ಸದಸ್ಯರು ಬಾಯಿ ಹಾಕಿದರೆ ಅದು ಆಕ್ಷೇಪಕರ ಅಲ್ಲ ಅದನ್ನು ನಾನು ಒಪ್ಪುತ್ತೇನೆ. ಆದರೆ ವಿರೋಧಪಕ್ಷದವರು ಮಾತನಾಡಲಿಕ್ಕೆ ಎದ್ದು ನಿಂತ ತಕ್ಷಣವೇ ಅವರಮಾತಿಗೆ ಭಂಗ ತರಬೇಕು; ಅವರು ಮಾತನಾಡಲಿಕ್ಕೆ ಅವಕಾಶ ಕೊಡಕೂಡದು ಎನ್ನತಕ್ಕಂಥ ಉದ್ದೇಶ ಸ್ಪಷ್ಟವಾಗಿ ಕಾಣುವಂತೆ ಈ ತರಹ ಮಾಡುವುದು

ಸರಿಯಲ್ಲ.

(ಗೊಂದಲ)

ಶ್ರೀ ರಾಮಕೃಷ್ಣಹೆಗಡೆ:- ನಾನು ಮಾತನಾಡಕೂಡದು, ಹೌದೋ ಅಲ್ಲವೋ; ನನಗೆ ಗೊತ್ತಾಯಿತು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ನೀವು ಮಾತನಾಡಕೂಡದು..

ಶ್ರೀ ರಾಮಕೃಷ್ಣಹೆಗಡೆ:- ನಾನು ಮಾತನಾಡಕೂಡದು ಹೌದೋ ಅಲ್ಲವೋ? ಅವರ ಟೋಪ್ಪಿಗೆಯಿಂದ ಬೆಕ್ಕು ಹೊರಗೆ ಬಿತ್ತು; ಈಗ ಅಂದರೆ, ನಾನು ಮಾತನಾಡಕೂಡದು ಎಂದು.

(ಗೊಂದಲ)

ಅಧ್ಯಕ್ಷರು:- ಆಯಿತು ಕುಳಿತುಕೊಳ್ಳಿ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-ನೀವು ನೇರವಾಗಿ ಮಾತನಾಡಿ. ಅದು ಬಿಟ್ಟು ಸುತ್ತು ಹಾಕಿಕೊಂಡು ಏತಕ್ಕೆ ಮಾತನಾಡುತ್ತೀರಿ. ನೇರವಾಗಿ ಮಾತನಾಡಿ; ಆಗ ಯಾರೂ ಮಾತನಾಡುವುದಿಲ್ಲ ನಮ್ಮ ಕಡೆಯಲ್ಲಿ; ನೀವು ರಾಜೀವ್‌ಗಾಂಧಿಯವರ ಬಗ್ಗೆ ಹಾಗೂ ವೀರೇಂದ್ರಪಾಟೀಲರ ಬಗ್ಗೆ ಏತಕ್ಕೆ ಮಾತನಾಡುತ್ತೀರಿ? ಏಕೆ ನೀವು ಅವರ ಸುದ್ದಿ ಎತ್ತಿ ಮಾತನಾಡುತ್ತೀರಿ?

ಶ್ರೀ ಪಿ.ಸಿ. ಸಿದ್ದನಗೌಡ:- ಇವರನ್ನು ಕೇಳಿ ನಾವು ಮಾತನಾಡಬೇಕೇ?

ಶ್ರೀ ಡಿ.ಬಿ. ಚಂದ್ರೇಗೌಡ:- ಈಗ ಮಾತನಾಡಿದ ಸದಸ್ಯರ ಪರಿಚಯ ನನಗಿಲ್ಲ. ಮುಖ್ಯವಾಗಿ ಈ ಶಾಸನಸಭೆಗೆ ಹೊಸಹೊಸ ಸಂಪ್ರದಾಯಗಳನ್ನು ಹಾಕಿದ ಕೀರ್ತಿ ಇವರಿಗಿದೆ. ಈ ಪ್ರವೃತ್ತಿ ಒಳ್ಳೆಯದಲ್ಲ; ನಾವು ಭವಿಷ್ಯಕ್ಕೆ ಏನು ಬಿಟ್ಟು ಹೋಗುತ್ತಿದ್ದೇವೆಂಬುದನ್ನು ಸ್ವಲ್ಪ ಆಲೋಚನೆ ಮಾಡಬೇಕು. ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ, ಇದಕ್ಕೆ ಎಲ್ಲಾದರೂ ಒಂದು ಅಂತಿಮವಾದಂತಹ ಗುರಿ ಹಾಕಬೇಕು. ಕೆಲವು ಸದಸ್ಯರಿಗೆ ಏನಾಗಿಬಿಟ್ಟಿದೆ ಅಂತ ಹೇಳಿದರೆ, ತಾವು ಹಾಡಿದ್ದೇ ರಾಗ, ಹೇಳಿದ್ದೇ ಮಾತು ಎನ್ನತಕ್ಕಂಥ ಒಂದು ಪ್ರವೃತ್ತಿ ಬೆಳೆದು ಬಂದಿದೆ. ಇದನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಏಕೆಂದರೆ ನಾನು ಅಲ್ಲಿ ಕುಳಿತು ಕೆಲಸ ಮಾಡಿದವನು. ಇಂತಹ ಪ್ರವೃತ್ತಿಯನ್ನು ನಾವು ಬೆಳೆಯುವುದಕ್ಕೆ ಬಿಟ್ಟರೆ ಈ ಶಾಸನಸಭೆಗೆ ಗೌರವ ಬರುವುದಿಲ್ಲ. ಈ ಶಾಸನಸಭೆಯಲ್ಲಿ ಕೆಲಸ ಮಾಡಕ್ಕಂಥವರಿಗಂತೂ ಗೌರವ ಇರುವುದಿಲ್ಲ. ತಮ್ಮಲ್ಲಿ ನಾನು ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ. ದಯಮಾಡಿ ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ. ಇಲ್ಲದಿದ್ದರೆ, ಸರ್ಕಾರ ಏನು ಮಾಡುತ್ತದೋ ಗೊತ್ತಿಲ್ಲ. ಸಂಸದೀಯ ವ್ಯವಸ್ಥೆಯಲ್ಲಿ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ಸ್ ಎಂದು ಇದ್ದಾರೆ. ಒಬ್ಬರು ವಿಫ್ ಇದ್ದಾರೆ. ಆ ವಿಫ್‌ಗೆ ಸರ್ಕಾರ ಸಂಬಳ ಕೊಡುತ್ತದೆ. ಆದರೆ ಅವರ ದರ್ಶನವೇ ಆಗುವುದಿಲ್ಲ ನಮಗೆ ಈ ಸದನದಲ್ಲಿ. ಆ ವಿಫ್ ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅವರೂ ವಿಫ್ ಕೊಡುವುದಿಲ್ಲ. ಅವರೂ ಸರಿ ಮಾಡುವುದಿಲ್ಲ; ಸಂಸದೀಯ ವ್ಯವಹಾರಗಳ ಮಂತ್ರಿಗಳೂ ಸರಿ ಮಾಡುವುದಿಲ್ಲ; ಮುಖ್ಯಮಂತ್ರಿಗಳ ಮಾತಿಗೆ ಬೆಲೆ ಇಲ್ಲ.

ಶ್ರೀ ಕೆ.ಎಚ್. ರಂಗನಾಥ್:- ಮಾನ್ಯ ಚಂದ್ರೇಗೌಡರೇ, ಎಲ್ಲರೂ ಮಾತನಾಡುತ್ತಾ ಮಾತನಾಡುತ್ತಾ ಇನ್ನೂ ಜಾಸ್ತಿ ಆಗುವುದು ಏಕೆ? ಮಾನ್ಯ ರಾಮಕೃಷ್ಣಹೆಗಡೆಯವರು ಮಾತನಾಡುತ್ತಿದ್ದಾರೆ. ಸದನದ ನಿಯಮ ಏನು ಇದೆ; ಅಧ್ಯಕ್ಷರ ಅಪ್ಪಣೆ ಪಡೆದ ಮೇಲೆ

ಮಾತನಾಡುವುದಕ್ಕೆ ಅವಕಾಶ ಇದೆ. ಈಗ ಎಲ್ಲಾ ಆಗಿ ಹೋಯಿತು ಮತ್ತೇ ಏಕೆ ಅದನ್ನು ಪುನಃ ಪ್ರಾರಂಭ ಮಾಡುವುದು? ಈಗ ಹೆಗಡೆಯವರು ಮಾತನಾಡುವುದು ಒಳ್ಳೆಯುದು.

ಶ್ರೀ ರಾಮಕೃಷ್ಣಹೆಗಡೆ :- ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಕ್ಕೆ ತಮ್ಮ ರಕ್ಷಣೆ ಸಿಕ್ಕರೆ ಮಾತನಾಡುತ್ತೇನೆ. ನಾನು ಭುಜಬಲದಿಂದ ಕೆಲಸ ಮಾಡುವವನಲ್ಲ ಅಥವಾ ಗಂಟಲು ಬಲ ಕೂಡ ನನಗೆ ಅಷ್ಟೊಂದು ಇಲ್ಲ. ಮಾನ್ಯ ಅಧ್ಯಕ್ಷರೇ, ನನ್ನ ಸವಿನಯ ಪ್ರಾರ್ಥನೆ ತಮ್ಮಲ್ಲಿ ಏನೆಂದರೆ, ನಾನು ಅವರ ಕಡೆಗೆ ನೋಡುತ್ತಿದ್ದೇನೆ ಅವರನ್ನು ಉದ್ದೇಶಿಸಿ ಮಾತನಾಡುತ್ತಿರುವುದು ಆಕಸ್ಮಾತ್ ನನ್ನ ಕಣ್ಣು ಎಲ್ಲಾದರೂ ತಪ್ಪಿಬಿದ್ದರೆ ಅದು ನಿಮ್ಮಮೇಲೆ, ಕೃಷ್ಣಾರವರಮೇಲೆ ರಂಗನಾಥ್‌ರವರ ಮೇಲೆ ಬೀಳುವುದು.

ಶ್ರೀ ಕೆ.ಎಚ್. ರಂಗನಾಥ್ :- ಹೀಗೆ ನಿಂತುಕೊಂಡು ಮಾತನಾಡಿಬಿಟ್ಟರೆ ಬಹಳ ಒಳ್ಳೆಯದು. ಬೆನ್ನು ಆ ಕಡೆ ಮಾಡಿದರೆ ಆಯಿತು.

ಶ್ರೀ ರಾಮಕೃಷ್ಣಹೆಗಡೆ :- ಈಗ ನಾನು ಮಾತನಾಡುವಾಗ ನನ್ನ ಎಲ್ಲಾ ಸ್ನೇಹಿತರಿಗೆ ಹೇಳುತ್ತೇನೆ. ನಾನು ಏನಾದರೂ ಅವಾಚ್ಯ ಶಬ್ದವನ್ನು ಉಪಯೋಗಿಸಿದ್ದರೆ ಯಾರಮೇಲಾದರೂ ಮೊದಲು ನೋಟೀಸ್ ಕೊಡದೆ ಆಪಾದನೆಯನ್ನು ಮಾಡಿದ್ದರೆ ತಕ್ಷಣ ನನ್ನನ್ನು ಪುಲ್ ಅಫ್ ಮಾಡಬೇಕು ನೀವು. ನನ್ನ ಜೀವನದಲ್ಲಿ ನಾನು ಅದನ್ನು ಮಾಡಲಿಲ್ಲ. ನನ್ನ ಪಾರ್ಲಿಮೆಂಟರಿ ಜೀವನವನ್ನು ನನ್ನ ಸ್ನೇಹಿತರಾದ ನಾಡಗೌಡರು ತಿಳಿದಿರಲಿಕ್ಕಿಲ್ಲ. ನಾಡಗೌಡರು ಮೊದಲನೇ ಬಾರಿಗೆ ಆರಿಸಿ ಬಂದಿದ್ದಾರೆ, ಅವರು ತರುಣರಿದ್ದಾರೆ. ಸದನದ ಕಾರ್ಯಕಲಾಪಗಳು ಏನು, ಅದರ ಗಾಂಭೀರ್ಯ ಏನು ಎಂಬುದನ್ನು ಅವರು ತಿಳಿದುಕೊಳ್ಳಬೇಕು. ಮಧ್ಯದಲ್ಲಿ ಏನಾದರೂ ಇಂಟರಪ್ಟ್ ಮಾಡುವುದಾದರೆ ಎಂಥ ಸಂದರ್ಭದಲ್ಲಿ ಮಾಡಬೇಕು, ಅದು ಚುರುಕಾಗಿ ಇರಬೇಕು, ಅದು ಅವಾಚ್ಯ ಮತ್ತು ಅಸಹ್ಯವಾಗಿ ಇರಬಾರದು. ಏಕೆಂದರೆ ನಾವೆಲ್ಲರೂ ನಾಗರೀಕರು. ಜನರು ನಮ್ಮನ್ನು ಏತಕ್ಕೆ ಆರಿಸಿದ್ದಾರೆ? ಇಲ್ಲಿ ಬಂದು ಅವಾಚ್ಯವಾಗಿ ಬಯ್ದಾಡಿಕೊಳ್ಳಲು ಅಲ್ಲ. ಅಥವಾ ಯಾರಾದರೂ ಮಾತನಾಡುತ್ತಿದ್ದರೆ ಅವರನ್ನು ಎದುರಿಸಿ ಅವರ ಬಾಯಿ ಬಂದ್ ಮಾಡಲು ಅಲ್ಲ. ನಾನು ಏನು ಹೇಳುತ್ತಿದ್ದೇನೆ ಅದನ್ನು ತಿಳಿದುಕೊಳ್ಳಿ. ಅದಕ್ಕೆ ಉತ್ತರಿಸಲು ಮುಖ್ಯಮಂತ್ರಿಯವರು ಇದ್ದಾರೆ. ಪಾರ್ಲಿಮೆಂಟರಿ ಅಫೈರ್ಸ್ ಮಂತ್ರಿಯವರಿದ್ದಾರೆ, ಡೆಪ್ಯುಟಿ ಚೀಫ್ ಮಿನಿಸ್ಟರ್ ಇದ್ದಾರೆ, ಬಾಕಿಯವರು ಇದ್ದಾರೆ, ನಿಮ್ಮಲ್ಲಿಯೂ ಅನೇಕ ಜನರು ಸಮರ್ಥರಿದ್ದೀರಿ; ನೀವು ಉತ್ತರ ಕೊಡಿ ನಾಳೆ. But to stifle the discussion itself is not proper. ಅದನ್ನು ನಾನು ಖಂಡಿಸುತ್ತೇನೆ. ನಾನು ಮಾನ್ಯ ವೀರೇಂದ್ರಪಾಟೀಲರ ಬಗ್ಗೆ ಪ್ರಸ್ತಾಪ ಮಾಡಿದ್ದು ಕೂಡ ಇದೇ ಒಂದು ಸಂದರ್ಭದಲ್ಲಿ ಏತಕ್ಕೆಂದರೆ ಅವರು ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟು ಹೋಗಬೇಕಾಯಿತು. ಕರ್ನಾಟಕದ ನಾಲ್ಕು ಕೋಟಿ ಜನರಿಗೆ ಅದರಿಂದ ನಿರಾಸೆಯಾಯಿತು ಎಂದು ನಾನು ಹೇಳುತ್ತಿದ್ದೇನೆ. ಅವರು ಏತಕ್ಕಾಗಿ ಹೋಗಬೇಕಾಯಿತು? ಅದನ್ನು ತಿಳಿದುಕೊಳ್ಳತಕ್ಕಂಥ ಅಧಿಕಾರವು ಜನರಿಗೆ ಇದೆ. ಏಕೆಂದರೆ ಶ್ರೀಮಾನ್ ಮಹದೇವ್‌ರವರು ಹೇಳಿದ ಹಾಗೆ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ನೇತೃತ್ವವನ್ನು ವೀರೇಂದ್ರಪಾಟೀಲ್‌ರವರು ವಹಿಸಿದ್ದರು ಮತ್ತು ಜನತಾ ದಳದ ನಾಯಕರಾಗಿ ನನ್ನನ್ನು ಜನರು ನೋಡಿದರು; ಆವಾಗಲೇ ಸತ್ವಪರೀಕ್ಷೆ ಆಗಿಹೋಯಿತು; ಜನರು ವೀರೇಂದ್ರಪಾಟೀಲರ ನೇತೃತ್ವವನ್ನು ಒಪ್ಪಿದ್ದಾರೆ ಎಂದ ಹೇಳಿದ್ದಾರೆ. ಅದನ್ನು ನಾನು ಕೂಡ ಒಪ್ಪುತ್ತೇನೆ. ನಾನು ಅದಕ್ಕೆ ಏನಾದರೂ ಆಕ್ಷೇಪ ಮಾಡಿದ್ದೇನೇ?

ನಾನು ಯಾರನ್ನಾದರೂ ಟೀಕೆ ಮಾಡಿದ್ದೇನೇ? ಅದು ಜನರ ತೀರ್ಮಾನವಾಗಿತ್ತು. ಅದೇ ರೀತಿಯಲ್ಲಿ ಜನರು ತೀರ್ಮಾನ ಕೊಟ್ಟಿದ್ದನ್ನು ಆ ಹೊತ್ತಿನಲ್ಲಿ ನೀವು ಏನು ಒಪ್ಪಿಕೊಂಡರೋ ಆ ಒಂದು ತೀರ್ಮಾನವನ್ನು ಮಧ್ಯದಲ್ಲಿ ಕತ್ತರ ಸಿದ್ದೇಕೆ ಎಂದು ನಾನು ಪ್ರಶ್ನೆ ಕೇಳಿದರೆ ಅದು ತಪ್ಪೇ? ಅವರು ಹೋದ ಮೇಲೆ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾದರು. ಎರಡು ವರ್ಷದ ಭಾರಿ ಆರ್ಭಟದ ಸೆಲಬರೇಷನ್ ನಡೆಯಿತು. ಸಾಧನೆ ಸಮಾವೇಶ ಎಂದು ನಡೆಯಿತು. ಅದಕ್ಕೆ ಸರಕಾರದ ಹಣ ಎಷ್ಟು ಖರ್ಚಾಯಿತು; ಬೇರೆಯವರು ಎಷ್ಟು ದುಡ್ಡು ಕೊಟ್ಟರು ಎಂಬ ವಿಚಾರಕ್ಕೆ ನಾನು ಬರುವುದಿಲ್ಲ. ನಾವು ಕೂಡ ಸೆಲಬರೇಷನ್ ಮಾಡಿದ್ದೆವು; ಅದು ಐದು ವರ್ಷಗಳ ನಂತರ ಮಾಡಿದ್ದೇವೆ. ಹೀಗೆ ಅವರು ಸಾಧನ ಸಮಾವೇಶ ಮಾಡಿದ್ದೇ ಒಂದು ಅಪಶಕುನವಾದ ಹಾಗೆ ಆಯಿತು. ಅದಾದ ಮೇಲೆ ಅವರೂ ಹೊರಟುಹೋದರು. ಏತಕ್ಕೆ ಹೀಗೆ? ಅದಾದಮೇಲೆ ಒಮ್ಮತದಿಂದ ಮಾನ್ಯ ಮೊಯ್ಲಿಯವರನ್ನು ಕಾಂಗ್ರೆಸ್ ಪಕ್ಷ ಆರಿಸಿತು. ಇನ್ನೂ ಆರು ತಿಂಗಳು ಆಗಿಲ್ಲ; ಅವರು ಎಲ್ಲರನ್ನೂ ಅಕಾಮಡೇಟ್ ಮಾಡಲಿಕ್ಕೆ ಕರ್ನಾಟಕದ ಇತಿಹಾಸದಲ್ಲಿಯೇ ಅತ್ಯಂತ ದೊಡ್ಡ ಮಂತ್ರಿಮಂಡಲವನ್ನುರಚನೆ ಮಾಡಿದರು. ನನ್ನ ಮಂತ್ರಿಮಂಡಲವೂ ದೊಡ್ಡದು ಇತ್ತು; 34 ಜನರು ಇದ್ದರು, ನಾನೇನೂ ಕಡಿಮೆ ಎಂದು ಹೇಳಲಿಲ್ಲ. ಆದರೆ ಇವರ ಮಂತ್ರಿಮಂಡಲದಲ್ಲಿ 41 ಜನರು ಇದ್ದರೂ ಕೂಡ ಆ ಹೊತ್ತು ನಾನು ಟೀಕೆ ಮಾಡಲಿಲ್ಲ. ರಾಜಕೀಯದಲ್ಲಿ ಕಂಪಲ್‌ಷನ್ಸ್ ಇರುತ್ತದೆ, ಇದರಿಂದ ಹೆಚ್ಚುಕಡಿಮೆ ಹಣ ಹೆಚ್ಚು ಖರ್ಚಾಗಬಹುದು, ಆದರೂ ಕೂಡ ಅದರಿಂದ ಏನಾದರೂ ಪ್ರಯೋಜನವಾದರೆ, ನಮಗೆ ಒಳ್ಳೆಯದು ಎಂಬ ದೃಷ್ಟಿಯಿಂದ ನಾವು ಅದನ್ನು ಟೀಕೆ ಮಾಡಿಲ್ಲ. ಆದರೆ ಇವೊತ್ತು ಎಂಟು ತಿಂಗಳುಗಳಿಗಿಂತ ಮೊದಲೇ ಈಗಿನ ಈ ಕಾಂಗ್ರೆಸ್ ಮಂತ್ರಿಮಂಡಲ ಹೋದರೆ ಅದರಿಂದ ನಮಗೇನೂ ಅಸಮಾಧಾನವಿಲ್ಲ. ಇವರು ಹೋದರೆ ಮತ್ತೊಬ್ಬರು ಬರುತ್ತಾರೆ, ಅದು ಕೃಷ್ಣರವರು ಬರುತ್ತಾರೋ, ಪುನಃ ಬಂಗಾರಪ್ಪನವರು ಬರುತ್ತಾರೋ? ಯಾರು ಬರುತ್ತಾರೋ ಬರಲಿ? ನಮ್ಮ ದೃಷ್ಟಿಯಿಂದ ಅದು ಒಳ್ಳೆಯದೇ. ಅದೊಂದು ಅಸ್ವಾಗತವಾದಂತಹ ಒಂದು ಬೆಳವಣಿಗೆ ನಮ್ಮ ದೃಷ್ಟಿಯಿಂದ ಆಗುವುದಿಲ್ಲ. ಇದೇ ರೀತಿ ಮತ್ತೊಂದು ಆರು ತಿಂಗಳ ನಂತರ ಮತ್ತೊಂದು ಮಂತ್ರಿಮಂಡಲ ಬರಲಿ, ಆಗ ಜನರಿಗೆ ಅಧಿಕಾರದ ಬಗ್ಗೆ ಎಷ್ಟು ಕಚ್ಚಾಟ ಇಲ್ಲಿ ನಡೆಯುತ್ತದೆಂದು ಗೊತ್ತಾಗುತ್ತದೆ. ಯಾವುದೇ ಸ್ಥಿರತೆ, ಭದ್ರತೆ ಅಂತ ಹೇಳಿ ಪುನಃಪುನಃ ಚುನಾವಣೆ ವೇಳೆಯಲ್ಲಿ ಆರಿಸಿ ಬಂದಿರುತ್ತಾರೋ ಅವರು ಮಾಡತಕ್ಕಂಥ ಕೆಲಸವೇನು? ನಾನು ಈ ವಿಚಾರವನ್ನು ಏತಕ್ಕೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ ಅಂದರೆ ಇದರ ಪರಿಣಾಮ ಜನತೆಯ ಮೇಲೆ ಏನಾಗುತ್ತದೆ, ಅಭಿವೃದ್ಧಿ ಕೆಲಸದ ಮೇಲೆ ಏನಾಗುತ್ತದೆ ಎಂಬುದನ್ನು ತಿಳಿಸುವ ಸಲುವಾಗಿ ಪ್ರತಿದಿನ ಬೆಳಿಗ್ಗೆ ವೃತ್ತಪತ್ರಿಕೆಗಳನ್ನು ತೆಗೆದರೆ ಮುಖಪುಟದ ಮೇಲೆ ಯಾರು ಎಷ್ಟು ಜನ ದೆಹಲಿಗೆ ಹೋದರು, ಯಾವಾಗ ಹೋದರು, ಯಾರು ವಾಪಸ್ಸು ಬಂದರು, ದೆಹಲಿಯಿಂದ ಯಾರು ಬರುತ್ತಾರೆ, ದೆಹಲಿಗೆ ಯಾರು ಹೋದರು ಎನ್ನುವುದನ್ನು ಬಿಟ್ಟರೆ ಕರ್ನಾಟಕದಲ್ಲಿ ಅದಕ್ಕಿಂತ ದೊಡ್ಡ ವಿಚಾರ ಬೇರೆ ಯಾವುದೂ ಇಲ್ಲವೇ? ಕರ್ನಾಟಕದಲ್ಲಿ ಏನು ಆಗುತ್ತದೆ, ಇಲ್ಲಿ ಅಭಿವೃದ್ಧಿಯ ಕೆಲಸ ಏನು? ಮಾನ್ಯ ಕೃಷ್ಣಾರವರು ನನ್ನ ಅತ್ಯಂತ ಪ್ರಿಯ ಸ್ನೇಹಿತರು. ನಾನು ಅವರಿಗೆ ಬಹಳ ವಿನಯದಿಂದ ಪ್ರಶ್ನೆಯನ್ನು ಕೇಳಿದೆ; ಈ ಪವರ್ ಸ್ಟ್ರಗಲ್ ಇದ್ದೇ ಇರುತ್ತದೆ. ಆದರೆ ಅವರಾಗಲೀ, ಬೇರೆಬೇರೆ ನನ್ನ ಎದುರಿಗೆ ಕುಳಿತುಕೊಂಡಿರುವಂತಹ ಹಿರಿಯ ಮಂತ್ರಿಗಳು ಕಳೆದ 2-3 ತಿಂಗಳಲ್ಲಿ ಎಷ್ಟು ಸಮಯವನ್ನು ಕರ್ನಾಟಕದ ಅಭಿವೃದ್ಧಿ, ಕರ್ನಾಟಕ

ಬೇರೆಬೇರೆ ಪ್ರಾಜೆಕ್ಟ್‌ಗಳ ವಿಚಾರದಲ್ಲಿ ಕೊಟ್ಟಿದ್ದಾರೆ. ಎಷ್ಟು ಸಮಯ ಕೇವಲ ಶಾಸಕರನ್ನು ಭೇಟಿಯಾಗುವುದು, ಅಲ್ಲಿಗೆ ಹೋಗುವುದು, ಇಲ್ಲಿಗೆ ಹೋಗುವುದು ದೆಹಲಿಗೆ ಹೋಗುವುದಕ್ಕೆ ಖರ್ಚಾಗಿದೆ ಎಂಬುದನ್ನು ಅವರೇ ನೋಡಿಕೊಳ್ಳಬೇಕು. ಈ ಪರಿಸ್ಥಿತಿ ಮತ್ತೆ ಬರಕೂಡದು ಅನ್ನುವಂತಹ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಪರಿಸ್ಥಿತಿ ಬಂದರೆ ಆ ಪಕ್ಷಕಂತೂ ಒಳ್ಳೆಯದು ಅಲ್ಲವೇ ಅಲ್ಲ. ಆದರೆ ನಮ್ಮ ಕರ್ನಾಟಕ ರಾಜ್ಯಕ್ಕೆ ಅದು ಅತ್ಯಂತ ದೊಡ್ಡ ಅಹಿತವನ್ನು ಮತ್ತು ಅಘಾತವನ್ನು ಉಂಟುಮಾಡುತ್ತದೆ. ಮಾನ್ಯ ನಂಜುಂಡಸ್ವಾಮಿಯವರು ತಮ್ಮ ಭಾಷಣದಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡತಕ್ಕಂಥ ಅಗತ್ಯ; ಅವರಿಗೆ ಏನು ಅನ್ನಿಸಿತು ಎಂಬುದು ನನಗೆ ಗೊತ್ತಾಗಲಿಲ್ಲ. ಅವರು ಏನು ಹೇಳಿದರು ಅಂತ ಅಂದರೆ, ಮಾಜಿ ಮುಖ್ಯಮಂತ್ರಿಯವರ ಕಾಲದಲ್ಲಿ ನಡೆದ ಕಂಪ್ಯೂಟರ್ ಖರೀದಿ ಬಗ್ಗೆ ಪ್ರಸ್ತಾಪ ಮಾಡಿ ಮಾನ್ಯ ಬಂಗಾರಪ್ಪನವರ ಹೆಸರನ್ನು ಹೇಳಿದರು. ಆದಾದ ಮೇಲೆ ರೇವಜಿತ್ ಪ್ರಕರಣದ ಬಗ್ಗೆ ಹೇಳಿದರು. ರೇವಜಿತ್ ಪ್ರಕರಣ ಏನೆಂದು ಅವರಿಗೆ ಗೊತ್ತಿದೆಯಾ? ಅದರಲ್ಲಿ ಏನಾದರೂ ಸ್ವಜನ ಪಕ್ಷಪಾತ ಅಥವಾ ಬೇರೆ ಯಾವುದೇ ರೀತಿಯ ಲಂಚ, ಅಥವಾ ಭ್ರಷ್ಟಾಚಾರದ ಆಪಾದನೆ ಇದೆಯಾ? ಹೈಕೋರ್ಟಿನಲ್ಲಿ ಆ ಪಾರ್ಟಿಯ ಪರವಾಗಿ ತೀರ್ಮಾನವಾಯಿತು. ಸುಪ್ರೀಂ ಕೋರ್ಟಿನಲ್ಲಿ ಆ ಹೈಕೋರ್ಟಿನ ತೀರ್ಮಾನವನ್ನು ಸೂಪರ್‌ಸೀಡ್ ಮಾಡಿದರು. ಇದು ಇಡೀ ದೇಶಕ್ಕೆ ಅನ್ವಯಿಸುತ್ತದೆ. ಪ್ರತಿಯೊಂದು ರಾಜ್ಯಸರ್ಕಾರ ಆದರ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಅಪ್ರೋಚ್ ಮಾಡಿದೆ. ಏಕೆ, ಅಲ್ಲಿ ಆಗಿರತಕ್ಕಂಥ ತೀರ್ಮಾನ ಅರ್ಬನ್‌ಸೀಲಿಂಗ್ ಆಕ್ಟ್‌ನಲ್ಲಿ ಒಂದು ಕಲಂ ಅನ್ನು ಸಂವಿಧಾನ ಬಾಹಿರ ಎಂದು ಮಾಡಿದ್ದಾರೆ. ಆದ್ದರಿಂದ ಕಳೆದ 15 ವರ್ಷ ಯಾವ ದಿವಸದಿಂದ ಅರ್ಬನ್ ಸೀಲಿಂಗ್ ಆಕ್ಟ್ ಈದೇಶದಲ್ಲಿ ಜಾರಿಗೆ ಬಂತೋ, ಅಲ್ಲಿಂದ ಆಗಿರತಕ್ಕ ಪ್ರತಿಯೊಂದು ವ್ಯವಹಾರವೂ ರದ್ದಾಗಬೇಕು. ನಮ್ಮ ಸರ್ಕಾರ ಹೋದಮೇಲೆ, ಗೌರ್ನರ್ ಸರ್ಕಾರ ಇದ್ದಾಗ, ಮಾನ್ಯ ವೀರೇಂದ್ರ ಪಾಟೀಲರ ಸರ್ಕಾರ ಇದ್ದಾಗ, ಮಾನ್ಯ ಬಂಗಾರಪ್ಪನವರ ಸರ್ಕಾರ ಇದ್ದಾಗ ಮತ್ತು ಈಗ ಮಾನ್ಯ ವೀರಪ್ಪ ಮೊಯಿಲಿಯವರು ಸರ್ಕಾರದಲ್ಲಿ ಎಷ್ಟು ಕೇಸ್‌ನಲ್ಲಿ ಎಕ್ಸೆಂಪ್ಷನ್ ಕೊಟ್ಟಿಲ್ಲ; ಅದು ಒಂದನ್ನು ತೆಗೆದುಕೊಳ್ಳಿ. ಆಗ ಗೊತ್ತಾಗುತ್ತದೆ. ಏತಕ್ಕೆ ಇವರ ಮೇಲೆ ಕೇಸ್ ಹಾಕಿಲ್ಲ, ಎನ್‌ಕ್ವೈರಿ ಮಾಡಿಲ್ಲ ಎಂಬುದರ ಬಗ್ಗೆ ನನಗೆ ಇನ್ನೂ ಗೊತ್ತಿಲ್ಲ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದ ಮೇಲೆ ಏನಾದರೂ ಎನ್‌ಕ್ವೈರಿ ಮಾಡುವ ಅವಶ್ಯಕತೆ ಅಥವಾ ಆ ಸಂಭವ, ಅಂತಹ ಪರಿಸ್ಥಿತಿ ಇದೆಯೋ ಎಂಬುದು ನನಗೆ ಗೊತ್ತಿಲ್ಲ. ತನಿಖೆ ಮಾಡುತ್ತೀರೋ, ಮಾಡಿ; ನಾನು ಎನ್‌ಕ್ವೈರಿಗೆ ಎಂದೆಂದೂ ಹೆದರಿದವನಲ್ಲ. ನಾನೇ ಎನ್‌ಕ್ವೈರಿ ಮಾಡಿಸಿಕೊಂಡಿದ್ದೇನೆ. ನನ್ನ ಬಂಧುಗಳ ಮೇಲೆ ಮಾಡಿಸಿದ್ದೇನೆ. ನನ್ನ ಮಗನ ಮೇಲೆ ಮಾಡಿಸಿದ್ದೇನೆ. ನನ್ನ ಮೇಲೆ ಮಾಡಿಸಿಕೊಂಡಿದ್ದೇನೆ. ಎನ್‌ಕ್ವೈರಿಗೆ ನಾನು ಹೆದರುವುದಿಲ್ಲ; ಅಷ್ಟೇ ಅಲ್ಲ, ಅವರು ಕೊಟ್ಟಂತಹ ಮನವಿ ಪತ್ರದಲ್ಲಿ ಹೈಕಮಾಂಡಿಗೆ ಮೊಯ್ಲಿಯವರಿಗೆ ಹೆಗಡೆಯವರು ಏತಕ್ಕೆ ಸಪೋರ್ಟ್ ಮಾಡುತ್ತಿದ್ದಾರೆಂದು ತಿಳಿಸಿದ್ದಾರೆ. ಇದು ಮೊದಲನೆಯ ಅವರ ಭ್ರಾಂತಿ. ಅಧಿಕಾರ ಯಾರೇ ಮಾಡಲಿ, ಮಾನ್ಯ ಬಂಗಾರಪ್ಪನವರು ಮಾಡಲಿ, ಮಾನ್ಯ ಮೊಯ್ಲಿಯವರು ಮಾಡಲಿ, ಕೃಷ್ಣರವರು ಮಾಡಲಿ, ನಾನು ಸಣ್ಣ ರಾಜಕೀಯವನ್ನು ತರತಕ್ಕಂಥ ಮನುಷ್ಯ ಅಲ್ಲ. ಮಾನ್ಯ ದಿವಂಗತ ರಾಜೀವ್‌ಗಾಂಧಿಯವರು ನನ್ನ ಮೇಲೆ ದ್ವೇಷ ಇಟ್ಟುಕೊಂಡು ನನ್ನನ್ನು ರಾಜಕೀಯವಾಗಿ ಮುಗಿಸಬೇಕೆಂದು ಪ್ರಯತ್ನ ಮಾಡಿದರೋ ಅಂತಹವರು ಹೇಳಿದ ನಾಲ್ಕು ಮಾತುಗಳು ಒಳ್ಳೆಯದು

ಇದ್ದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತಿನ ಪ್ರಧಾನಮಂತ್ರಿ ಮಾನ್ಯ ನರಸಿಂಹರಾವ್‌ರವರು ಪ್ರಾರಂಭದಲ್ಲಿ ಹೇಳಿದ ಮಾತನ್ನು ನಾನು ಸ್ವಾಗತ ಮಾಡಿದ್ದೇನೆ. ಯಾರು ವಿರೋಧಿಪಕ್ಷದಲ್ಲಿ ಸ್ವಾಗತ ಮಾಡುತ್ತಾರೆ ಹೇಳಿ? ಅದರಲ್ಲಿ ನನ್ನ ಸ್ವಾರ್ಥ ಇದೆಯಾ ಹೇಳಿ? ಈ ದೇಶದ ಹಿತದ ಸಲುವಾಗಿ ಈ ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಒಂದು ಒಳ್ಳೆಯ ಮಾತನ್ನು, ಒಳ್ಳೆಯ ಕಾರ್ಯಕ್ರಮವನ್ನು ಯಾರಾದರೂ ತಂದರೆ ಅದನ್ನು ವಿರೋಧಿಸತಕ್ಕಂಥ ಅತ್ಯಂತ ಮೂರ್ಖ ಅಥವಾ ಕುತ್ಸಿತ ಅಥವಾ ಕೀಳು ಮಟ್ಟದ ರಾಜಕಾರಣಿ ನಾನಲ್ಲ. ನಾನು ಏತಕ್ಕೆ ಮಾನ್ಯ ಮೊಯಿಲಿಯವರಿಗೆ ಬೆಂಬಲ ಕೊಡುತ್ತೇನೆ? ಮೊಯಿಲಿಯವರಿಗೆ ಮುಖ್ಯಮಂತ್ರಿಯಾಗಿರಲು ನಾನು ಬೆಂಬಲವನ್ನು ಕೊಟ್ಟಿಲ್ಲ. ಮಾನ್ಯ ಬಂಗಾರಪ್ಪನವರು ಒಂದು ಮಾತನ್ನು ತಮ್ಮ ಭಾಷಣದಲ್ಲಿ ಹೇಳಿದರು. ಆ ಕುಲದೀಪ್ ಸಿಂಗ್ ಕಮೀಷನ್ ವರದಿಯನ್ನು 10 ಸಲ ಜಾರಿಗೆ ತನ್ನಿ ಎಂದು ನಾನು ಹೇಳುತ್ತೇನೆ. ಅದರಲ್ಲಿ ಏನು ಯಾವ ತರಹದ ಅಪರಾಧವನ್ನು ನಾನು ಮಾಡಿದ್ದೇನೆಂದು ಹೇಳತಕ್ಕಂಥದ್ದು. ಜನರ ಮುಂದೆ ಬರಲಿ; ಆಗ ನನಗೂ ಒಂದು ಅವಕಾಶ ಸಿಗುತ್ತದೆ. ಕುಲದೀಪ್‌ಸಿಂಗ್ ಕಮೀಷನ್ ಅಪಾಯಿಂಟ್‌ಮೆಂಟಿನ ಹಿನ್ನೆಲೆ ಏನು? ಆ ಜಡ್ಜ್‌ನ ಹಿನ್ನೆಲೆ ಏನು? ಏತಕ್ಕಾಗಿ ಇದನ್ನು ಬರೆದರು; ಅದನ್ನು ನಾನು ಎಕ್ಸ್‌ಪೋಸ್ ಮಾಡುತ್ತೇನೆ; ಬರಲಿ; ನಾನು ಹೆದರುವುದಿಲ್ಲ. ನಾನು ಜೀವನದಲ್ಲಿ ಎಂದೂ ಸತ್ಯವನ್ನು ಎದುರಿಸಲಿಕ್ಕೆ ಹೆದರಿದವನಲ್ಲ. ಆ ಒಂದು ಭಯದಿಂದ ಆ ಒಂದು ಉದ್ದೇಶದಿಂದ ನಾನು ಒಂದು ಸರ್ಕಾರಕ್ಕೆ ಬೆಂಬಲ ಕೊಡುವುದಾಗಲಿ, ಅಥವಾ ವಿರೋಧ ಮಾಡುವುದಾಗಲಿ ಮಾಡತಕ್ಕಂಥ ವ್ಯಕ್ತಿ ಅಲ್ಲ. ನನ್ನ ಪ್ರಶ್ನೆ ಇಷ್ಟೇ. ನಿಮ್ಮ ಪಕ್ಷದ ನಾಯಕರು ಯಾರು ಅಂತ ಹೇಳತಕ್ಕಂಥದ್ದು ತೀರ್ಮಾನವನ್ನು ನೀವು ಮಾಡಿ ಮತ್ತು ಎಂತಹ ನಾಯಕರು ಇರಬೇಕೆಂದು ಹೇಳತಕ್ಕ ತೀರ್ಮಾನ ನಿಮಗೆ ಬಿಟ್ಟಿದ್ದು. ಆದರೆ ಜನತೆಯ ಅದೃಷ್ಟದ ಜೊತೆಗೆ ನೀವು ಚೆಲ್ಲಾಟವನ್ನು ಮಾಡುತ್ತೀರಿ; ನಿಮ್ಮ ವೈಯಕ್ತಿಕವಾದಂತಹ ಸ್ವಾರ್ಥ ಸಾಧಿಸಲು ಅಥವಾ ತಾವು ಬಯಸತಕ್ಕಂಥ ಸ್ಥಾನ ಸಿಗಲಿಲ್ಲ ಎಂದು ಈ ರೀತಿ ಮಾಡುವುದು ಸರಿಯಲ್ಲ. ಅದು ಇವತ್ತಲ್ಲ ನಾಳೆ ಸಿಗುತ್ತದೆ. ಒಂದು ಪಕ್ಷದ ಶಿಸ್ತಿನ ಕಾರ್ಯಕರ್ತನಾಗಿ ಕೆಲಸ ಮಾಡಿದಾಗ ಇವತ್ತು ಅಲ್ಲ, ನಾಳೆ ಸಿಕ್ಕೇ ಸಿಗುತ್ತದೆ. ಇವತ್ತಿನ ಮುಖ್ಯಮಂತ್ರಿ ಹೋದರೂ, ನಾಳೆ ಮಾನ್ಯ ಕೃಷ್ಣರವರು ಮುಖ್ಯಮಂತ್ರಿಯಾದರು ಎಂದು ಇಟ್ಟುಕೊಳ್ಳೋಣ, ಆಗ ಮಾನ್ಯ ಬಂಗಾರಪ್ಪನವರು ಬಿಡುತ್ತಾರಾ? ಅವರು ಜೊತೆಯಲ್ಲಿರುವ ಸಮರ್ಥಕರು ಬಿಡುತ್ತಾರಾ? ಅಥವಾ ಮೊಯಿಲಿಯ ಮೇಲೆ ಅಭಿಮಾನ ಇದ್ದಂಥವರು ಬಿಡುತ್ತಾರಾ?

ಶ್ರೀ ವಿನಯಕುಮಾರ್ ಸೊರಕೆ : – ನೀವು ದೇವೇಗೌಡರನ್ನು ಬಿಡುತ್ತೀರಾ?

ಶ್ರೀ ರಾಮಕೃಷ್ಣಹೆಗಡೆ : – ಆದರೆ ನಮ್ಮಿಂದ ನೀವು ಪಾಠ ಕಲಿಯುವ ರೀತಿಯಲ್ಲಿ ನಾನು ಈಗ ವರ್ತಿಸುತ್ತಿದ್ದೇನೆ. ಆದರಿಂದ ಪಾಠ ಕಲಿತುಕೊಳ್ಳಿ.

(ಗೊಂದಲ)

ಶ್ರೀ ರಾಮಕೃಷ್ಣಹೆಗಡೆ : – ಅವರ ಸ್ವಭಾವಕ್ಕೂ ನನ್ನ ಸ್ವಭಾವಕ್ಕೂ ಒಂದೇ ಒಂದು ವ್ಯತ್ಯಾಸ ಇದೆ. ಆ ವ್ಯತ್ಯಾಸ ಏನು ಅಂದರೆ ನನ್ನ ಸ್ವಭಾವದಲ್ಲಿ ನಾನು ತಪ್ಪು ಮಾಡಿದರೆ ಆ ತಪ್ಪನ್ನು ಒಪ್ಪಿಕೊಳ್ಳುತ್ತೇನೆ. ಆ ತಪ್ಪನ್ನು ಪುನಃ ಮಾಡದೇ ಇರುವಂತಹ ರೀತಿಯಲ್ಲಿ ಎಚ್ಚರಿಕೆ ವಹಿಸುತ್ತೇನೆ. ಆದರೆ ಅವರ ಸ್ವಭಾವ

ಏನು ಅಂದರೆ, ಅದೇ ತಪ್ಪನ್ನು ಸಾವಿರ ಸಲ ಮಾಡುತ್ತಾರೆ. ಸಮರ್ಥನೆ ಮಾಡಿಕೊಳ್ಳುತ್ತಾರೆ. ಅದಕ್ಕಾಗಿ ಕರ್ನಾಟಕದ ಜನತೆಯ ಅದೃಷ್ಟದ ಜೊತೆಗೆ ನೀವು ಚೆಲ್ಲಾಟ ಮಾಡಬೇಡಿ. ಇಷ್ಟೊಂದು ದೊಡ್ಡ ಬಹುಮತದಿಂದ ಆರಿಸಿ ಬಂದಂತಹ ನಿಮ್ಮ ಕಾಂಗ್ರೆಸ್ ಪಾರ್ಟಿಗೆ ಒಂದು ಜವಾಬ್ದಾರಿ ಇರಬೇಕು. ಜವಾಬ್ದಾರಿ ಏನೆಂದರೆ ಒಂದು ಸಮರ್ಥ ನಾಯಕತ್ವವನ್ನು ಕೊಡುವುದು ; ಪ್ರಾಮಾಣಿಕ ನಾಯಕತ್ವವನ್ನು ಕೊಡುವುದು. ವ್ಯತ್ಯಾಸ ಇದ್ದೇ ಇರುತ್ತದೆ. ಸಣ್ಣಪುಟ್ಟ ವಿಚಾರದಲ್ಲಿಯೂ ವ್ಯತ್ಯಾಸ ಇರಬಹುದು. ಆ ಸಣ್ಣ ಪುಟ್ಟ ವಿಚಾರದಲ್ಲಿ ವ್ಯತ್ಯಾಸ ಇದ್ದರೆ ಅದನ್ನು ತಕ್ಷಣ ಮರೆತು ದೊಡ್ಡ ಪಾಲಿಸಿಗೆ ಸಂಬಂಧಪಟ್ಟಂಥ ವಿಚಾರದಲ್ಲಿ ವ್ಯತ್ಯಾಸ ಇದ್ದರೆ ಅದರ ಬಗ್ಗೆ ಚರ್ಚೆ ಮಾಡಿ ಬಗೆಹರಿಸಿಕೊಳ್ಳಿ. ನನ್ನ ದೃಷ್ಟಿಯಲ್ಲಿ ಅಷ್ಟು ಜನ ಅಲ್ಲಿದ್ದಂಥ ಸಮರ್ಥರ ಬಗ್ಗೆ ನನಗೆ ಯಾರ ಮೇಲೂ ವಿಶೇಷವಾದಂತಹ ಪ್ರೀತಿ ಅಥವಾ ಪ್ರೇಮ ಅಥವಾ ಯಾವ ಬಗ್ಗೆಯೂ ಜಿಗುಪ್ಸೆ ಅಥವಾ ಒಂದು ಕೆಟ್ಟ ಭಾವನೆ ಇಲ್ಲ. ನನಗೆ ಏನೆಂದರೆ ಮೂರುವರೆ ವರ್ಷದಲ್ಲಿ ಮೂರು ಸರ್ಕಾರವಾಯಿತು ಮತ್ತು ಇನ್ನು ಮತ್ತೆ ಎರಡು ಸರ್ಕಾರ ಬಂದರೆ ನಮಗೆ ಆಗತಕ್ಕಂಥ ಲಾಭ ನಿಮಗೆ ಆಗತಕ್ಕಂಥ ಹಾನಿ ಅದನ್ನು ನೋಡಿಕೊಳ್ಳಿ. ಇವತ್ತು ಏನು....

ಶ್ರೀ ಎಸ್. ಬಂಗಾರಪ್ಪ:- ತಾವು ಒಂದು ನಿಮಿಷ ಕುಳಿತುಕೊಳ್ಳುವ ಹಾಗಿದ್ದರೆ...

ಶ್ರೀ ರಾಮಕೃಷ್ಣಹೆಗಡೆ :- ಎರಡು ನಿಮಿಷ ಕುಳಿತುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಹಾಗಾದರೆ ನಿಮಗೆ ಡಬಲ್ ಥ್ಯಾಂಕ್ಸ್. ಬಹಳ ದೊಡ್ಡ ವಿಚಾರವನ್ನು ನಾನು ನಿಮ್ಮಿಂದ ನಿರೀಕ್ಷೆ ಮಾಡಿದ್ದೆ. ಅದಕ್ಕಾಗಿ ನಿಮ್ಮ ಭಾಷಣವನ್ನು ಕೇಳೋಣ ಎಂದು ಕುಳಿತುಕೊಂಡಿದ್ದೆ. ಆದರೆ ಅದು ಇಲ್ಲ ಎನ್ನತಕ್ಕಂಥ ಮಾತನ್ನು ಅಥವಾ ಆ ನಂಬಿಕೆ ಹುಸಿ ಆಯಿತು ಎನ್ನುವ ಮಾತನ್ನು ನಾನು ಹೇಳುವ ಅವಶ್ಯಕತೆ ಸದನದಲ್ಲಿ ಇಲ್ಲ ಎಂದು ನಾನು ಭಾವಿಸಿದ್ದೇನೆ. ಆದರೂ ಕೂಡ ಪಾಪ ತಾವು ತಿಳಿದ ಹಾಗೆ ತಾವು ಮಾತನಾಡಿರಬಹುದು. ಆ ಮಾರ್ಜಿನ್ ಇಡೋಣ. ಅಷ್ಟು ಸಾಕು. ತಾವು ಮಾತನಾಡತಕ್ಕಂಥ ವಿಚಾರದಲ್ಲಿ ಎರಡೇ ಎರಡು ವಿಚಾರ ಬೇಕು ನನಗೆ. ಅವಿಶ್ವಾಸ ನಿರ್ಣಯದ ಬಗ್ಗೆ ಮಾನ್ಯ ಅಧ್ಯಕ್ಷರ ಅನುಮತಿಯನ್ನು ಪಡೆದು ತಾವು ಮಾತನಾಡುತ್ತಿದ್ದೀರಿ; ಬಹಳ ಸಂತೋಷ. ತಮಗೆ ಮಾತನಾಡತಕ್ಕಂಥ ಹಕ್ಕು ಇದೆ. ಆ ಹಕ್ಕನ್ನು ಎಲ್ಲರೂ ಸೇರಿ ನಾವು ಮಾನ್ಯತೆ ಮಾಡುತ್ತೇವೆ. ಆದರೆ ಒಂದು ಮಾತನ್ನು ತಾವು ಹೇಳಿದ್ದಿರಿ ಒಂದು ಕಾಲದಲ್ಲಿ. ಮಧ್ಯೆಮಧ್ಯೆ ಕೆಲವು ವಿಚಾರಗಳನ್ನು ನೀವು ಸೇರಿಸದಿದ್ದರೆ ನಿಮಗೆ ಮಾತನಾಡುವುದಕ್ಕೆ ಬರುವುದಿಲ್ಲ ಎಂದು ನಮಗೆಲ್ಲಾ ಗೊತ್ತಿದೆ. ಅದನ್ನು ಸೇರಿಸಲೇ ಬೇಕು. ಸೇರಿಸದಿದ್ದರೆ ನಿಮಗೆ ಆಗುವುದಿಲ್ಲ ಪಾಪ. ತೊಂದರೆಯಾಗುತ್ತದೆ, ನನಗೆ ಗೊತ್ತು. ತಾವು ಹೇಳಿದಿರಿ, ನಾನು ಕುತ್ಸಿತ ರಾಜಕಾರಣಿಯಲ್ಲ, ತಾವು ರೆಕಾರ್ಡ್ ತೆಗೆದುಕೊಂಡು ನೋಡಬಹುದು.ನಾನು ಕುತ್ಸಿತ ರಾಜಕಾರಣಿಯಲ್ಲ, ಮತ್ತೊಂದಲ್ಲ ಎನ್ನುವ ಮಾತನ್ನು ಹೇಳಿದಿರಿ. ಕೊನೆಯದಾಗಿ ನನ್ನ ಈ ಪ್ರಶ್ನೆಗೆ ಉತ್ತರ ಕೊಟ್ಟರೆ ರಾಜ್ಯದ ಜನತೆಗೆ ಅದು ಗೊತ್ತಾದರೆ ಬಹಳ ಒಳ್ಳೆಯದಾಗುತ್ತದೆ. ನೀವು ಮಾತನಾಡಬೇಕಾದರೆ, ನಮ್ಮಲ್ಲಿ ನಾಯಕತ್ವ ಮತ್ತೆ ಬದಲಾವಣೆಯಾಗಿಬಿಟ್ಟರೆ ನಾಳೆ ಕೃಷ್ಣ ಆಗಿಬಿಟ್ಟರೆ ಬಂಗಾರಪ್ಪನವರು ಸುಮ್ಮನೆ ಕುಳಿತು ಕೊಳ್ಳುತ್ತಾರಾ ಎಂದಿರಿ. ನಮಗೆಲ್ಲರಿಗೂ ಇದರಿಂದ ಅನುಮಾನ ಬಂದಿದೆ ಎಂದು ನಾನು ಭಾವಿಸುತ್ತೇನೆ. ಈ ಸದನದಲ್ಲಿ; ಅಂದರೆ ನಾಯಕತ್ವದ ಬದಲಾವಣೆಯಾಗಬಾರದೆಂಬ ಅರ್ಥ ನಿಮ್ಮದಾಗಿದ್ದರೆ ಈ ಅವಿಶ್ವಾಸ ನಿರ್ಣಯ ತರತಕ್ಕಂಥ ಅವಶ್ಯಕತೆ ನಿಮಗೆ ಎಲ್ಲಿತ್ತು? ಏತಕ್ಕೆ ಆ ರೀತಿ ಮಾಡುವುದಕ್ಕೆ

ಹೋಗಬೇಕಾಗಿತ್ತು? ಒಂದು ವೇಳೆ ನೇರವಾಗಿ ಹೇಳಿಬಿಡಿ. ನಾವು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿರತಕ್ಕಂಥದ್ದು ಸುಮ್ಮನೆ ನಾವು ಮಾಡಬೇಕಾಗಿದೆ, ಮಾಡಿದ್ದೇವೆ ಅಷ್ಟು ಸಾಕು ಎಂದು; ನಾನು ದೊಡ್ಡ ಪದ ಪ್ರಯೋಗ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಸ್ವಲ್ಪ ವ್ಯಾಕರಣ ಹುಡುಕಿ ಮಾತನಾಡುವುದಕ್ಕೆ ಹೋಗುತ್ತೀರಿ. ನಾವು ಸ್ವಲ್ಪ ವ್ಯಾಕರಣ ಬದ್ಧವಾಗಿ ಮಾತನಾಡುತ್ತೇವೆ. ಆದರೆ ಕೆಲವು ಸಾರಿ ವ್ಯಾಕರಣ ಬಿಟ್ಟು ಕೂಡ ಮಾತನಾಡುತ್ತೇವೆ. ಜನಸಾಮಾನ್ಯರಿಗೆ ತಿಳಿಯಾಗಿರತಕ್ಕಂಥ ಭಾಷೆಯಲ್ಲಿ ಮಾತನಾಡತಕ್ಕಂಥ ಸ್ವಭಾವ ಕೂಡ ನಮಗಿದೆ. ತಾವು ಹೇಳಿದಿರಿ, ಅಂದರೆ ಮುಂದೆ ಬರತಕ್ಕಂಥವರ ಬಗ್ಗೆ ಏನೂ ಮಾಡಬಾರದು ಎಂದರೆ ಮಾಡಬೇಕು ಎನ್ನತಕ್ಕಂಥ ಅರ್ಥದಿಂದ ನಾನು ಹೇಳುತ್ತಿಲ್ಲ. ಎಲ್ಲಾ ಪಕ್ಷದಲ್ಲೂ ಕೂಡ ಆ ರೀತಿ ವ್ಯತ್ಯಾಸ ನಾಯಕತ್ವದ ಬಗ್ಗೆ ಅಭಿಪ್ರಾಯ ವಿಭಿನ್ನವಾಗಿರುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದಿರಿ. ಅಂಥ ಸಂದರ್ಭ ಬಂದಾಗ ಅದು ಆಯಾ ಮಾನ್ಯ ಸದಸ್ಯರುಗಳಿಗೆ ಹಾಗೂ ಆಯಾ ಪಕ್ಷಕ್ಕೆ ಸೇರಿರತಕ್ಕಂಥವರ ವಿಚಾರ. ಹಾಗೆಯೇ ಬಿಡುತ್ತಾರಾ ಎಂದರೆ ಅಲ್ಲಿಗೆ ಮೊಯಿಲಿಯವರು ಮುಂದುವರಿಯಬೇಕು ಎನ್ನತಕ್ಕಂಥ ಅಭಿಪ್ರಾಯ ನಿಮಗೆ ಇದ್ದರೆ ನೇರವಾಗಿ ಹೇಳಿಬಿಡಿ. ಈ ಸರ್ಕಾರದ ಬಗ್ಗೆ ಮೊಯಿಲಿಯವರು ನಾಯಕತ್ವ ಇರತಕ್ಕಂಥ ಸರ್ಕಾರದ ಬಗ್ಗೆ ನಮಗೆ ಸಂಪೂರ್ಣ ನಂಬಿಕೆ ಇದೆ ಎನ್ನತಕ್ಕಂಥ ಮಾತನ್ನು ನೇರವಾಗಿ ಆಡಿ ಏತಕ್ಕೆ ಘನತೆ ಗೌರವ ಉಳಿಸಿಕೊಳ್ಳಬಾರದು? ನೀವು ಆಗ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ್ದೀರಲ್ಲಾ, ನಾವು ಇದಕ್ಕೆ ಪ್ರೆಸ್ ಮಾಡುವುದಿಲ್ಲ, ಘನತೆ ಗೌರವದಿಂದ ನಮ್ಮ ಸ್ಥಾನಗಳಿಗೆ ನಾವು ತೆರಳುತ್ತೇವೆ ಎನ್ನತಕ್ಕಂಥ ಮಾತನ್ನು ಏತಕ್ಕೆ ಗೌರವದಿಂದ ಆಡಬಾರದು? ಏತಕ್ಕೆ ಸುತ್ತು ಹಾಕಿ ರಾಜಕೀಯ ಕಲಸುಮೇಲೋಗರ ಮಾಡಿ ಈ ರೀತಿ ಸಿಕ್ಕಿಹಾಕಿಕೊಂಡು ಸುಮ್ಮನೆ ತೊಂದರೆಗೆ ಒಳಗಾಗುತ್ತೀರಿ. ಕುತ್ಸಿತ ರಾಜಕಾರಣದ ಬಗ್ಗೆ ತಾವು ಮಾತನಾಡಿದ್ದೀರಿ. ಒಂದೇ ಒಂದು ವಿಚಾರ ನಿಮ್ಮ ಬಗ್ಗೆ ರಾಜ್ಯದ ಜನತೆಗೆ ಗೊತ್ತಿದೆ. ರಾಷ್ಟ್ರಕ್ಕೂ ಕೂಡ ಗೊತ್ತಿದೆ. ಏನೆಂದರೆ, ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಭಾಷಣ ಮಾಡಿರತಕ್ಕಂಥವರು ನೀವು. ಅದನ್ನು ಬಿಟ್ಟು ನೀವು ಯಾವಾಗಲೂ ಭಾಷಣ ಮಾಡುವುದಿಲ್ಲ. ಆದರೆ ಅದನ್ನು ಪಾಲನೆ ಮಾಡಿರತಕ್ಕಂಥ ವಿಚಾರ ನಿಮಗೆ ಗೊತ್ತಿಲ್ಲ; ಪಾಲನೆ ವಿಚಾರ ಎನ್ನತಕ್ಕಂಥದ್ದು ಜನತೆಗೆ ಗೊತ್ತಿದೆ. ನೀವು ಒಪ್ಪದಿದ್ದರೂ ಕೂಡ. 1983ರಲ್ಲಿ ಚುನಾವಣೆ ನಡೆದಂಥ ಕಾಲದಲ್ಲಿ ನಾವು ಕ್ರಾಂತಿರಂಗದಲ್ಲಿ ಇದ್ದೆವು ಆಗ. ತಮಗೆಲ್ಲಾ ಗೊತ್ತಿದೆ. ಆ ಸಂದರ್ಭದಲ್ಲಿ ಜನತಾ ರಂಗ ಇದ್ದಂಥ ಕಾಲದಲ್ಲಿ ನೀವು ಯಾವ ಎಲೆಕ್ಷನ್‌ಗೆ ಕಂಟೆಸ್ಟ್ ಮಾಡಿದಿರಿ? ಏನು ಈ ಸದನದ ಎಲೆಕ್ಷನ್‌ಗೆ ಕಂಟೆಸ್ಟ್ ಮಾಡಿ ಚುನಾವಣೆಯಲ್ಲಿ 1983ರಲ್ಲಿ ನೀವು ಗೆದ್ದು ಬಂದಿದ್ದಿರಾ? ಅಥವಾ ಮೇಲ್ಮನೆಯ ಸದಸ್ಯರಾಗಿದ್ದಿರಾ ನೀವು? ನೀವು ಕುತ್ಸಿತ ರಾಜಕಾರಣವನ್ನು ಮಾಡಿ ಯಾವುದೇ ಸದನದ ಸದಸ್ಯರಲ್ಲದಿರತಕ್ಕವರು ಮುಖ್ಯಮಂತ್ರಿಯಾಗತಕ್ಕದ್ದು ಕುತ್ಸಿತ ರಾಜಕಾರಣವಲ್ಲವೇ? ಇವತ್ತು ನೀವು ಕುತ್ಸಿತ ರಾಜಕಾರಣ ಅಲ್ಲ ಎಂದು ಭಾಷಣ ಮಾಡುವುದಕ್ಕೆ ಬರುವುದಿಲ್ಲ. ಒಬ್ಬ ಮನುಷ್ಯ ತನ್ನ ಸಾರ್ವಜನಿಕ ಜೀವನದಲ್ಲಿ ಅದನ್ನು ಪರಿಪಾಲನೆ ಮಾಡತಕ್ಕ ಒಂದು ನಂಬಿಕೆ ಅವರಲ್ಲಿದ್ದರೆ, ಅದನ್ನು ಜಾರಿಗೆ ತರತಕ್ಕ ವಿಚಾರಧಾರೆ ಏನಿದೆ, ಅದು ಅಡಿಗಡಿಗೂ ಹೆಜ್ಜೆಹೆಜ್ಜೆಗೂ ಇರಬೇಕಾಗುತ್ತದೆ. ನನಗೆ ಗೊತ್ತಿದೆ. ಮೊನ್ನೆ ತಾವು ಬಸವನಗುಡಿಯಲ್ಲಿ ಎಲ್ಲೋ ಭಾಷಣ ಮಾಡಿದ್ದು ನಾನು ಪತ್ರಿಕೆಯಲ್ಲಿ ನೋಡಿದೆ. ನಾನು ಅಧಿಕಾರಕ್ಕಾಗಿ ಆಸೆ ಪಡುವವನಲ್ಲ. ಈ ಮಾತನ್ನು ಅವತ್ತೂ ಕೂಡ ನೀವು ಆಡಿದ್ದಿರಿ. ಹಳೇ ಪತ್ರಿಕೆಗಳನ್ನು ತೆಗೆದರೆ ಗೊತ್ತಾಗುತ್ತದೆ. ನೀವು ಇದೇ ಮಾತನ್ನು ಹೇಳಿಕೊಂಡು, ಹೇಳಿಕೊಂಡು

ಬರುತ್ತೀರಿ. ಬೇರೆ ಜನ ಪಾಪ ದುಡಿಯುವುದಕ್ಕೆ ರೆಡಿ ಆಗಿರುತ್ತಾರೆ; ನಿಮ್ಮ ಪಾರ್ಟಿಯವರ ಹಣೆ ಬರಹ ಅಷ್ಟೇ. ಅವೆಲ್ಲಾ ಪಾಪ ಹುಳಗಳಾಗಿ ಹುತ್ತ ಕಟ್ಟುತ್ತವೆ; ಕೊನೆಗೆ ನೀವು ಹಾವಾಗಿ ಬಂದು ಆ ಹುತ್ತದಲ್ಲಿ ಸೇರಿಕೊಳ್ಳುತ್ತೀರಿ. ಇದು ಎಲ್ಲರಿಗೂ ಕೂಡ ಗೊತ್ತಿರತಕ್ಕದ್ದು. ಆದ್ದರಿಂದ ಈ ಹಾವಾಗಿ ಬಂದು ಬೇರೆಯವರು ಕಟ್ಟಿರತಕ್ಕ ಹುತ್ತದಲ್ಲಿ ಸೇರುವುದನ್ನು ಬಿಟ್ಟು ಗೌರವದಿಂದ ನಡೆನುಡಿಯ ಮುಖಾಂತರ ಆಚರಣೆಯ ಮುಖಾಂತರ ನೇರವಾಗಿ ರಾಜಕಾರಣವನ್ನು ಮಾಡುವುದನ್ನು ಈಗಲಾದರೂ ಕೊನೆಯ ಪಕ್ಷ ಕಲಿಯಿರಿ. ಇನ್ನೇನು ಕೊನೆಗಾಲ ನಮಗೂ ನಿಮಗೂ ಬರುತ್ತಿದೆ ರಾಜಕಾರಣದಲ್ಲಿ ಎಂದು ನಾನು ಭಾವಿಸಿದ್ದೇನೆ. ಈಗಲಾದರೂ ಅದನ್ನು ಕಲಿಯಿರಿ. ಒಂದು ವೇಳೆ ಅದನ್ನು ಆಚರಣೆಯಲ್ಲಿ ತರಲಿಕ್ಕೆ ಆಗದಿದ್ದರೆ ಕೊನೆಗೆ ಮಾತಿನಲ್ಲಿ ಆದರೂ ಆಡತಕ್ಕ ಸೌಜನ್ಯ ತೋರಿಸಿ; ಘನತೆ, ಗಾಂಭೀರ್ಯ, ಗೌರವ ನಾವೆಲ್ಲಾ ಸೇರಿ ಏನು ಈ ಸದನದಲ್ಲೆ ಕೊಡಬೇಕೆಂದು ಇದ್ದೇವೆ, ಅದನ್ನು ಪಡೆಯತಕ್ಕ ಶಕ್ತಿಯನ್ನು ಉಳಿಸಿಕೊಳ್ಳಿ ಅಷ್ಟು ಸಾಕು, ಅಧ್ಯಕ್ಷರಿಗೆ ವಂದನೆ.

ಶ್ರೀ ರಾಮಕೃಷ್ಣಹೆಗಡೆ:- ನನಗೆ ಪಾಠ ಹೇಳಿದಂತಹ ಮಾನ್ಯ ಬಂಗಾರಪ್ಪನವರಿಗೆ ವಂದನೆಗಳು. ಅವರು ಎರಡು ವಿಚಾರ ಎತ್ತಿದ್ದಾರೆ. ಎರಡಕ್ಕೂ ಉತ್ತರ ಕೊಡುತ್ತೇನೆ. ನಾನು ಹೇಗೆ ಲಕ್ಷ್ಯಗೊಟ್ಟು ಕೇಳಿದ್ದೆನೋ ನನ್ನ ಮಾತು ಮುಗಿಯುವರೆಗೆ ಅಷ್ಟೇ ಲಕ್ಷ್ಯಗೊಟ್ಟು ಅವರೂ ಕೇಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಮೊದಲನೆಯದು ನಿಮ್ಮ ಮನಸ್ಸಿನಲ್ಲಿ ಇವತ್ತಿನ ತಮ್ಮ ಪಕ್ಷದ ಲೀಡರ್ ಅನ್ನು ಬದಲಾವಣೆ ಮಾಡಕೂಡದು ಮತ್ತು ಇದೇ ಸರ್ಕಾರ ಇರಬೇಕು ಎನ್ನತಕ್ಕದ್ದು ಗೊತ್ತಾಗುತ್ತದೆ. ಅದಕ್ಕಾಗಿ ಈ ಒಂದು ಅವಿಶ್ವಾಸ ನಿರ್ಣಯವನ್ನು ಏಕೆ ತಂದಿರಿ ಎಂದು ಕೇಳಿದರು. ನಾನು ಭಾಷಣ ಪ್ರಾರಂಭ ಮಾಡುವಾಗ ಅವರು ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ:- ನಾನು ಮೊದಲಿನಿಂದ ಇದ್ದೇನೆ.

ಶ್ರೀ ರಾಮಕೃಷ್ಣಹೆಗಡೆ: ಹಾಗಿದ್ದರೆ ಆ ಮಾತನ್ನು ನೀವು ಹೇಳುವುದಿಲ್ಲ. ಏಕೆಂದರೆ ನಾನು ಹೇಳಿದೆ. 26-27 ಜನ ನಾವಿದ್ದವರು ನೋ-ಕಾನ್‌ಫಿಡೆನ್ಸ್ ಮೋಷನ್ ತಂದು ಇಲ್ಲಿ ಸರ್ಕಾರವನ್ನು ತೆಗೆದು ಹಾಕತಕ್ಕದ್ದು ಸಾಧ್ಯ ಇಲ್ಲ. It is an exercise in futility ಎಂದು ನಾನು ಹೇಳಿದೆ. ಅದು ನಿಮಗೆ ಅರ್ಥ ಆಗಲಿಲ್ಲ ಎಂದು ಕಾಣುತ್ತದೆ. ನಾನು ಹೇಳಿದೆ, ಅದರಲ್ಲಿ ಒಂದು ಉದ್ದೇಶ ಏನು ಅಂದರೆ, ದೂರದ ಆಸೆ, ಇತ್ತು. ನೀವೆಲ್ಲಾ ಆ ಕಡೆ ಕುಳಿತವರು ಇದ್ದಾರಲ್ಲಾ, ಈ ಸರ್ಕಾರ ಹೋಗಬೇಕು ಎಂದು ಹೇಳುವವರು, ಅವರ ಬೆಂಬಲ ನಮಗೆ ಸಿಗಬಹುದು ಎಂದು ಹೇಳತಕ್ಕ ಮಾತನ್ನು ..

(ಗೊಂದಲ)

ಶ್ರೀ ರಾಮಕೃಷ್ಣಹೆಗಡೆ: ಮತ್ತು, ಮಾನ್ಯ ಅಧ್ಯಕ್ಷರೇ.

ಶ್ರೀ ಕೆ.ಹೆಚ್. ರಂಗನಾಥ್:ಇಷ್ಟು ಅನುಭವ ಇದ್ದು ಕೂಡ ಅದನ್ನು ತಾವು ಆಸೆ ಮಾಡುತ್ತೀರಾ?

ಶ್ರೀ ರಾಮಕೃಷ್ಣಹೆಗಡೆ: -ನಮ್ಮ ಆಸೆಗೆ ಮಾನ್ಯ ಬಂಗಾರಪ್ಪನವರು ಮೂಲ ಕಾರಣ ಎಂದು ಹೇಳುತ್ತೇನೆ. ಆಮೇಲೆ ಈ ಅವಿಶ್ವಾಸ ನಿರ್ಣಯವನ್ನು ಆಗಾಗ ವಿರೋಧಿಪಕ್ಷ ತರುತ್ತದೆ ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ. ಅದರ ಉದ್ದೇಶ ಏನು? ಅವರು ತಂದ ತಕ್ಷಣ ಸರ್ಕಾರ ಹೋಗುತ್ತದೆ ಎಂದಲ್ಲ. ಅದು ರಾಜ್ಯಕ್ಕೆ ಸಂಬಂಧಪಟ್ಟ ಬೇರೆಬೇರೆ ವಿಷಯಗಳ ಮೇಲೆ ಸರ್ಕಾರದ ಪರ್‌ಫಾರ್ಮೆನ್ಸ್ ಮೇಲೆ, ಸರ್ಕಾರದ ನೀತಿ ಮೇಲೆ, ಸರ್ಕಾರದ ಕಾರ್ಯಕ್ರಮದ ಅನುಷ್ಠಾನದ ಮೇಲೆ ಟೀಕೆ ಮಾಡತಕ್ಕ ಒಂದು

ಅವಕಾಶವನ್ನು ಒದಗಿಸಿಕೊಡುತ್ತದೆ. ನಿನ್ನೆ ಇಡೀ ದಿವಸ ಮಾನ್ಯ ವಿರೋಧಿ ಪಕ್ಷದ ನಾಯಕರು ಮಾತನಾಡಿದರು. ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡತಕ್ಕ ಒಂದು ಅವಕಾಶವನ್ನು ಅದು ಕೊಡುತ್ತದೆ. ಅದೇ ಮಹತ್ವ. ನೋ–ಕಾನ್‌ಫಿಡೆನ್ಸ್ ಮೋಷನ್‌ಗೆ ಬೇರೆ ಯಾವುದೇ ಮಹತ್ವ ಇರುವುದಿಲ್ಲ. ಇವತ್ತಿನವರೆಗೆ ಪ್ರಪಂಚದ ಡೆಮಾಕ್ರಾಟಿಕ್ ಇತಿಹಾಸದಲ್ಲಿ ವಿರೋಧಿಪಕ್ಷದ ನೋ–ಕಾನ್‌ಫಿಡೆನ್ಸ್ ಮೋಷನ್ ಪಾಸಾದದ್ದು ಮತ್ತು ಸರ್ಕಾರ ಹೋದಂತಹ ಉದಾಹರಣೆ ಇಲ್ಲ. ಆದ್ದರಿಂದ ಪಕ್ಷಾಂತರ ಆದರೆ ಮಾತ್ರ ಹೋಗೇ ಹೋಗುತ್ತದೆ. ಇಲ್ಲೂ ಹೋಯಿತು. ಅದಕ್ಕಾಗಿ ನಾನು ದೂರದ ಆಸೆ ಎಂದು ಹೇಳಿಕೊಂಡೆ. ಈಗ ಮಾನ್ಯ ಬಂಗಾರಪ್ಪನವರಿಗೆ ಮಾತು ಕೊಟ್ಟುಬಿಡುತ್ತೇನೆ. ನಾಳೆ ಓಟು ಆಗುತ್ತದೆಯಲ್ಲಾ, ಈ ಸರ್ಕಾರ ಹೋಗಬೇಕು ಎಂದು ಹೇಳುವ ಬಗ್ಗೆ, ನಾವೆಲ್ಲಾ ನಮ್ಮ ಪ್ರಾಮಾಣಿಕತೆಯನ್ನು ತೋರಿಸುತ್ತೇವೆ. ಆಗ ನಮಗೆ ನೀವೆಲ್ಲಾ ಸಪೋರ್ಟ್‌ಮಾಡಿ. ನಾವೂ ಓಟು ಹಾಕುತ್ತೇವೆ, ನೀವೂ ಓಟು ಹಾಕಿ. ಆಗ ಗೊತ್ತಾಗಲಿ, ನೀವು ಪ್ರಾಮಾಣಿಕರೋ? ನಾವು ಪ್ರಾಮಾಣಕರೋ ಎಂದು.

(ಈ ಸಂದರ್ಭದಲ್ಲಿ ಕಾಂಗ್ರೆ ಸದಸ್ಯರಾದ ಶ್ರೀ ಎಂ. ಮಹದೇವುರವರು ಏನೋ ಮಾತನಾಡುವುದಕ್ಕೆ ಎದ್ದು ನಿಂತರು)

ಶ್ರೀ ರಾಮಕೃಷ್ಣಹೆಗಡೆ : ಅವರು ಮಾತನಾಡುವಾಗ ನಾನು ತುಟಿ ಪಿಟಕ್ಕೆನ್ನಲಿಲ್ಲ. ಈಗ ನಾನು ಅವರಿಗೆ ಯೀಲ್ಡ್ ಆಗಿಲ್ಲ.

ಅಧ್ಯಕ್ಷರು : ಮಾನ್ಯ ಮಹದೇವುರವರೇ, ಅವರು ತಮ್ಮ ಭಾಷಣ ಮುಗಿಸುತ್ತಿದ್ದಾರೆ. ತಾವು ಕುಳಿತುಕೊಳ್ಳಬೇಕು. ನಾನು ತಮಗೆ ಮಾತನಾಡುವುದಕ್ಕೆ ಅನುಮತಿ ಕೊಟ್ಟಿಲ್ಲ.

ಶ್ರೀ ರಾಮಕೃಷ್ಣಹೆಗಡೆ :- ಮಾನ್ಯ ಅಧ್ಯಕ್ಷರೇ, ಅವರು ಎತ್ತಿದಂಥ ಮತ್ತೊಂದು ಅಂಶವೇನೆಂದರೆ, ನಾನು ಕುತ್ಸಿತ ರಾಜಕಾರಿಣಿ ಅಲ್ಲವೆಂದು ನನ್ನ ಬಗ್ಗೆ ಹೇಳಿದೆ. ಮತ್ತು 'ನಾನು ಮಾತನಾಡುವಾಗ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತೇನೆ, ಆದರ ತತ್ವದ ಬಗ್ಗೆ ಮಾತನಾಡುತ್ತೇನೆ, ಅದನ್ನು ಬಿಟ್ಟು ಬೇರೆ ಮಾತನಾಡುವುದಿಲ್ಲ, "ಪಾಪ" ಎನ್ನುವ ಪದವನ್ನು ಅವರು ನಾಲ್ಕು ಸಲ ಬಳಸಿದರು. ಏಕೆಂದರೆ, ಅವರಷ್ಟು ದೊಡ್ಡ ಮನುಷ್ಯ ನಾನಲ್ಲ. ಅದಕ್ಕೆ ಅವರು ಒಂದು ಉದಾಹರಣೆಯನ್ನೂ ಸಹ ಕೊಟ್ಟರು. ಏನೆಂದರೆ, 1983ನೇ ಇಸವಿಯಲ್ಲಿ ಚುನಾವಣೆಯಾದಾಗ ನಾನು ಇಲ್ಲಿ ಸದಸ್ಯನಾಗಿದ್ದೆನೆ ಎಂದು ಹೌದು, ನಾನು ಸದಸ್ಯನಾಗಿದ್ದೆ. ಆದರೆ, ಈ ಸದನದ ಸದಸ್ಯನಾಗಿರದೆ, ರಾಜ್ಯಸಭೆಯ ಸದಸ್ಯನಾಗಿದ್ದೆ. ಆಗಿನ ಚುನಾವಣೆ ಸಂದರ್ಭದಲ್ಲಿ ನಾನು ನನ್ನ ಪಕ್ಷದ ಪರವಾಗಿ ಪ್ರಚಾರ ಮಾಡುತ್ತಿದ್ದೆ. ನನ್ನ ಹಿಂದಿನ ಆಪ್ತ ಸಹಾಯಕರ ಮಗಳ ಮದುವೆ ಮಣಿಪಾಲದಲ್ಲಿದ್ದುದರಿಂದ ಅಲ್ಲಿಗೆ ಹೋಗಿದ್ದೆ. ನನಗೇನೂ ಆಗ ನಾನು ನಾಯಕನಾಗಬೇಕೆಂಬ ಉದ್ದೇಶವಿರಲಿಲ್ಲ. ಮತದಾನ ನಡೆದು ಆದರ ಎಣಿಕೆಯ ಕಾರ್ಯ ನಡೆಯುತ್ತಿತ್ತು. ನಾನು ಅಲ್ಲಿದ್ದನ್ನು ಕಂಡ ಪತ್ರಕರ್ತರು ' 'ಏನ್ ಸಾರ್, ಚುನಾವಣೆ ಫಲಿತಾಂಶ ಬರುತ್ತಿದೆ, ನೀವು ಇಲ್ಲಿದ್ದೀರಲ್ಲಾ'ಎಂದು ಕೇಳಿದಾಗ, ನಾನು ಹೇಳಿದೆ: 'ನನಗೂ ಆದಕ್ಕೂ ಸಂಬಂಧವಿಲ್ಲ, ಚುನಾವಣೆಗಾಗಿ ನಮ್ಮ ಪಕ್ಷದ ಪರವಾಗಿ ಎಷ್ಟುಕೆಲಸ ಮಾಡಿ ಮುಗಿಸಬೇಕಾಗಿತ್ತೋ ಅಷ್ಟನ್ನು ಮಾಡಿ ಮುಗಿಸಿದೆ' ಎಂದೆ. ಅನಂತರ, ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿತ್ತು. ಅಥವಾ 'ಇವರು ಬರೀ ಪುಕ್ಕಟೆ ಮಾತನಾಡುತ್ತಾರೆ' ಎಂದು ನನ್ನ ಬಗ್ಗೆ ಹೇಳುವವರಿಗೆ ನಾನು ಏನು ಹೇಳುತ್ತೇನೆಂದರೆ: 'ನಾನು ಬಯಸಿದ್ದರೆ ವಿಧಾನಪರಿಷತ್ತಿಗೆ ಆರಿಸಿ ಬರಬಹುದಿತ್ತು,

ಆದರೆ, ಹಾಗೆ ನಾನು ಮಾಡಲಿಲ್ಲ. ಉಪಚುನಾವಣೆಯಲ್ಲಿ ಕನಕಪುರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಆರಿಸಿ ಬನ್ನಿ ಎಂದು ಮಾನ್ಯ ಸಿಂಧ್ಯ ಹಾಗೂ ಇನ್ನಿತರರು ಹೇಳಿದರು. ನಾನು ಎಂತಹ ವ್ಯಕ್ತಿ ಎಂದು ಅವರಿಗೆ ಹೇಗೆ ಗೊತ್ತಾಗುತ್ತದೆ? 1977ನೇ ಇಸವಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಒಂದು ಮತಕ್ಷೇತ್ರದಿಂದ ಲೋಕಸಭಾ ಸ್ಥಾನಕ್ಕಾಗಿ ನಿಂತೆ. ಲೋಕಸಭಾ ಚುನಾವಣೆಯಲ್ಲಿ 25,000 ಮತಗಳ ಅಂತರದಿಂದ ಸೋತೆ. ಏಕೆಂದರೆ, ಕರ್ನಾಟಕದ ಖಾನಾಪುರ ಮತ್ತು ಸೂಪಾ ಗಡಿ ವಿಚಾರದಲ್ಲಿ ಆ ಕ್ಷೇತ್ರದ ಜನರಿಗೆ ಅಸಮಾಧಾನವಿತ್ತು. ಇದರ ಪರಿಣಾಮವಾಗಿ ನೂರಕ್ಕೆ ನೂರರಷ್ಟು ಮರಾಠಿ ಭಾಷೆ ಮಾತನಾಡತಕ್ಕಂಥವರು ನನ್ನ ವಿರುದ್ಧವಾಗಿ ಓಟು ಹಾಕಿದರು. ಆ ಹೊತ್ತಿನಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯನಾಗಿದ್ದಷ್ಟೇ ಅಲ್ಲ, ಅಲ್ಲಿ ವಿರೋಧಪಕ್ಷದ ನಾಯಕನೂ ಸಹ ಆಗಿದ್ದೆ. ಯಾವ ದಿವಸ ನಾನು ಲೋಕಸಭಾ ಚುನಾವಣೆಯಲ್ಲಿ ಸೋತೆನೋ, ಅದೇ ದಿವಸ ನಾನು ನನ್ನ ವಿಧಾನ ಪರಿಷತ್ತಿನ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟೆ. ಏಕೆಂದರೆ, ಯಾವಾಗ ನಾನು ಡೈರೆಕ್ಟ್ ಎಲೆಕ್ಷನ್‌ನಲ್ಲಿ ಸೋತು, ಇನ್‌ಡೈರೆಕ್ಟ್ ಎಲೆಕ್ಷನ್‌ನಲ್ಲಿ ಆರಿಸಿ ಬಂದಿದ್ದ ನನಗೆ ನಾನಿದ್ದ ಸ್ಥಾನದಲ್ಲಿ ಮುಂದುವರೆಯುವುದಕ್ಕೆ ನೈತಿಕ ಅಧಿಕಾರ ಇಲ್ಲ' ಎಂದು ನನಗನ್ನಿಸಿತು. ಬಹುಶಃ ಇದು ಬಂಗಾರಪ್ಪನವರಿಗೆ ಅರ್ಥವಾಗಲಿಕ್ಕಿಲ್ಲ. ಏಕೆಂದರೆ, ನನ್ನದು ಶುದ್ಧ ವ್ಯಾಕರಣ, ಅವರದು ಅಶುದ್ಧ ವ್ಯಾಕರಣವೆಂದು ಅವರೇ ಹೇಳಿಕೊಂಡಿದ್ದಾರೆ. ನಾನೂ ಕೂಡ ಜನಸಾಮಾನ್ಯರ ಜೊತೆ ಮಾತನಾಡುವಾಗ ಈ ಭಾಷೆ ಬಳಸುವುದಿಲ್ಲ. ಜನಸಾಮಾನ್ಯರ ಜೊತೆ ಅವರಿಗೆ ಒಳ್ಳೆಯ ಸಂಬಂಧವಿರಬಹುದು. ಆದರೆ, ನನಗೂ ಕೂಡ ಸಾಕಷ್ಟು ಸಂಬಂಧವಿದೆ. ಪ್ರತಿದಿವಸ ಬೆಳಿಗ್ಗೆ 6 ಗಂಟೆಯಿಂದ 7 ಗಂಟೆಯವರೆಗೆ ನನ್ನ ಮನೆಯ ಮುಂದೆ ನಾನು ನೂರಾರು ಜನರನ್ನು ವೈಯಕ್ತಿಕವಾಗಿ ಇಲ್ಲವೇ ಗುಂಪಾಗಿ ಭೇಟಿಯಾಗುತ್ತಿದ್ದೆ. ನನಗೆ ಜನಸಂಪರ್ಕ ಇಲ್ಲವೆಂದು ತಾವು ತಿಳಿದುಕೊಂಡಿದ್ದರೆ ಅದು ಬೇರೆ ಮಾತು. ಅವರು ಮತ್ತೊಂದು ಮಾತು ಹೇಳಿದರು. ಏನೆಂದರೆ, ಹುಳ ಮತ್ತು ಹಾವು ಎಂದು. ಅವರು ತಮ್ಮನ್ನು ತಾವೇ ಹುಳಕ್ಕೆ ಹೋಲಿಸಿಕೊಂಡು ನನ್ನನ್ನು ಹಾವಿಗೆ ಹೋಲಿಸಿದರೆ ನನ್ನದೇನೂ ಆಕ್ಷೇಪವಿಲ್ಲ.

ಶ್ರೀ ಎಸ್. ಬಂಗಾರಪ್ಪ: ಬರಿ 'ಹಾವು' ಎಂದು ಹೆಸರಿಟ್ಟುಕೊಳ್ಳಲು ತಮಗೆ ಇಷ್ಟವಿಲ್ಲದಿದ್ದರೆ ನಾಗರಹಾವು, ಹೆಬ್ಬಾವು ಎಂದು ಹೆಸರಿಟ್ಟುಕೊಳ್ಳಬಹುದು.

ಶ್ರೀ ರಾಮಕೃಷ್ಣಹೆಗಡೆ: ಕೊನೆಯದಾಗಿ ನಾನು ಹೇಳುವುದು ಇಷ್ಟೇ; ಕಾಂಗ್ರೆಸ್ ಪಕ್ಷದ ಆಂತರಿಕ ವ್ಯವಹಾರವು ಅವರಿಗೇ ಬಿಟ್ಟಿರತಕ್ಕದ್ದು. ಸರ್ಕಾರದ ವೈಫಲ್ಯದ ಬಗ್ಗೆ ಮತ್ತು ವಿವಿಧ ಖಾತೆಗಳನ್ನು ವಹಿಸಿಕೊಂಡಿರುವ ಜವಾಬ್ದಾರಿ ಮಂತ್ರಿಗಳು ಈ ಒಂದು ರಾಜಕೀಯದಲ್ಲಿ ತಮ್ಮ ಖಾತೆಯ ಬಗ್ಗೆ, ತಮ್ಮ ಆಡಳಿತದ ವಿಷಯಕ್ಕೆ ಸಂಬಂಧಪಟ್ಟಂತೆ ಅಭಿವೃದ್ಧಿ ಕೆಲಸಗಳ ಬಗ್ಗೆ ಸಾಕಷ್ಟು ಲಕ್ಷ್ಯವನ್ನು ವಹಿಸದಿರುವ ಬಗ್ಗೆ, ಇದರಿಂದ ಕರ್ನಾಟಕ ರಾಜ್ಯದ ಜನತೆಗೆ ಆಗಿರುವ ಅನ್ಯಾಯದ ಬಗ್ಗೆ, ರಾಜ್ಯದ ಜನತೆಯ ಹಿತಕ್ಕೆ ಆಗಿರುವ ಧಕ್ಕೆಯ ಬಗ್ಗೆ ಬೆಳಕನ್ನು ಚೆಲ್ಲುವುದಕ್ಕಾಗಿ ನಾವು ಇವತ್ತು ಅವಿಶ್ವಾಸ ನಿರ್ಣಯವನ್ನು ತಂದಿದ್ದೇವೆ. ಈ ಸರ್ಕಾರ ಹೋಗಬೇಕೆಂದು ನಾವು ಓಟನ್ನು ಕೊಡುತ್ತೇವೆ; ಈ ಸರ್ಕಾರ ಹೋಗಬೇಕೆಂದು ನಾವು ಹೇಳುತ್ತೇವೆ. ಅದಕ್ಕೆ ಅವರ ಬೆಂಬಲವನ್ನು ಕೇಳುತ್ತೇವೆ. ಇನ್ನು ಅಧ್ಯಕ್ಷರೇ, ತಾವು ಅವಕಾಶವನ್ನು ಕೊಡುವುದಾದರೆ ನನ್ನ ಕೊನೆಯ ವಿಷಯವಿದೆ. ಅದೇನೆಂದರೆ, ನಾನು ಮಣಿಪಾಲದಲ್ಲಿದ್ದೆ ಎನ್ನುವ ವಿಷಯವನ್ನು ಅವಾಗ ಪೂರ್ಣವಾಗಿ ಮುಗಿಸಿರಲಿಲ್ಲ. ಅಷ್ಟರಲ್ಲಿ ಯಾರೋ ಮಧ್ಯೆ ಪ್ರವೇಶಿಸಿ ಮಾತನಾಡಿದ್ದರಿಂದ ನಾನು ಅದನ್ನು ಅಲ್ಲಿಗೇ ನಿಲ್ಲಿಸಿದ್ದೆ. ಅದರ ಬಗ್ಗೆ

ನಾನು ಒಂದು ವಿಷಯವನ್ನು ಹೇಳುತ್ತೇನೆ. ನನ್ನನ್ನು ನಮ್ಮ ಪಕ್ಷದವರೇ ಒಮ್ಮತದಿಂದ ಆರಿಸಿದ್ದರು. ಡಿಲ್ಲಿಯಲ್ಲಿದ್ದವರು ನನ್ನನ್ನು ಆರಿಸಿ ನೇಮಕ ಮಾಡಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ:-ಎಲ್ಲಾರಿಗೂ ಆಯಾಯ ಪಕ್ಷದವರೇ ಆರಿಸಿ ಕಳಿಸುವುದು. ಹಾಗಿದ್ದಮೇಲೆ ಈ ರೀತಿಯಾದ ವ್ಯಾಖ್ಯಾನವೇಕೆಬೇಕು? ಮೆಂಬರ್ ಆಗದೇ ಇರುವವರೇ ಆರಿಸಿ ಬರಬೇಕಾದರೆ ಇನ್ನು ಮೆಂಬರ್ ಆಗಿರುವವರನ್ನು ಆರಿಸುವುದರಲ್ಲಿ ನಿಮ್ಮದೇನು ರೀಆಕ್ಷನ್ ಬೇಕು?

ವಿಷಯ : - ವಿದ್ಯುತ್ ದರಗಳ ಪರಿಷ್ಕರಣೆ ಬಗ್ಗೆ.

ಶ್ರೀ ಆರ್.ವಿ. ದೇಶಪಾಂಡೆ(ವಿರೋಧ ಪಕ್ಷದ ನಾಯಕರು) : - ಅಧ್ಯಕ್ಷರೇ, ನಿನ್ನೆ ಮಾನ್ಯ ಮುಖ್ಯಮಂತ್ರಿಗಳ ಮತ್ತು ಉಪಮುಖ್ಯಮಂತ್ರಿಗಳ ಗಮನಕ್ಕೆ ಕೆ.ಇ.ಬಿನವರು ವಿದ್ಯುತ್‌ನ ಬೆಲೆಯನ್ನು ಹೆಚ್ಚು ಮಾಡಿರುವ ಬಗ್ಗೆ ಈ ಶಾಸನ ಸಭೆಯಲ್ಲಿ ಪ್ರಸ್ತಾಪ ಮಾಡಿತಂದಿದ್ದೆ. ಆದಕ್ಕೆ ಅವರು ಇಂದು ಸ್ಟೇಟ್‌ಮೆಂಟನ್ನು ಮಾಡುತ್ತೇನೆಂದು ಹೇಳಿದ್ದರು. ಇವತ್ತು ಅವರು ತಯಾರಿದ್ದರೆ ಹೇಳಿಕೆ ನೀಡಲಿ.

ಶ್ರೀ ಎಸ್.ಎಂ. ಕೃಷ್ಣ(ವಿದ್ಯುತ್ ಸಚಿವರು ಮತ್ತು ಉಪಮುಖ್ಯಮಂತ್ರಿಯವರು) : - ಮಾನ್ಯ ಸದಸ್ಯರುಗಳಿಗೆ ತಿಳಿಸಿರುವಂತೆ ರಾಜ್ಯ ಸರ್ಕಾರವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಿವಿಧ ವರ್ಗಗಳ ಬಳಕೆದಾರರಿಗೆ ದಿನಾಂಕ 1-8-1993ರಿಂದ ವಿದ್ಯುತ್ ದರಗಳನ್ನು ಪರಿಷ್ಕರಿಸಲು ಅನುಮತಿ ನೀಡಿತ್ತು. ವಿದ್ಯುತ್ (ಸರಬರಾಜು) ಕಾಯಿದೆ 1948ರ ಪ್ರಕಾರ ಶಾಸನ ರೂಪದಲ್ಲಿ ನಿಗದಿ ಪಡಿಸಿರುವ ಕನಿಷ್ಠ ಶೇಕಡ 3ರಷ್ಟು ರಿಟರ್ನ್‌ನನ್ನು ತನ್ನ ಸ್ಥಿರಾಸ್ತಿಗಳ ಮೇಲೆ ಮಂಡಳಿಯು ಪಡೆಯಲು ಸಾಧ್ಯವಾಗುವಂತೆ ಈ ರೀತಿಯಾಗಿ ಅನುಮತಿಯನ್ನು ನೀಡಲಾಗಿತ್ತು. ಈ ವಿದ್ಯುತ್ ಪರಿಷ್ಕರಣೆಯನ್ನು ಜಾರಿಗೊಳಿಸುವಾಗ ಆರ್ಥಿಕವಾಗಿ ದುರ್ಬಲವಾಗಿರುವ ವರ್ಗಗಳಿಗೆ ಮತ್ತು ಕೃಷಿ ಕ್ಷೇತ್ರಗಳಿಗೆ ಹೊರೆಯಾಗದಂತೆ ನೋಡಿಕೊಳ್ಳಲಾಗಿತ್ತು. ಈ ಪ್ರಕಾರವಾಗಿ ಭಾಗ್ಯಜ್ಯೋತಿ, ಕುಟೀರಜ್ಯೋತಿ ಮತ್ತು ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ದರಗಳನ್ನು ವಿದ್ಯುತ್ ದರಗಳ ಪರಿಷ್ಕರಣೆಯ ಸಮಯದಲ್ಲಿ ಹೆಚ್ಚಿಸಿಲ್ಲ. ಅದೇ ಪ್ರಕಾರ ಬೀದಿ ದೀಪಗಳಿಗೂ ಸಹಾ ವಿದ್ಯುತ್ ದರಗಳ ಹೆಚ್ಚಳದಿಂದ ವಿನಾಯ್ತಿ ನೀಡಲಾಗಿತ್ತು.

ವಿದ್ಯುತ್ ದರಗಳ ಪರಿಷ್ಕರಣೆಯಲ್ಲಿ ಗೃಹ ದೀಪದ ಬಳಕೆದಾರರು ಮತ್ತು ಸರ್ವ ವಿದ್ಯುತ್ ಗೃಹ(ಎ.ಇ.ಹೆಚ್) ಬಳಕೆದಾರರಿಗೂ ವಿದ್ಯುತ್ ದರಗಳನ್ನು 1-8-1993ರಿಂದ ಪರಿಷ್ಕರಿಸಲಾಗಿತ್ತು. ಗೃಹ ದೀಪದ ಬಳಕೆದಾರರಿಗೆ 50 ಯೂನಿಟ್ಟುಗಳವರೆಗೆ ವಿದ್ಯುತ್ ದರವನ್ನು ಪ್ರತಿ ಯೂನಿಟ್ಟಿಗೆ 55 ಪೈಸೆಯಿಂದ 65 ಪೈಸೆಗೂ, 50 ಯೂನಿಟ್ಟಿನಿಂದ 100 ಯೂನಿಟ್ಟುಗಳವರೆಗೆ ಪ್ರತಿ ಯೂನಿಟ್ಟಿಗೆ 65 ಪೈಸೆಯಿಂದ 80 ಪೈಸೆಗೂ ಮತ್ತು 100 ಯೂನಿಟ್ಟುಗಳು ಮೀರಿದ ಬಳಕೆಗೆ ಪ್ರತಿ ಯೂನಿಟ್ಟಿಗೆ 75 ಪೈಸೆಯಿಂದ ರೂ 1ಕ್ಕೆ ಹೆಚ್ಚಳಗೊಳಿಸಲಾಗಿತ್ತು. ಸರ್ವ ವಿದ್ಯುತ್‌ಗೃಹ (ಎ.ಇ.ಹೆಚ್) ಬಳಕೆದಾರರ ಬಗ್ಗೆ ಈ ಮುಂಚೆ ಇದ್ದ ವಿದ್ಯುತ್ ದರಗಳು - 200 ಯುನಿಟ್ಟುಗಳವರೆಗೆ ಪ್ರತಿ ಯೂನಿಟ್ಟಿಗೆ ರೂ. 1,201ರಿಂದ 400 ಯೂನಿಟ್ಟುಗಳವರೆಗೆ ಪ್ರತೀ ಯೂನಿಟ್ಟಿಗೆ ರೂ 1.50 ಮತ್ತು 400 ಯೂನಿಟ್ಟಿಗೂ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್ ರೂ 2 ಈ ದರಗಳನ್ನು ಅನುಕ್ರಮವಾಗಿ ಪ್ರತೀ ಯೂನಿಟ್ಟಿಗೆ ರೂ. 1.25, ಪ್ರತೀ ಯೂನಿಟ್ಟಿಗೆ ರೂ. 2 ಮತ್ತು ಪ್ರತೀ ಯೂನಿಟ್ಟಿಗೆ ರೂ. 2.50 ಗಳಿಗೆ ಹೆಚ್ಚಿಸಲಾಗಿತ್ತು.

ಸರ್ಕಾರವು ಎರಡೂ ಸದನಗಳ ಮಾನ್ಯ ಶಾಸಕರುಗಳು ಸದನಗಳ ಒಳಗೆ ಮತ್ತು ಹೊರಗೆ ನೀಡಿರುವ ಅಮೂಲ್ಯ ಸಲಹೆಗಳನ್ನು ಪರಿಗಣಿಸಿ ಮತ್ತು ವಿದ್ಯುತ್ ಬಳಕೆದಾರರು ಮಾಡಿರುವ